Swabhimani Sahakari
Pages : 42 / 20₹


# ಸ್ವಾಭಿಮಾನಿ ಸಹಕಾರಿ

ಸೌಹಾರ್ದ ಸಹಕಾರಿ ಚಳುವಳಿಯ
ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

ಸ್ವಾಯತ್ತತೆ,
ಸ್ವಯಂ ಆಡಳಿತ,
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

ಸೌಹಾರ್ದ ಸಹಕಾರಿ ಕಾಯ್ದೆಯ
ರಜತ ಮಹೋತ್ಸವ 2025

Volume - 22
Issue - 08
August - 2025



ಆಗಸ್ಟ್ 26 ಗೌರಿ
27 ಗಣೇಶ ಚತುರ್ಥಿ

ಗಜವದನ ಹೇ....ರಂಭ
ವಿಜಯಧ್ವಜ ಶತರಥಿ ಪ್ರತಿಭ
ಏಕದಂತ ವೈಕಲ್ಯಾಂತ
ವೃದ್ಧಿ ಸಿದ್ಧಿದ್ವಯರಾಕಾಂತ
ಗಜವದನ...ಹೇ...ರಂಭ
ಮೂಷಕವಾಹನ ಸರ್ಪಭೂಷ
ಅಡಿಗಡಿಗೆ ನಿನ್ನನು ನೆನೆದು
ವಂದಿಪೆವು ಶ್ರೀಗಣೇಶ




ರಾಷ್ಟ್ರೀಯ ಸಹಕಾರ ನೀತಿಯ ಮೂಲಕ, ಪ್ರವಾಸೋದ್ಯಮ, ಟ್ಯಾಕ್ಸಿ ಸೇವೆ, ವಿಮೆ ಮತ್ತು ಹಸಿರು ಇಂಧನದಂತಹ ಕ್ಷೇತ್ರಗಳಲ್ಲಿ ಸಹಕಾರ ಸಂಘಗಳನ್ನು ಸ್ಥಾಪಿಸುವುದು. 2034ರ ವೇಳೆಗೆ 50 ಕೋಟಿ ಸಹಕಾರ ಸದಸ್ಯತ್ವದ ಗುರಿ ಹೊಂದಲಾಗಿದೆ.




ಆಗಸ್ಟ್ ೦8
ವರಮಹಾಲಕ್ಷ್ಮೀ ವ್ರತ



ಆಗಸ್ಟ್ 16
ಕೃಷ್ಣ ಜನ್ಮಾಷ್ಟಮಿ



ಆಗಸ್ಟ್ 15
ಸ್ವಾತಂತ್ರ್ಯ ದಿನಾಚರಣೆ

**24ನೇ ವಾರ್ಷಿಕ ಸಾಮಾನ್ಯ ಸಭೆ** ದಿನಾಂಕ: 22-08-2025 ಶುಕ್ರವಾರ ಸಮಯ: ಬೆಳಗ್ಗೆ 10 ಗಂಟೆಗೆ
ಗಾಯತ್ರಿ ವಿಹಾರ (ಗಾಯತ್ರಿ ಗ್ರ್ಯಾಂಡ್), ಗೇಟ್ ನಂ. 4, ಅರಮನೆ ಮೈದಾನ, ರಮಣ ಮಹರ್ಷಿ ರಸ್ತೆ (ಬಳ್ಳಾರಿ ರಸ್ತೆ), ಬೆಂಗಳೂರು–560080

ಸೌಹಾರ್ದ ಸಹಕಾರಿಗಳ ಸಂಖ್ಯೆ: 6546

ಸೌಹಾರ್ದ ಇ ಸ್ಟಾಂಪಿಂಗ್ ಕೇಂದ್ರಗಳ ಸಂಖ್ಯೆ: 1730



ಜಿ. ನಂಜನಗೌಡ

ಆತ್ಮೀಯ ಸಹಕಾರಿ ಬಂಧುಗಳಿಗೆ 79ನೇ ಸ್ವಾತಂತ್ರ ದಿನಾಚರಣೆಯ, ಶ್ರೀ ಕೃಷ್ಣ ಜನ್ಮಾಷ್ಟಮಿಯ, ಸ್ವರ್ಣಗೌರಿ ಹಾಗೂ ವರಸಿದ್ಧಿ ವಿನಾಯಕ ಹಬ್ಬಗಳ ಶುಭ ಹಾರೈಕೆಗಳು. ಪ್ರತಿಯೊಂದು ಹಬ್ಬವೂ ನಮಗೆ ಹೆಚ್ಚಿನ ಸ್ಫೂರ್ತಿಯನ್ನು ತುಂಬಿ ಉತ್ಸಾಹವನ್ನು ಹೆಚ್ಚಿಸುವುದಕ್ಕಾಗಿ, ನಮ್ಮೆಲ್ಲರ ಬಾಂಧವ್ಯವನ್ನು ಬೆಸೆಯುವುದಕ್ಕಾಗಿ, ನಮ್ಮ ಕಾರ್ಯ ಕ್ಷಮತೆಯನ್ನು ಹೆಚ್ಚಿಸುವುದಕ್ಕಾಗಿ ಆಚರಿಸುವ ಸಂಪ್ರದಾಯಗಳು. ಎಲ್ಲರಿಗೂ ಶುಭವಾಗಲಿ.

# ಅಂತರರಾಷ್ಟ್ರೀಯ ಸಹಕಾರಿ ವರ್ಷ ಹಾಗೂ ಸೌಹಾರ್ದ ಸಹಕಾರಿ ಕಾಯ್ದೆಯ ರಜತ ಮಹೋತ್ಸವ ಆಚರಣೆಯಲ್ಲಿ ಸಹಕಾರಿಗಳ ಉತ್ಸಾಹ ಸ್ವಾಗತಾರ್ಹ.

ಆತ್ಮೀಯ ಸಹಕಾರಿ ಬಂಧುಗಳಿಗೆ 79ನೇ ಸ್ವಾತಂತ್ರ ದಿನಾಚರಣೆಯ, ಶ್ರೀ ಕೃಷ್ಣ ಜನ್ಮಾಷ್ಟಮಿಯ, ಸ್ವರ್ಣಗೌರಿ ಹಾಗೂ ವರಸಿದ್ಧಿ ವಿನಾಯಕ ಹಬ್ಬಗಳ ಶುಭ ಹಾರೈಕೆಗಳು. ಪ್ರತಿಯೊಂದು ಹಬ್ಬವೂ ನಮಗೆ ಹೆಚ್ಚಿನ ಸ್ಫೂರ್ತಿಯನ್ನು ತುಂಬಿ ಉತ್ಸಾಹವನ್ನು ಹೆಚ್ಚಿಸುವುದಕ್ಕಾಗಿ, ನಮ್ಮೆಲ್ಲರ ಬಾಂಧವ್ಯವನ್ನು ಬೆಸೆಯುವುದಕ್ಕಾಗಿ, ನಮ್ಮ ಕಾರ್ಯ ಕ್ಷಮತೆಯನ್ನು ಹೆಚ್ಚಿಸುವುದಕ್ಕಾಗಿ ಆಚರಿಸುವ ಸಂಪ್ರದಾಯಗಳು. ಎಲ್ಲರಿಗೂ ಶುಭವಾಗಲಿ.

ವಿಶ್ವ ಸಂಸ್ಥೆಯು 2025ನೇ ವರ್ಷವನ್ನು **"ಅಂತರರಾಷ್ಟ್ರೀಯ ಸಹಕಾರಿ ವರ್ಷ"ವನ್ನಾಗಿ** ಘೋಷಿಸಿ, ಪರಿಣಾಮಕಾರಿ ಆಚರಣೆಗಾಗಿ ಅನೇಕ ಸಲಹೆ ಹಾಗೂ ಮಾರ್ಗದರ್ಶನಗಳನ್ನು ನೀಡಿದೆ. ರಾಜ್ಯದ ಸೌಹಾರ್ದ ಸಹಕಾರಿ ಕಾಯ್ದೆಗೆ 25 ವರ್ಷಗಳು ತುಂಬಿದ ಹಿನ್ನೆಲೆಯಲ್ಲಿ ರಾಜ್ಯದಾದ್ಯಂತ ಎಲ್ಲ ಸಹಕಾರಿಗಳು ಈ ವರ್ಷವನ್ನು **"ರಜತ ಮಹೋತ್ಸವ"** ವರ್ಷವನ್ನಾಗಿ ಆಚರಿಸಲು ಪ್ರಾರಂಭಿಸಿವೆ. ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿಯೂ ಸಹ ರಾಜ್ಯದಾದ್ಯಂತ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಈ ವರ್ಷ ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಯ ಪರ್ವವನ್ನಾಗಿಸುವುದು ನಮ್ಮೆಲ್ಲರ ಜವಾಬ್ದಾರಿ ಎಂದು ನಾನು ಭಾವಿಸುತ್ತೇನೆ.

ಸೌಹಾರ್ದ ಸಹಕಾರಿ ಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿಯತ್ತ ಸಹಕಾರಿಗಳ ಹೆಜ್ಜೆ, ಪಾರದರ್ಶಕ ಹಾಗೂ ವೃತ್ತಿಪರ ಆಡಳಿತ, ಸದಸ್ಯರ ಬೇಡಿಕೆಗಳಿಗೆ ಸ್ಪಂದನೆ, ಸಮಾಜ ಮುಖಿಯಾಗಿ ಕಾರ್ಯ, ಆರ್ಥಿಕ ಶಿಸ್ತು, ಉತ್ತಮ ಆಂತರಿಕ ಶಿಸ್ತು ನಿರ್ವಹಣೆ, ಸ್ವಾಭಾವಿಕ ಹಾಗೂ ಮಾನವೀಯ ಸಂಪನ್ಮೂಲಗಳ ಸದ್ಬಳಕೆ, ಆಧುನಿಕ ತಂತ್ರಜ್ಞಾನಗಳ ಬಳಕೆ, ಪ್ರಚಲಿತ ವಿಷಯಗಳ ನಿರಂತರ ಮಾಹಿತಿಗಳನ್ನು ಹೊಂದುವುದು ಹಾಗೂ ಸದಸ್ಯರ ಜೊತೆಗೆ ನಿರಂತರ ಸಂಪರ್ಕ ಹೊಂದುವುದು. ಇತ್ಯಾದಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು ಅಭಿವೃದ್ಧಿಗೆ ಪೂರಕ ಎನಿಸುತ್ತದೆ.

ಸಹಕಾರಿ ಕ್ಷೇತ್ರಕ್ಕೆ 121 ವರ್ಷಗಳು. ಸೌಹಾರ್ದ ಸಹಕಾರಿ ಕ್ಷೇತ್ರಕ್ಕೆ 25 ವರ್ಷಗಳು. ಇದುವರೆಗೆ ಈ ಕ್ಷೇತ್ರ ಸಾಕಷ್ಟು ಸವಾಲುಗಳನ್ನು ಎದುರಿಸಿದೆ. ಎಂತಹ ಸಂಕಷ್ಟ ಕಾಲದಲ್ಲೂ ಸಹಕಾರಿ ಸಂಸ್ಥೆಗಳು ಉತ್ತಮವಾಗಿ ಕಾರ್ಯನಿರ್ವಹಿಸಿ ತಮ್ಮ ಅಗತ್ಯತೆಯನ್ನು, ತಮ್ಮ ಅಸ್ತಿತ್ವವನ್ನು ಎತ್ತಿ ತೋರಿಸಿವೆ. ಸಹಕಾರ ಕ್ಷೇತ್ರದಿಂದಲೇ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿ ಸಾಧ್ಯ ಎಂದಿರುವ ಕೇಂದ್ರ ಸರಕಾರ ಕೇಂದ್ರದಲ್ಲಿ **"ಸಹಕಾರ ಸೇ ಸಮೃದ್ಧಿ"** ಎಂಬ ಘೋಷಣೆಯೊಂದಿಗೆ ಪ್ರತ್ಯೇಕ ಸಹಕಾರ ಸಚಿವಾಲಯ ಹಾಗೂ ಸಹಕಾರ ವಿಷಯ ಅಧ್ಯಯನಕ್ಕೆ ಹೆಚ್ಚು ಹೊತ್ತು ಕೊಡುವ ನಿಟ್ಟಿನಲ್ಲಿ **"ತ್ರಿಭುವನ ಸಹಕಾರ ವಿಶ್ವವಿದ್ಯಾಲಯ"ವನ್ನು** ಪ್ರಾರಂಭಿಸಿದೆ. ಸಹಕಾರ ಕ್ಷೇತ್ರದಲ್ಲಿ ಸಹಕಾರ ಶಿಕ್ಷಣ, ತರಬೇತಿಯನ್ನು ನೀಡಲು ಎಲ್ಲ ಹಂತಗಳಲ್ಲೂ ವ್ಯವಸ್ಥೆ ಮಾಡಲಾಗುತ್ತಿದೆ.

ದೇಶಕ್ಕೆ ಒಂದು **"ರಾಷ್ಟ್ರೀಯ ಸಹಕಾರ ನೀತಿ"ಯನ್ನು** ರೂಪಿಸಲಾಗಿದೆ. **"ಒಂದು ದೇಶ ಒಂದು ಸಹಕಾರ ನೀತಿ"ಯನ್ವಯ** ಕಾರ್ಯನಿರ್ವಹಿಸಿದ್ದಲ್ಲಿ ಸಹಕಾರ ಕ್ಷೇತ್ರ ಉತ್ತಮವಾಗಿ ಕಾರ್ಯನಿರ್ವಹಿಸಲು ಸಾಧ್ಯ ಹಾಗೂ ದೇಶದ ಸುಸ್ಥಿರ ಅಭಿವೃದ್ಧಿಯಲ್ಲಿ ಮಹತ್ವದ ಪಾತ್ರವನ್ನು ನಿರ್ವಹಿಸಲು ಸಾಧ್ಯವಾಗುತ್ತದೆ. ಸಹಕಾರ ಕ್ಷೇತ್ರದ ಮೂಲಕ ಅನೇಕ ಹೊಸ ಹೊಸ ಯೋಜನೆಗಳನ್ನು ಪ್ರಾರಂಭಿಸಿ ಸಹಕಾರ ಕ್ಷೇತ್ರಕ್ಕೆ ಹೊಸ ಆಯಾಮಗಳನ್ನು ನೀಡುತ್ತಿರುವುದು ಈ ಕ್ಷೇತ್ರದ ಅಭಿವೃದ್ಧಿಗೆ ಪೂರಕವಾಗಿದೆ. ಒಟ್ಟಾರೆಯಾಗಿ ಸಹಕಾರ ಕ್ಷೇತ್ರ ದೇಶದ ಅಭಿವೃದ್ಧಿಯಲ್ಲಿ ಮಹತ್ವದ ಪಾತ್ರವನ್ನು ನಿರ್ವಹಿಸುತ್ತಿದೆ. ಬನ್ನಿ, ನಾವೆಲ್ಲರೂ ಈ ಅಭಿವೃದ್ಧಿ ಪರ್ವದಲ್ಲಿ ಸಕ್ರೀಯವಾಗಿ ಭಾಗಿಯಾಗೋಣ.

ಸ್ವಾಭಿಮಾನಿ ಸಹಕಾರಿ ಸಂಪಾದಕ ಮಂಡಳಿ

ಶ್ರೀ ಜಿ. ನಂಜನಗೌಡ
ಗೌರವ ಅಧ್ಯಕ್ಷರು
ಶ್ರೀ ಎ.ಆರ್. ಪ್ರಸನ್ನಕುಮಾರ
ಗೌರವ ಸದಸ್ಯರು
ಶ್ರೀ ಶರಣಗೌಡ ಜಿ. ಪಾಟೀಲ
ಸಂಪಾದಕರು
ಶ್ರೀ ವಿ.ಜೆ. ಕಾರಕೂನ
ಸಂಚಾಲಕರು
ಶ್ರೀ ಮಹಾಂತಪ್ಪ ಎಸ್. ಎಮ್
ಸದಸ್ಯರು

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,
"ಸೌಹಾರ್ದ ಸಹಕಾರಿ ಸೌಧ" ನಂ.68, ಒಂದನೇ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರ, ಬೆಂಗಳೂರು - 560055
ದೂರವಾಣಿ/ ಫ್ಯಾಕ್ಸ್ : 080-23378375-80, 23474408,23573291
ಇ-ಮೇಲ್ : souharda@souharda.coop
swabhimani@souharda.coop
ವೆಬ್‌ಸೈಟ್ : www.souharda.coop
**youtube :** https://www.youtube.com/@souharda471

## ಒಳಪುಟಗಳಲ್ಲಿ. . .

ಅಧ್ಯಕ್ಷರ ನುಡಿ.......... 2
ಸಂಪಾದಕೀಯ.......... 3
ಜ್ಞಾನ ಜ್ಯೋತಿ.......... 4
ಸಂಯುಕ್ತ ಸಹಕಾರಿಗಳ ಸಮಾಚಾರಗಳು .... .......... 05-26
ತರಬೇತಿ ಹಾಗೂ ಶಿಕ್ಷಣ ವಿಭಾಗದ 2025-26ನೇ ಸಾಲಿನ ಕಾರ್ಯಕ್ರಮಗಳ ಮುನ್ನೋಟ .......... 27-33
ಸೌಹಾರ್ದ ಸಹಕಾರಿಗಳ ಸಮಾಚಾರಗಳು .... .......... 34-36
**ಲೇಖನಗಳು :**
ಸೌಹಾರ್ದ ಸಹಕಾರಿಗಳಲ್ಲಿ ಲೆಕ್ಕಪರಿಶೋಧನೆ ನಂತರದ ಕಾರ್ಯಗಳು .......... 37-39
ಕಾರ್ಪೊರೇಟ್ ಆಡಳಿತ (Governance) ಮತ್ತು ಸಹಕಾರ .......... 40-42

# ಸಂಪಾದಕೀಯ

## ವಾರ್ಷಿಕ ಸಾಮಾನ್ಯ ಸಭೆಗಳು ಸಹಕಾರಿಗಳ ಆರ್ಥಿಕ ಅಭಿವೃದ್ಧಿಗೆ ಪೂರಕವಾಗಿರಲಿ.

ರಾಜ್ಯದ ಎಲ್ಲ ಸಹಕಾರಿ ಸಂಸ್ಥೆಗಳು ಸೆಪ್ಟೆಂಬರ್ 25ನೇ ದಿನಾಂಕದ ಒಳಗಾಗಿ ತಮ್ಮ ವಾರ್ಷಿಕ ಸಾಮಾನ್ಯ ಸಭೆಗಳನ್ನು ಜರುಗಿಸಬೇಕು. ಇದು ಕಾನೂನು ರೀತಿ ಅವಶ್ಯಕ. ಹೀಗಾಗಿ ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳು 31 ಮಾರ್ಚ್‌ಗೆ ತಮ್ಮ ಆರ್ಥಿಕ ತಃಖ್ತೆಗಳನ್ನು ಸಿದ್ಧಪಡಿಸಿದ ನಂತರ ಲೆಕ್ಕ ಪರಿಶೋಧನೆಗೆ ಹಾಜರುಪಡಿಸಿ ನಂತರ ಲೆಕ್ಕಪರಿಶೋಧನೆಯನ್ನು ಮಾಡಿಸಿದ ನಂತರ ಲೆಕ್ಕಪರಿಶೋಧನಾ ವರದಿಯನ್ನು ಆಡಳಿತ ಮಂಡಳಿಯಲ್ಲಿಟ್ಟು ಪರಿಶೀಲಿಸಿ ಲೆಕ್ಕ ಪರಿಶೋಧನಾ ವರದಿಯಲ್ಲಿರುವ ನ್ಯೂನತೆಗಳಿಗೆ ಸಮಜಾಯಿಷಿಗಳನ್ನು ಸಿದ್ಧಪಡಿಸಿ ಸಂಬಂದಿಸಿದ ಅಧಿಕಾರಿಗಳಿಗೆ ಕಳುಹಿಸಿಕೊಡುವ ಕ್ರಮವಿಡಬೇಕಾಗುತ್ತದೆ. ನಂತರದಲ್ಲಿ ಆಡಳಿತ ಮಂಡಳಿ ಸಭೆಯ ಶಿಫಾರಸ್ಸಿನಂತೆ ವಾರ್ಷಿಕ ಸಾಮಾನ್ಯ ಸಭೆಯ ಅನುಮೋದನೆಗಾಗಿ ವಿಷಯವನ್ನು ಮಂಡಿಸಬೇಕಾಗುತ್ತದೆ.

ವಾರ್ಷಿಕ ಸಾಮಾನ್ಯ ಸಭೆ ಸಹಕಾರಿ ಸದಸ್ಯರಿಗೆ ವಾರ್ಷಿಕ ಹಬ್ಬವಿದ್ದಂತೆ. ಸಹಕಾರಿ ಸಂಸ್ಥೆಯ ಸಮಗ್ರ ಅಭಿವೃದ್ಧಿಗಾಗಿ ಕಳೆದ ಸಾಲಿನಲ್ಲಿ ಜರುಗಿಸಿದ ಕಾರ್ಯಕ್ರಮಗಳ ಪ್ರಗತಿ ಪರಿಶೀಲನೆ, ಪ್ರಸಕ್ತ ಸಾಲಿನಲ್ಲಿ ಹಮ್ಮಿಕೊಳ್ಳಬಹುದಾದ ಕಾರ್ಯಕ್ರಮಗಳು, ಮುಂಬರುವ ಯೋಜನೆಗಳ ಬಗ್ಗೆ ಸಮಗ್ರ ಚಿಂತನೆ ಯಾಗಬೇಕು. ಸದರಿ ಸಾಲಿನಲ್ಲಿ ಸಹಕಾರಿ ಸಂಸ್ಥೆಯು ಸಾಧಿಸಿದ ಪ್ರಗತಿ, ಎದುರಿಸಿದ ಸವಾಲುಗಳು, ಅವಕಾಶಗಳನ್ನು ಸದ್ಬಳಕೆಮಾಡಿಕೊಂಡಿರುವ ವಿವರಗಳನ್ನು ಸಾಮಾನ್ಯ ಸಭೆಯ ಸದಸ್ಯರ ಗಮನಕ್ಕೆ ತರಬೇಕು. ಅವರಿಂದ ಸಲಹೆ ಹಾಗೂ ಮಾರ್ಗದರ್ಶನ ಪಡೆಯುವುದು ಅವಶ್ಯಕ.

7ನೇಯ ಸಹಕಾರಿ ತತ್ವ ಸಾಮಾಜಿಕ ಕಳಕಳಿ. ಈ ಸಭೆಯಲ್ಲಿ ವಾರ್ಷಿಕ ಸಾಮಾನ್ಯ ಸಭೆಯ ಸೂಚನಾ ಪತ್ರದಂತೆ ಕಾರ್ಯಕ್ರಮಗಳನ್ನು ನಿರ್ವಹಿಸುವುದರ ಜೊತೆಗೆ ಸದಸ್ಯರಿಗೆ ಪ್ರೋತ್ಸಾಹಿಸುವ ಸದಸ್ಯರು ಸಹಕಾರಿಯ ಜೊತೆಗೆ ಹೆಚ್ಚು ನಿಷ್ಠಾವಂತರಾಗಿರುವಂತೆ ಪ್ರೇರೇಪಿಸುವ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಅವಕಾಶಗಳಿವೆ. ಹಿರಿಯ ಸದಸ್ಯರನ್ನು, ಪ್ರತಿಭಾವಂತರನ್ನು ಗುರುತಿಸುವುದು, ಸದಸ್ಯರ ಮಕ್ಕಳು ಶಾಲಾ ಕಾಲೇಜುಗಳಲ್ಲಿ ಹೆಚ್ಚಿನ ಅಂಕಗಳನ್ನು ತೆಗೆದುಕೊಂಡಿರುವವರನ್ನು ಗುರುತಿಸಿ ಪ್ರತಿಭಾ ಪುರಸ್ಕಾರಮಾಡುವುದು, ವಿಶೇಷ ಸಾಧನೆ ಮಾಡಿದ ಸದಸ್ಯರನ್ನು ಗುರುತಿಸಿ ಗೌರವಿಸುವುದು, ಸದಸ್ಯರ ಆರೋಗ್ಯ ತಪಾಸಣೆ, ಶಿಕ್ಷಣಕ್ಕಾಗಿ ಧನ ಸಹಾಯ ಮುಂತಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬಹುದಾಗಿದೆ.

ಸಹಕಾರಿ ಸಂಸ್ಥೆಗಳು ಅವುಗಳ ಕಾರ್ಯ ವ್ಯಾಪ್ತಿಯಲ್ಲಿ ಉತ್ತಮ ಆರ್ಥಿಕ ಘಟಕಗಳಾಗಿ ಕಾರ್ಯನಿರ್ವಹಿಸುವುದು ಇಂದಿನ ಅಗತ್ಯತೆ. ಈ ಹಿನ್ನೆಲೆಯಲ್ಲಿ ಸಾಮಾನ್ಯ ಸಭೆಗೆ ಹೆಚ್ಚಿನ ಮಹತ್ವ ಇರುತ್ತದೆ. ಈ ಮಹತ್ವವನ್ನು ಆಡಳಿತ ಮಂಡಳಿಯವರು, ಸಿಬ್ಬಂದಿಯವರು ಹಾಗೂ ಸದಸ್ಯರು ಅರ್ಥ ಮಾಡಿಕೊಳ್ಳಬೇಕು. ವಾರ್ಷಿಕ ಸಾಮಾನ್ಯ ಸಭೆಯ ವಿಷಯಗಳು ಸೌಹಾರ್ದ ಸಹಕಾರಿ ಕಾಯ್ದೆಯ ಹಾಗೂ ಸದರಿ ಸಹಕಾರಿಯ ಉಪವಿಧಿಗಳಿಗೆ ಅನುಸಾರವಾಗಿರಬೇಕು. ಪ್ರತಿಯೊಂದು ವಿಷಯಕ್ಕೆ ಟಿಪ್ಪಣಿಗಳು ಸದಸ್ಯರಿಗೆ ಉತ್ತಮ ಮಾರ್ಗದರ್ಶನವಾಗುವಂತೆ ಸಿದ್ಧಪಡಿಸಬೇಕು. ಸಕಾಲದಲ್ಲಿ ಸಮಗ್ರ ಮಾಹಿತಿಯನ್ನು ಸದಸ್ಯರಿಗೆ ತಲುಪಿಸುವ ವ್ಯವಸ್ಥೆ ಅಚ್ಚುಕಟ್ಟಾಗಿರಬೇಕು. ಸೌಹಾರ್ದ ಸಹಕಾರಿಗಳ ವಾರ್ಷಿಕ ಸಾಮಾನ್ಯ ಸಭೆ ಒಂದು ಮಾದರಿ ಸಾಮಾನ್ಯ ಸಭೆಯಾಗಿರಬೇಕೆಂಬುವುದು ಸಂಯುಕ್ತ ಸಹಕಾರಿಯ ಅಪೇಕ್ಷೆ. ಅದರಂತೆ ಸೌಹಾರ್ದ ಸಹಕಾರಿಗಳು ಕ್ರಮವಿಡುವಂತೆ ಸಹಕಾರಿ ಕಾರ್ಯಕರ್ತರುಗಳು ಸಹಕಾರಿಗಳಿಗೆ ಜಾಗೃತಿ ಮೂಡಿಸುವ ಕಾರ್ಯವನ್ನು ಮಾಡುವುದು ಅವಶ್ಯಕ.



# ಜ್ಞಾನ ಜ್ಯೋತಿ

– ಶ್ರೀ ಸಿದ್ದೇಶ್ವರ ಸ್ವಾಮೀಜಿ, ವಿಜಯಪುರ
ಪ್ರವಚನ ಸಂಗ್ರಹ : ಶ್ರೀ ಶಂಕರ ಎಸ್.

## "ಆಸೆಯ ಕುದರೆ" ಭಾಗ–2

ನಾವೆಷ್ಟೇ ಸಿರಿ–ಸಂಪತ್ತು ಗಳಿಸಿದ್ದರೂ ಆಸೆ ಇರುವವರೆಗೆ ನಾವು ಬಡವರೇ! ಈ ಆಸೆಯ ಕುದರೆ ಏರಿದವರಿಗೆ ಸಂತೃಪ್ತಿ ಸಮಾಧಾನ ಕನಸಿನ ಮಾತೇ ಸರಿ. ತುಂಟ ಕುದರೆಯನ್ನು ಓಡಿಸುವುದಕ್ಕಾಗಿ ಅದರ ಮಾಲೀಕನು ಒಂದು ಕೋಲಿಗೆ ಗಜ್ಜರಿ ಕಟ್ಟಿ ಅದರ ಮುಂದೆ ಇಳಿಬಿಟ್ಟನಂತೆ. ಗಜ್ಜರಿ ಆಸೆಗೆ ಕುದುರೆ ಆಯುಷ್ಯದ ತುಂಬ ಓಡಿದರೂ ಅದಕ್ಕೆ ಗಜ್ಜರಿ ಸಿಗಲಿಲ್ಲ! ಕಾಲನೆಂಬ ಮಾಲೀಕನು ನಮ್ಮ ಮನವೆಂಬ ಕುದುರೆಯನ್ನು ವಿಷಯ ಸುಖದ ಗಜ್ಜರಿಯ ಆಸೆಯನ್ನು ತೋರಿಸಿ ಓಡಾಡಿಸುತ್ತಾನೆ. ಆದರೆ ಈ ಮನಸ್ಸಿನ ಆಸೆ ಎಂದೂ ಪೂರೈಸುವುದಿಲ್ಲ. ವಿಷಯ ಸುಖದ ಗಜ್ಜರಿ ಎಂದೂ ದೂರೆಯುವುದಿಲ್ಲ. ಮಹಾನುಭಾವಿ ಅಲ್ಲಮ ಪ್ರಭುದೇವರು ಈ ಆಸೆಯ ಕುದುರೆಯನ್ನೇರಿದವರ ದುರವಸ್ಥೆಯನ್ನು ತಮ್ಮ ಒಂದು ಬೆಡಗಿನ ವಚನದಲ್ಲಿ ಹೀಗೆ ಹೇಳಿದ್ದಾರೆ.

ಅರಗಿನ ಪುತ್ಥಳಿಯನುರಿಕೊಂಡಡೆ,
ಉದಕ ಬಾಯಾರಿ ಬಳಲುತ್ತಿದೆ.
ಅಗೆಯಿಂ ಭೋ, ಭಾವಿಯನಗೆಯಿಂ ಭೋ.
ಭಾವಿಯನಗೆದಾತ ಸತ್ತ; ಭಾವಿ ಬತ್ತಿತ್ತು.
ಇದು ಕಾರಣ ನೆರೆ ಮೂರು ಲೋಕ
ಬರುಸೊರೆವೋಯಿತ್ತು ಗುಹೇಶ್ವರಾ.

ದೇಹವೇ ಅರಗಿನ ಪುತ್ಥಳಿ ಇದಕ್ಕೆ ಕಾಲನ ಅಥವಾ ಮರಣದ ಬೆಂಕಿ ತಗುಲಿದೆ. ಉದಕವೆಂದರೆ ಮನಸ್ಸು. ಈ ಮನಸ್ಸು ವಿಷಯದಾಶೆಯ ತೃಷ್ಣೆಯಿಂದ ಬಾಯಾರಿ ಬಳಸುತ್ತಿದೆ. ವಿಷಯ ಸುಖದ ಜಲವನ್ನು ಕುಡಿದು ವಿಷಯದಾಹ ಕಳೆದುಕೊಳ್ಳಬೇಕು. ಸುಖ–ಸಮಾಧಾನ ಅನುಭವಿಸಬೇಕೆಂದು ಶಬ್ದಾದಿ ವಿಷಯಗಳ ಭಾವಿಯನ್ನು ತೋಡುತ್ತಾ ಹೋಗುತ್ತಾನೆ. ಆದರೆ ಇವನಿಗೆ ಸುಖದ ಜಲವೇನೂ ದೊರೆಯುವುದಿಲ್ಲ. ಇದೇ ರೀತಿ ಮೂರು ಲೋಕದ ಮನುಜರೆಲ್ಲರೂ ವಿಷಯದ ಹಿಂದೆ ಹರಿದು ಜೀವನವನ್ನು ವ್ಯರ್ಥವಾಗಿ ಕಳೆಯುತ್ತಾರೆ. ಒಬ್ಬ ಸುಭಾಷಿತಕಾರನೂ ಈ ಆಸೆಯ ಪಾಶದ ಕುರಿತು ಹೀಗೆ ಹೇಳುತ್ತಾನೆ.

ಭೋಗಾ ನ ಭುಕ್ತಾ ವಯಮೇವ ಭುಕ್ತಾಃ
ತಪೋ ನ ತಪ್ತಂ ವಯಮೇವ ತಪ್ತಾಃ
ಕಾಲೋ ನ ಯಾತೋ ವಯವೇವ ಯಾತಾಃ
ತೃಷ್ಣಾ ನ ಜೀರ್ಣಾ ವಯಮೇವ ಜೀರ್ಣಾಃ । (ಭ.ಹ.ನೀ.ಶ)

ಭೋಗಗಳನ್ನು ನಾವು ಭೋಗಿಸಲಿಲ್ಲ: ಭೋಗಗಳೇ ನಮ್ಮನ್ನು ಭೋಗಿಸಿದವು. ತಪವು ತಪಿಸಲಿಲ್ಲ; ನಾವೇ ತಪಿಸಿದೆವು. ಕಾಲವು ಹೋಗಲಿಲ್ಲ ನಾವೇ ಹೋದೆವು. ಆಸೆಯು ಮುಪ್ಪಾಗಲಿಲ್ಲ ನಾವೇ ಮುಪ್ಪಾದೆವು.

ಆದ್ದರಿಂದ 'ಇಷ್ಟು ಸಾಕು' ಎಂದವನೇ ಸಿರವಂತ, ಸಂತೃಪ್ತ! ಬಜಾರಕ್ಕೆ ಹೋದವನು ತನ್ನ ಕಿಸೆಯ ಗಾತ್ರ ನೋಡಿ ಖರೀದಿಸಿದರೆ ಸಾಲ–ಸೋಲು, ತಾಪ–ಅನುತಾಪ ಏನೂ ಎಲ್ಲ. ಆದರೆ ಕಿಸೆಯ ಗಾತ್ರ ಗಮನಿಸದೆ ಸುಮ್ಮನೆ ಕಂಡದ್ದೆಲ್ಲಾ ಖರೀದಿಸುತ್ತಾಹೋದರೆ ಸಾಲ–ಸೋಲು ತಪ್ಪಿದ್ದಲ್ಲ! ಈ ಪ್ರಪಂಚಬೆಂಬ ಬಜಾರಕ್ಕೆ ನಾವು ಬಂದಾಗ ನೂರುವರುಷದ ಆಯುಷ್ಯವನ್ನು ದೇವರು ನಮ್ಮ ಕಿಸೆಗೆ ಹಾಕಿ ಕಳಿಸಿರುತ್ತಾನೆ. ಇದರ ನೆನಪು ಇರುವವರು ಜಾಣತನದಿಂದ ವ್ಯವಹಾರ ಮಾಡಿ ಆಯುಷ್ಯ ಇರುವುದರೊಳಗಾಗಿ ಜೀವನದಲ್ಲಿ ಸುಖ–ಶಾಂತಿ–ಸಮಾಧಾನ ಪಡೆದು ಜೀವನ ಸಾರ್ಥಕ ಮಾಡಿಕೊಳ್ಳುತ್ತಾರೆ. ಒಂದು ದಿನ ಆಯುಷ್ಯವೇ ಮುಗಿದು ಹೋಗುತ್ತದೆಂಬ ಅರಿವಿಲ್ಲದವರು ಪ್ರಾಪಂಚಿಕ ವಿಷಯ ಸುಖದ ಗಜ್ಜರಿಗೆ ಆಸೆಪಟ್ಟು ಆಯುಷ್ಯ ವ್ಯರ್ಥವಾಗಿ ಕಳೆಯುತ್ತಾರೆ. ಆದ್ದರಿಂದ ಈ ಆಸೆಯೆಂಬ ಕುದುರೆಯನ್ನು ನಾವು ಏರಬಾರದು. ಏರಿದರೂ ಅದರ ಅಗಾಮು ನಮ್ಮ ಕೈಯಲ್ಲಿರಬೇಕು. ಇದುವೆ ಗೆಲುವಿನ ಜೀವನದ ಸರಳ ಸೂತ್ರ.

## ಸೌಹಾರ್ದ ಸಹಕಾರಿಗಳ ನ್ಯಾಯಾಲಯದ ಸಮಾಚಾರಗಳು

| ದಾವಾ ಪಂಚಾಯ್ತಿ ನ್ಯಾಯಾಲಯ (ಎಬಿಎನ್) | | | | | | |
|---|---|---|---|---|---|---|
| ಕ್ರ.ಸಂ | ವಿವರ | ಬೆಳಗಾವಿ | ಕಲಬುರಗಿ | ಬೆಂಗಳೂರು | ಮೈಸೂರು | ಒಟ್ಟು |
| 1 | ಜುಲೈ–2025ರ ಪ್ರಾರಂಭಿಕ ಬಾಕಿ ಇರುವ ಕಡತಗಳ ಸಂಖ್ಯೆ | 1003 | 509 | 501 | 240 | 2253 |
| 2 | ದಾಖಲಾದ ದಾವಾ ಪ್ರಕರಣಗಳ ಸಂಖ್ಯೆ | 99 | 87 | 76 | 34 | 296 |
| 3 | ಇತ್ಯರ್ಥಗೊಂಡ ದಾವಾ ಪ್ರಕರಣಗಳು | 271 | 74 | 57 | 71 | 473 |
| 4 | ವಿಚಾರಣೆ ಹಂತದಲ್ಲಿರುವ ದಾವಾ ಪ್ರಕರಣಗಳು | 831 | 522 | 520 | 203 | 2076 |
| ಜುಲೈ 2025ರ ತಿಂಗಳಿನಲ್ಲಿ ದಾಖಲಾದ ದಾವಾ ಪ್ರಕರಣಗಳು 296 ಮತ್ತು ಇತ್ಯರ್ಥಗೊಂಡ ಪ್ರಕರಣಗಳು 473 | | | | | | |
| ಅಮಲ್ಜಾರಿ ವಿಭಾಗ | | | | | | |
| 1 | ದಾಖಲಾದ ಅಮಲ್ಜಾರಿ ಪ್ರಕರಣಗಳ ಸಂಖ್ಯೆ | 7147 | 1264 | 2145 | 752 | 11308 |
| 2 | ಇತ್ಯರ್ಥಗೊಂಡ ಅಮಲ್ಜಾರಿ ಪ್ರಕರಣಗಳು | 1053 | 233 | 523 | 163 | 1972 |
| 3 | ವಿಚಾರಣೆ ಹಂತದಲ್ಲಿರುವ ಅಮಲ್ಜಾರಿ ಪ್ರಕರಣಗಳು | 6094 | 1031 | 1622 | 589 | 9336 |
| ಜುಲೈ 2025ರ ತಿಂಗಳಿನಲ್ಲಿ ಒಟ್ಟು 32 ಅಮಲ್ಜಾರಿ ಪ್ರಕರಣಗಳು ದಾಖಲಾಗಿರುತ್ತವೆ. | | | | | | |

## ಸಂಯುಕ್ತ ಸಹಕಾರಿಯ 24ನೇ ವಾರ್ಷಿಕ ಸಾಮಾನ್ಯ ಸಭೆಯ ದಿನದ ಕಾರ್ಯಕ್ರಮಗಳು 22ನೇ ಆಗಸ್ಟ್ 2025

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ 24ನೇ ವಾರ್ಷಿಕ ಸಾಮಾನ್ಯ ಸಭೆಯನ್ನು 22 ಆಗಸ್ಟ್ 2025, ಶುಕ್ರವಾರದಂದು ಗಾಯತ್ರಿ ವಿಹಾರ (ಗಾಯತ್ರಿ ಗ್ರ್ಯಾಂಡ್), ಗೇಟ್ ನಂ.–04, ಅರಮನೆ ಮೈದಾನ, ರಮಣ ಮಹರ್ಷಿ ರಸ್ತೆ (ಬಳ್ಳಾರಿ ರಸ್ತೆ), ಬೆಂಗಳೂರು–560080 ಇಲ್ಲಿ ಬೆಳಿಗ್ಗೆ 10:00 ಗಂಟೆಗೆ ಕರೆಯಲಾಗಿದೆ. ಸಭೆಯ ನೋಟೀಸನ್ನು ಅಜೆಂಡಾ ಮತ್ತು ವಿವರವಾದ ಟಿಪ್ಪಣಿಗಳೊಂದಿಗೆ ಎಲ್ಲಾ ಅರ್ಹ ಸದಸ್ಯರಿಗೆ ಬಹು ಪ್ರಮಾಣದ ಅಂಚೆ (Registered Bulk Parcel) ಮೂಲಕ ಕಳುಹಿಸಲಾಗಿದೆ ಮತ್ತು ಸಂಯುಕ್ತ ಸಹಕಾರಿಗೆ ಸಹಕಾರಿಗಳು ಒದಗಿಸಿರುವ ಸಹಕಾರಿಯ ಇ–ಮೇಲ್ ವಿಳಾಸಕ್ಕೆ ಕಳುಹಿಸಲಾಗಿದೆ. ಸಭೆಯ ಅಜೆಂಡಾ. ಟಿಪ್ಪಣಿಗಳು ಮತ್ತು ಅರ್ಹ ಸದಸ್ಯರ ಪಟ್ಟಿಯು ಸಂಯುಕ್ತ ಸಹಕಾರಿಯ ವೆಬ್‌ಸೈಟ್ www.souharda.coop ನಲ್ಲಿ ಲಭ್ಯವಿರುತ್ತದೆ. ರಾಜ್ಯದ ಸೌಹಾರ್ದ ಸಹಕಾರಿಗಳು ಗಮನಿಸಲು ಕೋರಿದೆ.

ಸಂಯುಕ್ತ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆಗೆ ತಮ್ಮ ಸಹಕಾರಿಯ ಆಡಳಿತ ಮಂಡಳಿ ಸಭೆಯಲ್ಲಿ ನಿರ್ಣಯಿಸುವ ಮೂಲಕ ಓರ್ವ ಚುನಾಯಿತ ನಿರ್ದೇಶಕರನ್ನು ಡೆಲಿಗೇಟ್ ಆಗಿ ಭಾಗವಹಿಸಲು ನಿಯೋಜಿಸಬಹುದು. ಅಂತಹ ನಿರ್ದೇಶಕರು ಸಂಯುಕ್ತ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆಗೆ ತನ್ನ ಸಹಕಾರಿಯ ಆಡಳಿತ ಮಂಡಳಿ ಸಭೆಯ ನಿರ್ಣಯ ಹಾಗೂ ಸೂಕ್ತವಾಗಿ ಭರ್ತಿ ಮಾಡಲ್ಪಟ್ಟ ನಮೂನೆಯೊಂದಿಗೆ ಹಾಜರಾಗುವುದು. ನಮೂನೆಯು ಸಂಯುಕ್ತ ಸಹಕಾರಿಯ ವೆಬ್‌ಸೈಟ್ www.souharda.coop ನಲ್ಲಿ ಲಭ್ಯವಿರುತ್ತದೆ.

ಸಭೆಯ ನಂತರ ಸೌಹಾರ್ದ ಸಹಕಾರಿ ಕಾಯ್ದೆ ರಾಜ್ಯದಲ್ಲಿ ಜಾರಿಯಾಗಿ 25 ವರ್ಷಗಳು ಪೂರೈಸಿದ ಹಿನ್ನೆಲೆಯಲ್ಲಿ ರಾಜ್ಯದ ಸಹಕಾರಿಗಳು ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ರಾಜ್ಯಾದಂತ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. **ರಜತ ಮಹೋತ್ಸವದ ಉದ್ಘಾಟನಾ ಕಾರ್ಯಕ್ರಮವನ್ನು ಕೇಂದ್ರ ಗ್ರಾಹಕ ವ್ಯವಹಾರ, ಆಹಾರ ಮತ್ತು ಸಾರ್ವಜನಿಕ ವಿತರಣಾ ಸಚಿವರಾದ ಶ್ರೀ ಪ್ರಹ್ಲಾದ ಜೋಶಿರವರು ಹಾಗೂ ಮಾನ್ಯ ಸಹಕಾರಿ ಮಂತ್ರಿಗಳಾದ ಶ್ರೀ ಕೆ. ಎನ್. ರಾಜಣ್ಣನವರು 3–00 ಗಂಟೆಗೆ ಉದ್ಘಾಟಿಸಲಿದ್ದಾರೆ ಮತ್ತು ಸಂಯುಕ್ತ ಸಹಕಾರಿಯ ಪ್ರಕಟಣೆ ಪುಸ್ತಕ ಬಿಡುಗಡೆ ಕಾರ್ಯಕ್ರಮ, 5 ಉತ್ತಮ ಸಹಕಾರಿ ಸಂಸ್ಥೆ ಹಾಗೂ ಶ್ರೇಷ್ಠ ಸಹಕಾರಿ ವ್ಯಕ್ತಿ ಪ್ರಶಸ್ತಿ ನೀಡಿ ಗೌರವಿಸಲಾಗುವುದು. ಈ ಸಭಾಂಗಣದ ಆವರಣದಲ್ಲಿ ತಂತ್ರಜ್ಞಾನ ಮೇಳ, ಸ್ಮರಣ ಸಂಚಿಕೆ ಬಿಡುಗಡೆ, ಹಾಗೂ ಸೌಹಾರ್ದ ಸಹಕಾರಿಗಳ ಉತ್ಪಾದಿತ ವಸ್ತುಗಳ ಮಾರಾಟ ಹಾಗೂ ಪ್ರದರ್ಶಿನಿಗಳ ವ್ಯವಸ್ಥೆ ಮಾಡಲಾಗುತ್ತಿದೆ.** ಆಸಕ್ತರು ಸಂಯುಕ್ತ ಸಹಕಾರಿಯ ಅಧಿಕಾರಿಗಳನ್ನು ಸಂಪರ್ಕಿಸಿ ತಮ್ಮ ಮಳಿಗೆಯನ್ನು ಕಾಯ್ದಿರಿಸಿಕೊಳ್ಳಲು ಕ್ರಮವಿಡುವುದು.

**ವಿಶೇಷ ಸೂಚನೆ : ಮಧ್ಯಾಹ್ನ ಏರ್ಪಡಿಸಿರುವ ಈ ರಜತ ಮಹೋತ್ಸವ ಉದ್ಘಾಟನಾ ಸಮಾರಂಭದಲ್ಲಿ ಮುಕ್ತವಾಗಿ ಭಾಗವಹಿಸಲು ಅವಕಾಶ ಇದೆ. ಪ್ರತಿಯೊಂದು ಸೌಹಾರ್ದ ಸಹಕಾರಿಯಿಂದ 2 ರಿಂದ 3 ಪ್ರತಿನಿಧಿಗಳು ಭಾಗವಹಿಸಿ ಸಮಾವೇಶವನ್ನು ಯಶಸ್ವಿಗೊಳಿಸಲು ಕೋರಿದೆ.**

## 24ನೇ ವಾರ್ಷಿಕ ಸಾಮಾನ್ಯ ಸಭೆಯ ನೋಟೀಸು
### ದಿನಾಂಕ 22 ಆಗಸ್ಟ್ 2025, ಶುಕ್ರವಾರ

**ಮಾನ್ಯರೇ,**

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ 24ನೇ ವಾರ್ಷಿಕ ಸಾಮಾನ್ಯ ಸಭೆಯನ್ನು ದಿನಾಂಕ 22 ಆಗಸ್ಟ್ 2025, ಶುಕ್ರವಾರದಂದು ಗಾಯತ್ರಿ ವಿಹಾರ (ಗಾಯತ್ರಿ ಗ್ರ್ಯಾಂಡ್), ಗೇಟ್ ನಂ.–04, ಅರಮನೆ ಮೈದಾನ, ರಮಣ ಮಹರ್ಷಿ ರಸ್ತೆ (ಬಳ್ಳಾರಿ ರಸ್ತೆ), ಬೆಂಗಳೂರು–560080 ಇಲ್ಲಿ ಬೆಳಿಗ್ಗೆ 10:00 ಗಂಟೆಗೆ ಕರೆಯಲಾಗಿದೆ. ಈ ಸಭೆಗೆ ತಾವು ಆಗಮಿಸಬೇಕಾಗಿ ಕೋರಲಾಗಿದೆ.

**ಸಭೆಯಲ್ಲಿ ಈ ಕೆಳಗಿನ ವಿಷಯಗಳನ್ನು ಚರ್ಚಿಸಲಾಗುವುದು:**

1. 24ನೇ ವಾರ್ಷಿಕ ಸಾಮಾನ್ಯ ಸಭೆಯ ನೋಟೀಸನ್ನು ಓದಿ ದಾಖಲು ಮಾಡುವುದು.
2. 23ನೇ ವಾರ್ಷಿಕ ಸಾಮಾನ್ಯ ಸಭೆಯ ನಿರ್ಣಯಗಳನ್ನು ಓದಿ ದೃಢೀಕರಿಸುವುದು ಹಾಗೂ ಕೈಗೊಂಡ ಕ್ರಮಗಳನ್ನು ಅನುಮೋದಿಸುವುದು.
3. 2024–25ನೇ ಸಾಲಿನ ವಾರ್ಷಿಕ ವರದಿಯನ್ನು ಅನುಮೋದಿಸುವುದು.
4. 2024–25ನೇ ಸಾಲಿನ ಲೆಕ್ಕಪರಿಶೋಧನಾ ವರದಿಯನ್ನು ಮತ್ತು ಲೆಕ್ಕಪರಿಶೋಧಿತ ಆರ್ಥಿಕ ತಃಖ್ತೆಗಳನ್ನು ಪರಿಗಣಿಸುವುದು.
5. 2024–25ನೇ ಸಾಲಿನ ಲೆಕ್ಕಪರಿಶೋಧನಾ ವರದಿಯ ಅನುಪಾಲನಾ ವರದಿಯನ್ನು ಅನುಮೋದಿಸುವುದು.
6. 2024–25ನೇ ಸಾಲಿನಲ್ಲಿ ಆದ ಮುಂಗಡ ಪತ್ರಕ್ಕಿಂತ ಹೆಚ್ಚುವರಿ ಖರ್ಚುಗಳನ್ನು ಅನುಮೋದಿಸುವುದು.

7. 2025–26ನೇ ಸಾಲಿಗೆ ಶಾಸನಬದ್ಧ ಲೆಕ್ಕಪರಿಶೋಧಕರನ್ನು ನೇಮಿಸುವುದು ಮತ್ತು ಅವರ ಸಂಭಾವನೆಯನ್ನು ನಿಗದಿಪಡಿಸುವುದು.
8. 2026–27ನೇ ಸಾಲಿಗೆ ಆಂತರಿಕ ಲೆಕ್ಕಪರಿಶೋಧಕರನ್ನು ನೇಮಿಸುವುದು ಮತ್ತು ಅವರ ಸಂಭಾವನೆಯನ್ನು ನಿಗದಿಪಡಿಸುವುದು.
9. 2025–26ನೇ ಸಾಲಿನ ಪರಿಷ್ಕೃತ ವಾರ್ಷಿಕ ಕ್ರಿಯಾ ಯೋಜನೆಯನ್ನು ಅನುಮೋದಿಸುವುದು.
10. 2025–26ನೇ ಸಾಲಿನ ಪರಿಷ್ಕೃತ ಮುಂಗಡ ಪತ್ರವನ್ನು ಅನುಮೋದಿಸುವುದು.
11. 2026–27ನೇ ಸಾಲಿನ ಕರಡು ವಾರ್ಷಿಕ ಕ್ರಿಯಾ ಯೋಜನೆಯನ್ನು ಅನುಮೋದಿಸುವುದು.
12. 2026–27ನೇ ಸಾಲಿನ ಕರಡು ಮುಂಗಡ ಪತ್ರವನ್ನು ಅನುಮೋದಿಸುವುದು.
13. ಮೈಸೂರಿನಲ್ಲಿರುವ ಸಂಯುಕ್ತ ಸಹಕಾರಿಯ ಸ್ವಂತ ಕೈಗಾರಿಕಾ ನಿವೇಶನದಲ್ಲಿ ಮೈಸೂರು ಪ್ರಾಂತದ ಕಛೇರಿ ಹಾಗೂ ಕೈಗಾರಿಕಾ ತರಬೇತಿ ಕೇಂದ್ರ ಕಟ್ಟಡ ನಿರ್ಮಿಸುವ ಕುರಿತು ಆಗಿರುವ ಬೆಳವಣಿಗೆಗಳ ಬಗ್ಗೆ.
14. ಸಹಕಾರ ಹಾಗೂ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ ಡಿಪ್ಲೋಮಾ (ಡಿಸಿಬಿಎಂ) ಕೋರ್ಸಿನ ಕುರಿತು.
15. ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿ ಸದಸ್ಯರ ಹಾಗೂ ಶಿಕ್ಷಣ ನಿಧಿ ಸಲಹಾ ಸಮಿತಿ ಸದಸ್ಯರ ವಿದೇಶ ಅಧ್ಯಯನ ಪ್ರವಾಸದ ವರದಿಯ ಕುರಿತು.
16. ಸಂಯುಕ್ತ ಸಹಕಾರಿಯಿಂದ ಈಗಾಗಲೇ ಹೊರಡಿಸಿರುವ ಹಾಗೂ ಹೊರಡಿಸಬೇಕಾಗಿರುವ ಸುತ್ತೋಲೆಗಳನ್ನು ಪರಿಷ್ಕರಿಸಿ, ಹೊರಡಿಸಲು ಅನುಮತಿಸುವ ಕುರಿತು.
17. ಸಂಯುಕ್ತ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆಯ ನಡವಳಿ ಮತ್ತು ನಿರ್ಣಯಗಳನ್ನು ಇ–ಮೇಲ್ ಮೂಲಕ ಕಳುಹಿಸಲು ಅನುಮತಿಸುವ ಕುರಿತು.
18. ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿಯು ಈ ಹಿಂದೆ ಬಾಡಿಗೆಗೆ ಇದ್ದ ನಿರ್ಮಾಣ ಭವನಕ್ಕೆ ನೀಡಲಾಗಿದ್ದ ಬಾಡಿಗೆ ಮುಂಗಡ ಮೊತ್ತವನ್ನು ಕಛೇರಿ ಬಾಡಿಗೆ ಮೊತ್ತದಲ್ಲಿ ಸರಿದೂಗಿಸುವ ಕುರಿತು.
19. ಸೌಹಾರ್ದ ಸಹಕಾರಿ ಕಾಯ್ದೆಯ ರಜತ ಮಹೋತ್ಸವದ ಜ್ಞಾಪಕಾರ್ಥ ಕಾರ್ಯನಿರತ ಪ್ರತಿಯೊಂದು ಸೌಹಾರ್ದ ಸಹಕಾರಿಗೆ ಗೋಡೆ ಗಡಿಯಾರ (Wall Clock) ವನ್ನು ನೀಡುವ ಕುರಿತು.
20. ಸಂಯುಕ್ತ ಸಹಕಾರಿಯು ಇತರೆ ಸಹಕಾರಿಗಳೊಂದಿಗೆ ಹೊಂದಿರುವ ಸದಸ್ಯತ್ವದ ಕುರಿತು.
21. ಹಿಂದಿನ ಸಹಕಾರ ವರ್ಷದಲ್ಲಿ ಸದಸ್ಯರನ್ನು ಸೇರಿಸಿಕೊಂಡ ಮತ್ತು ತೆಗೆದು ಹಾಕಿದ ಬಗೆಗಿನ ಸಂಕ್ಷಿಪ್ತ ವರದಿ.
22. ಸೌಹಾರ್ದ ಸಹಕಾರಿ ಕಾಯ್ದೆ ಕಲಂ 14, 15 ಮತ್ತು 16ನೇ ಪ್ರಕರಣಗಳ ಅಡಿಯಲ್ಲಿ ಸೃಜಿಸಲಾದ ಯಾವುದೇ ಸಂಸ್ಥೆ ಇದ್ದಲ್ಲಿ ಅದರ ವಾರ್ಷಿಕ ವರದಿಯ ಮತ್ತು ಲೆಕ್ಕಗಳ ಪುನರಾವಲೋಕನ.

    ಸಹಕಾರ ಅಭಿವೃದ್ಧಿ ಪ್ರತಿಷ್ಠಾನ (ಸ್ಯಾಪ್–ಕೆ) ವಾರ್ಷಿಕ ವರದಿ ಮತ್ತು ಲೆಕ್ಕಪತ್ರಗಳ ಪರಿಗಣನೆ.
23. ಹಿಂದಿನ ಸಹಕಾರಿ ವರ್ಷದ ಹೆಚ್ಚುವರಿ ಅಥವಾ ನಿವ್ವಳ ಲಾಭದ ವಿಲೇವಾರಿ.
24. ಕಾರ್ಯಾಚರಣೆಯ ಕೊರತೆ ಏನಾದರೂ ಇದ್ದಲ್ಲಿ ಅದರ ಪುನರವಲೋಕನ.
25. ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿದಂತೆ ನಿರ್ದಿಷ್ಟ ಮೀಸಲು ಮತ್ತು ಇತರ ನಿಧಿಗಳ ಸೃಜನೆ.
26. ಮೀಸಲು ಮತ್ತು ಇತರ ನಿಧಿಗಳ ವಾಸ್ತವಿಕ ಬಳಕೆಯ ಪುನರಾವಲೋಕನ.
27. ಮಂಡಲಿಯ ಸದಸ್ಯರಿಂದ ಸಹಕಾರಿಯ ಸೇವೆಗಳ ಉಪಯೋಗದ ಅವಲೋಕನ.
28. ನಿರ್ದೇಶಕರಿಗೆ ಮತ್ತು ಅವರ ಸಂಬಂಧಿಕರಿಗೆ ನೀಡಿದ ಸಾಲಗಳು ಮತ್ತು ಮುಂಗಡಗಳು ಮತ್ತು ಸುಸ್ತಿ ಸಾಲಗಳು ಯಾವುದಾದರೂ ಇದ್ದಲ್ಲಿ, ಸುಸ್ತಿ ಸಾಲಗಳ ವಸೂಲಾತಿಗೆ ತೆಗೆದುಕೊಂಡ ಕ್ರಮದ ಪರಿಶೀಲನೆ.
29. ಒಟ್ಟುಗೂಡಿಸುವಿಕೆ, ವಿಭಜನೆ, ವಿಲೀನತೆ ಮತ್ತು ಸ್ವತ್ತುಗಳ ಮತ್ತು ಹೊಣೆಗಾರಿಕೆಗಳ ವರ್ಗಾವಣೆ.
30. ಸೌಹಾರ್ದ ಸಹಕಾರಿಗಳ ಶಾಸನಾತ್ಮಕ ಕಾರ್ಯಗಳ ನಿರ್ವಹಣೆಗೆ ಸಂಯುಕ್ತ ಸಹಕಾರಿಯಿಂದ ಮಾಡಲಾದ ಖರ್ಚು–ವೆಚ್ಚಗಳ ವಿವರಗಳನ್ನು ಪರಿಶೀಲಿಸಿ, ಅನುಮೋದಿಸುವ ಕುರಿತು.

31. ವಸೂಲಾಗದೆಂದು ಪರಿಗಣಿತವಾದ ಸುಸ್ಥಿ ಸಾಲಗಳ ಬಗ್ಗೆ ತೀರ್ಮಾನ.

32. ಮಂಡಲಿಯ ನಿರ್ದೇಶಕರುಗಳನ್ನು ತೆಗೆದುಹಾಕುವುದು.

33. 65ನೇ ಪ್ರಕರಣದ ಅಡಿಯಲ್ಲಿ ವಿಚಾರಣಾ ವರದಿ ಯಾವುದಾದರೂ ಇದ್ದಲ್ಲಿ, ಅದರ ಬಗ್ಗೆ ಕೈಗೊಂಡ ಕ್ರಮಗಳ ವರದಿ.

34. ಮಂಡಲಿಯಿಂದ ಯಾವ ವ್ಯಕ್ತಿಯ ಸದಸ್ಯತ್ವದ ಅರ್ಜಿಯನ್ನು ನಿರಾಕರಿಸಲಾಗಿದೆಯೋ ಆ ವ್ಯಕ್ತಿಯು ಸಲ್ಲಿಸಿದ ಅಪೀಲು ಯಾವುದಾದರೂ ಇದ್ದಲ್ಲಿ ಅದರ ಪರಿಗಣನೆ.

35. ನಿರ್ದೇಶಕರುಗಳ ಅಥವಾ ಮುಖ್ಯಕಾರ್ಯನಿರ್ವಾಹಕನ ಸಂಬಂಧಿಗಳನ್ನು ನೇಮಕ ಮಾಡಿಕೊಂಡಿರುವಲ್ಲಿ ಆ ನೌಕರರ ಪಟ್ಟಿಯ ಪರಿಗಣನೆ.

36. ಸಂಯುಕ್ತ ಸಹಕಾರಿಯ ಉಪವಿಧಿ ತಿದ್ದುಪಡಿ ಕುರಿತು. (ಪುಟ ಸಂಖ್ಯೆ : 163 ರಿಂದ 168)

37. ಅಧ್ಯಕ್ಷರ ಒಪ್ಪಿಗೆ ಮೇರೆಗೆ ಚರ್ಚಿಸಬಹುದಾದ ಇತರೆ ವಿಷಯಗಳು.

**ಆಡಳಿತ ಮಂಡಲಿಯ ಅಪ್ಪಣೆಯ ಮೇರೆಗೆ,**

**ವಂದನೆಗಳೊಂದಿಗೆ,**

ಇಂತಿ ತಮ್ಮ ವಿಶ್ವಾಸಿ

**(ಶರಣಗೌಡ ಜಿ. ಪಾಟೀಲ)**

ವ್ಯವಸ್ಥಾಪಕ ನಿರ್ದೇಶಕ

ಸ್ಥಳ : ಬೆಂಗಳೂರು

ದಿನಾಂಕ : 01.08.2025

## ಸ್ವಾಗತ



**ಬೆಂಗಳೂರು :** ದಿನಾಂಕ 26.07.2025 ರಂದು ಮಾನ್ಯ ಕೇಂದ್ರ ಗ್ರಾಹಕ ವ್ಯವಹಾರ, ಆಹಾರ ಮತ್ತು ಸಾರ್ವಜನಿಕ ವಿತರಣಾ ಸಚಿವರಾದ ಶ್ರೀ ಪ್ರಹ್ಲಾದ್ ಜೋಶಿರವರು ಇವರನ್ನು ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿ ಸದಸ್ಯರ ಪರವಾಗಿ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಇವರು ದಿನಾಂಕ 22.08.2025 ರಂದು ನಡೆಯುವ "ಸೌಹಾರ್ದ ಸಹಕಾರಿಗಳ ಸಮಾವೇಶಕ್ಕೆ" ಆಗಮಿಸಬೇಕಾಗಿ ವಿನಂತಿಸಲಾಯಿತು ಇದಕ್ಕೆ ಮಾನ್ಯ ಕೇಂದ್ರ ಸಚಿವರು ಒಪ್ಪಿಗೆ ಸೂಚಿಸಿರುತ್ತಾರೆ.



**ಬೆಂಗಳೂರು :** ದಿನಾಂಕ 19.06.2025 ರಂದು ಕರ್ನಾಟಕ ಸರಕಾರದ, ಸಹಕಾರ ಇಲಾಖೆಯ ಮಾನ್ಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಎಸ್. ಬಿ ಶೆಟ್ಟೆಣ್ಣವರ್ ರವರನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲ್ ಮತ್ತು ಉಪ ಪ್ರಧಾನ ವ್ಯವಸ್ಥಾಪಕರಾದ ಶ್ರೀ ನಾರಾಯಣ ಹೆಗಡೆ ರವರು ಭೇಟಿ ಮಾಡಿ ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳ ಬಗ್ಗೆ ಮಾಹಿತಿ ನೀಡಿ ಅಭಿನಂಧನೆ ಸಲ್ಲಿಸಿದರು.



## IFFCO ಸಹಕಾರಿ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರಾಗಿ ಶ್ರೀ ಕೆ. ಜೆ ಪಟೇಲ್

**Indian Farmers Fertiliser Cooperative Limited (IFFCO)** ಇದರ ವ್ಯವಸ್ಥಾಪಕ ನಿರ್ದೇಶಕರಾಗಿ ಶ್ರೀ ಕೆ. ಜೆ ಪಟೇಲ್ ಇವರು ನೇಮಕವಾಗಿರುತ್ತಾರೆ. ಶ್ರೀಯುತರಿಗೆ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿ ಸದಸ್ಯರು ಹಾಗೂ ಸೌಹಾರ್ದ ಸಹಕಾರಿಗಳ ಪರವಾಗಿ ಅಭಿನಂದನೆಗಳು.

# ರಾಷ್ಟ್ರೀಯ ಸಹಕಾರ ನೀತಿ - 2025 ಅನಾವರಣ

## 2034ರ ವೇಳೆಗೆ ಸಹಕಾರ ವಲಯದ ಜಿಡಿಪಿ ಪಾಲನ್ನು ಮೂರು ಪಟ್ಟು ಹೆಚ್ಚಿಸುವುದು, 50 ಕೋಟಿ ಸದಸ್ಯತ್ವ ಗುರಿ

## ಸಹಕಾರ ಸಚಿವ ಅಮಿತ್ ಷಾ ಅವರ ದೂರದೃಷ್ಟಿಯ ಸಹಕಾರ ನೀತಿ



**ನವದೆಹಲಿ:** ಕೇಂದ್ರ ಗೃಹ ಮತ್ತು ಸಹಕಾರ ಸಚಿವ ಅಮಿತ್ ಶಾ ಅವರು ನವದೆಹಲಿಯಲ್ಲಿ ರಾಷ್ಟ್ರೀಯ ಸಹಕಾರ ನೀತಿ – 2025 ಅನ್ನು ಸಹಕಾರಿಗಳ ಸಮ್ಮುಖದಲ್ಲಿ ಅನಾವರಣಗೊಳಿಸಿದರು. ನೂತನ ರಾಷ್ಟ್ರೀಯ ಸಹಕಾರ ನೀತಿಯು ಭಾರತದ ಸಹಕಾರಿ ಚಳವಳಿಗೆ ಒಂದು ಪರಿವರ್ತನಾ ಕ್ಷಣವನ್ನು ಗುರುತಿಸುತ್ತದೆ. ಈ ನೀತಿಯು ಮಹತ್ವಾಕಾಂಕ್ಷೆಯ ಗುರಿಯೊಂದಿಗೆ ವಲಯವನ್ನು ಪುನರುಜ್ಜೀವನಗೊಳಿಸುವ ಗುರಿಯನ್ನು ಹೊಂದಿದೆ. 2034ರ ವೇಳೆಗೆ ದೇಶದ GDPಗೆ ಸಹಕಾರ ಕ್ಷೇತ್ರದ ಕೊಡುಗೆಯನ್ನು ಮೂರು ಪಟ್ಟು ಹೆಚ್ಚಿಸುವುದು ಮತ್ತು 50 ಕೋಟಿ ಸಕ್ರಿಯ ಸದಸ್ಯರನ್ನು ಅದರ ವ್ಯಾಪ್ತಿಗೆ ಸೇರಿಸುವುದು ಪ್ರಮುಖವಾಗಿದೆ.

ನೀತಿಯ ಕರಡು ರಚನೆಯ ನೇತೃತ್ವ ವಹಿಸಿದ್ದ ಮಾಜಿ ಕೇಂದ್ರ ಸಚಿವ ಸುರೇಶ್ ಪ್ರಭು ಸೇರಿದಂತೆ ವಿವಿಧ ರಾಜ್ಯಗಳ ಸಹಕಾರ ಸಚಿವರುಗಳು, ಹಿರಿಯ ಅಧಿಕಾರಿಗಳು, ಕೇಂದ್ರ ಸಹಕಾರ ಇಲಾಖೆ ಕಾರ್ಯದರ್ಶಿ ಆಶಿಶ್ ಕುಮಾರ್ ಭೂತಾನಿ ಮತ್ತಿತರ ಗಣ್ಯರನ್ನು ಉದ್ದೇಶಿಸಿ ಮಾತನಾಡಿದ ಅಮಿತ್ ಷಾ ಅವರು, ಈ ಸಹಕಾರ ನೀತಿಯು ಐತಿಹಾಸಿಕ, ದೂರದೃಷ್ಟಿಯ ಮತ್ತು ಪ್ರಧಾನಿ ನರೇಂದ್ರ ಮೋದಿಯವರ "ಸಹಕಾರದಿಂದ ಸಮೃದ್ಧಿ" ಎಂಬ ದೃಷ್ಟಿಕೋನದಲ್ಲಿ ಬೇರೂರಿದೆ ಎಂದು ಶ್ಲಾಘಿಸಿದರು.

ರಾಷ್ಟ್ರೀಯ ಸಹಕಾರ ಯೂನಿಯನ್ ಮತ್ತು ಇಫ್ಕೋ ಅಧ್ಯಕ್ಷ ದಿಲೀಪ್ ಸಂಘಾನಿ, ಇಫ್ಕೊ ವ್ಯವಸ್ಥಾಪಕ ನಿರ್ದೇಶಕರಾದ ಡಾ.ಯು.ಎಸ್. ಅವಸ್ಥಿ, ಆರ್‌ಬಿಐ ನಿರ್ದೇಶಕರಾದ ಸತೀಶ್ ಮರಾಠೆ,

ಸಹಕಾರಿ ಮುಖಂಡರುಗಳಾದ ಜ್ಯೋತಿಂದ್ರ ಮೆಹ್ತಾ, ರವೀಂದ್ರ ರಾವ್, ವಿಶಾಲ್ ಸಿಂಗ್ ಮತ್ತು ಇತರ ಅನೇಕರು ಸೇರಿದಂತೆ ರಾಷ್ಟ್ರೀಯ ಸಹಕಾರಿ ಒಕ್ಕೂಟಗಳೊಂದಿಗೆ ಸಂಬಂಧಿಸಿದ ಬಹುತೇಕ ಎಲ್ಲಾ ಉನ್ನತ ಸಹಕಾ–ರಿಗಳು ಉಪಸ್ಥಿತರಿದ್ದರು.

750 ಕ್ಕೂ ಹೆಚ್ಚು ಸಲಹೆಗಳು, 17 ಸಭೆಗಳು ಮತ್ತು ಆರ್‌ಬಿಐ ಮತ್ತು ನಬಾರ್ಡ್‌ನಿಂದ ಬಂದ ಸಲಹೆಗಳನ್ನು ಒಳಗೊಂಡ ಸಮಗ್ರ ಸಮಾಲೋಚನೆಗಳ ನಂತರ ರಚಿಸಲಾದ ಈ ನೀತಿಯು ವ್ಯಾಪಕ ಪಾಲುದಾರರ ಪಾಲ್ಗೊಳ್ಳುವಿಕೆಯನ್ನು ಪ್ರತಿಬಿಂಬಿಸುತ್ತದೆ. ಭಾರತವು 2002 ರಲ್ಲಿ ಅಂದಿನ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರ ಮಾರ್ಗದರ್ಶನದಲ್ಲಿ ತನ್ನ ಮೊದಲ ಸಹಕಾರ ನೀತಿಯನ್ನು ಪರಿಚಯಿಸಿತ್ತು. ಮತ್ತು ಈಗ, 23 ವರ್ಷಗಳ ನಂತರ, ಪ್ರಧಾನಿ ನರೇಂದ್ರ ಮೋದಿ ಅವರ ಮಾರ್ಗದರ್ಶನದಲ್ಲಿ ಎರಡನೇ ನೀಲನಕ್ಷೆಯನ್ನು ರೂಪಿಸಲಾಗಿದೆ. ಇದು ದೇಶದ ಸಹಕಾರಿ ಅಭಿವೃದ್ಧಿಗೆ ಕೇಂದ್ರ ಸರ್ಕಾರವು ತನ್ನ ದೀರ್ಘಕಾಲೀನ ಬದ್ಧತೆಯನ್ನು ಒತ್ತಿಹೇಳುತ್ತದೆ ಎಂದು ಅಮಿತ್ ಶಾ ಅವರು ತಿಳಿಸಿದರು.

ಪ್ರಸ್ತುತ ಸಹಕಾರ ಚಳವಳಿಯ ಬೆಳವಣಿಗೆಯ ಜೊತೆಗೆ ಮುಂದಿನ ದಿನಗಳಲ್ಲಿ ಸಹಕಾರಿ ಸಂಘಗಳನ್ನು ಶೇಕಡಾ 30ರಷ್ಟು ಹೆಚ್ಚಿಸುವುದು, ಪ್ರತಿ ಗ್ರಾಮದಲ್ಲಿ ಕನಿಷ್ಠ ಒಂದು ಸಹಕಾರಿ ಸಂಘವನ್ನು ಸ್ಥಾಪಿಸುವುದು ಮತ್ತು ಪ್ರತಿ ತಾಲ್ಲೂಕಿಗೆ ಐದು ಮಾದರಿ ಸಹಕಾರಿ ಗ್ರಾಮಗಳನ್ನು ಅಭಿವೃದ್ಧಿಪಡಿಸುವುದು ಸೇರಿವೆ. ಸಹಕಾರಿ ಸಂಘಗಳ ವ್ಯಾಪ್ತಿಯು ಸಾಂಪ್ರದಾಯಿಕ ಕ್ಷೇತ್ರಗಳನ್ನು ಮೀರಿ ಪ್ರವಾಸೋದ್ಯಮ, ಟ್ಯಾಕ್ಸಿ ಸೇವೆಗಳು, ಹಸಿರು ಇಂಧನ ಮತ್ತು ವಿಮೆಯಂತಹ ಕ್ಷೇತ್ರಗಳನ್ನು ಒಳಗೊಂಡಂತೆ ಬಹುಸೇವಾ ಕಾರ್ಯಗಳೊಂದಿಗೆ ವಿಸ್ತರಿಸುತ್ತದೆ. ಜೊತೆಗೆ ಹೊಸ ಉದ್ಯೋಗಾವಕಾಶಗಳನ್ನು ಸೃಷ್ಟಿಸುವುದರ ಮೂಲಕ ಆರ್ಥಿಕ ಸಾಮರ್ಥ್ಯವನ್ನು ವೃದ್ಧಿಸುತ್ತದೆ ಎಂದು ಅವರು ತಿಳಿಸಿದರು.

ಸಹಕಾರಿ ಸಂಘಗಳು ವೃತ್ತಿಪರ, ತಂತ್ರಜ್ಞಾನ–ಸಕ್ರಿಯ ಮತ್ತು ಸ್ವಾವಲಂಬಿಯಾಗುವುದನ್ನು ಖಚಿತಪಡಿಸಿಕೊಳ್ಳುವುದು ನೀತಿಯ ಮುಖ್ಯ ಧ್ಯೇಯಗಳಲ್ಲಿ ಒಂದಾಗಿದೆ. ಕ್ಲಸ್ಟರ್ ಆಧಾರಿತ ಮೇಲ್ವಿಚಾರಣಾ ವ್ಯವಸ್ಥೆ ಮತ್ತು ಪಾರದರ್ಶಕ ಹಣಕಾಸು ವ್ಯವಹಾರಗಳಿಗೆ ಒತ್ತು ನೀಡುವುದರಿಂದ ಸಹಕಾರ ವಲಯವನ್ನು ಹೆಚ್ಚು ಬಲಿಷ್ಠ ಮತ್ತು ಭವಿಷ್ಯಕ್ಕೆ ಅಣಿಗೊಳಿಸುವ ವಿಶಾಲ ಯೋಜನೆಯ ಭಾಗವಾಗಿದೆ ಎಂದರು.

ನೂತನ ಸಹಕಾರ ನೀತಿಯಲ್ಲಿ 83 ಹೊಸ ನೀತಿ ಮಧ್ಯಸ್ಥಿಕೆಗಳನ್ನು ಗುರುತಿಸಲಾಗಿದೆ. ಅವುಗಳಲ್ಲಿ 58 ಪೂರ್ಣಗೊಂಡಿವೆ ಮತ್ತು 3 ಸಂಪೂರ್ಣವಾಗಿ ಅನುಷ್ಠಾನಗೊಂಡಿವೆ. ಗಮನಾರ್ಹ ಮೈಲಿಗಲ್ಲುಗಳಲ್ಲಿ 45,000 ಹೊಸ ಪ್ರಾಥಮಿಕ ಕೃಷಿ ಸಾಲ ಸಂಘಗಳ ಗಣಕೀಕರಣ ಮತ್ತು ಉನ್ನತೀಕರಣ, ಜನೌಷಧಿ ಕೇಂದ್ರಗಳ ಸ್ಥಾಪನೆ, ಪ್ಯಾಕ್ಸ್‌ಗಳ ಮೂಲಕ ಎಲ್‌ಪಿಜಿ ಸಿಲಿಂಡರ್‌ಗಳ ವಿತರಣೆ, ಪೆಟ್ರೋಲ್ ಪಂಪ್‌ಗಳು ಮತ್ತು ಪ್ರಧಾನಮಂತ್ರಿ ಸೂರ್ಯ ಘರ್, ಸೋಲಾರ್ ಬಳಕೆಯ ಯೋಜನೆಯಂತಹ ಸರ್ಕಾರಿ ಯೋಜನೆಗಳನ್ನು ನಿರ್ವಹಿಸುವಂತಹ 25 ಹೊಸ ಕ್ಷೇತ್ರಗಳಿಗೆ ಅವುಗಳ ವಿಸ್ತರಣೆ ಸೇರಿವೆ ಎಂದು ಹರ್ಷ ವ್ಯಕ್ತಪಡಿಸಿದರು.



## ಸ್ವಾಗತ

**ಬೆಂಗಳೂರು :** ದಿನಾಂಕ 23.07.2025 ರಂದು ದಾವಾ ಪಂಚಾಯಿತಿ ನ್ಯಾಯಾಲಯ, ಬೆಂಗಳೂರು ಇದರ ಪೀಠಾಧಿಕಾರಿಗಳಾಗಿ ಅಧಿಕಾರ ವಹಿಸಿಕೊಂಡ ಶ್ರೀ ವಿಜಯಕುಮಾರ್ ಜಿ.ಆರ್ ಇವರನ್ನು ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿ ಪರವಾಗಿ ಮಾನ್ಯ ಅಧ್ಯಕ್ಷರು ಸ್ವಾಗತಿಸಿದರು. ಈ ಸಂದರ್ಭದಲ್ಲಿ ಮಾನ್ಯ ಉಪಾಧ್ಯಕ್ಷರು, ಆಡಳಿತ ಮಂಡಲಿ ನಿರ್ದೇಶಕರು, ವ್ಯವಸ್ಥಾಪಕ ನಿರ್ದೇಶಕರು ಹಾಜರಿದ್ದರು.

## ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ನಡೆದ ಸಂಪರ್ಕ ಸಭೆಯ ವರದಿಗಳು



**ಬೀದರ :** ದಿನಾಂಕ 10.07.2025 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಪ್ರಾಂತೀಯ ಕಛೇರಿ ಕಲಬುರಗಿ ವತಿಯಿಂದ ಬೀದರ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಮತ್ತು ಉಪಾಧ್ಯಕ್ಷರುಗಳಿಗೆ ಸಂಪರ್ಕ ಸಭೆಯನ್ನು ಹೋಟೆಲ್ ಸಂತೋಷ ಕೇಂದ್ರ ಬಸ್ ನಿಲ್ದಾಣದ ಹತ್ತಿರ ಬೀದರ ನಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ ನಂಜನಗೌಡರವರು ನೇರವೇರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿ ಮಾನ್ಯ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತಿಕರ್‌ರವರು ವಹಿಸಿದ್ದರು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಬೀದರ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಉಪಾಧ್ಯಕ್ಷರಾದ ಶ್ರೀ ಸಂಜೀವಕುಮಾರ ಪಾಟೀಲರವರು, ನಿರ್ದೇಶಕರುಗಳಾದ ಶ್ರೀ ಶಿವಬಸಪ್ಪ ಚನ್ನಮಲ್ಲಪ್ಪ, ಜಗನ್ನಾಥ ಕರಂಜೆ, ಉಪಸ್ಥಿತರಿದ್ದರು. ಕಾರ್ಯಕ್ರಮದ ಪ್ರಾಸ್ತವಿಕ ನುಡಿಯನ್ನು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ್‍ಯಾಕಲೆಯವರು ನುಡಿದರು. ಸ್ವಾಗತ ಮತ್ತು ವಂದನಾರ್ಪಣೆಯನ್ನು ಕಲಬುರಗಿ ಮತ್ತು ಬೀದರ ಜಿಲ್ಲೆಯ ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಶಿವಕಾಂತ ಎನ್ ರವರು ನಡೆಸಿಕೊಟ್ಟರು. ಸಂಪರ್ಕ ಸಭೆಯಲ್ಲಿ 56 ಸಹಕಾರಿಗಳಿಂದ 85 ಪ್ರತಿನಿಧಿಗಳು ಭಾಗವಹಿಸಿದ್ದರು.



**ಕೊಪ್ಪಳ :** ದಿನಾಂಕ 25.07.2025 ರಂದು ಕೊಪ್ಪಳ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ಆಡಳಿತ ಮಂಡಳಿ ಸದಸ್ಯರುಗಳಿಗೆ ಸಂಪರ್ಕ ಸಭೆಯನ್ನು ಎನ್.ಸಿ.ಹೆಚ್ ಪ್ಯಾಲೇಸ್ ಕೊಪ್ಪಳ ರಸ್ತೆ, ಕುಷ್ಟಗಿ ಇಲ್ಲಿ ಆಯೋಜಿಸಲಾಗಿತ್ತು. ಸಂಪರ್ಕ ಸಭೆಯ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ ನಂಜನಗೌಡರವರು ನೇರವೇರಿಸಿದರು. ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿ ಮಾನ್ಯ ನಿರ್ದೇಶಕರಾದ ಶ್ರೀ ಜಿ. ಶ್ರೀಧರ ವಹಿಸಿದರು. ಮುಖ್ಯಅತಿಥಿಗಳಾಗಿ ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಮಾನ್ಯ ಅಧ್ಯಕ್ಷರಾದ ಶ್ರೀ ಚನ್ನಬಸಪ್ಪ ಕಡ್ಡಮುಡಿ, ನಿಕಟಪೂರ್ವ ಅಧ್ಯಕ್ಷರಾದ ಶ್ರೀ ನಾಗಲಿಂಗಪ್ಪ ಪತ್ತಾರ, ರವರು, ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಮಾನ್ಯ ಉಪಾಧ್ಯಕ್ಷರು, ನಿರ್ದೇಶಕರು, ಆರ್.ಕೆ.ಡಿಸಿಸಿ ಬ್ಯಾಂಕಿನ ನಿರ್ದೇಶಕರು ಹಾಗೂ ಕಲಬುರಗಿ ಪ್ರಾಂತೀಯ ವ್ಯವಸ್ಥಾಪಕರು ವೇದಿಕೆಯ ಮೇಲೆ ಉಪಸ್ಥಿತರಿದ್ದರು. ಆಡಳಿತ ಮಂಡಳಿಯ ಜವಾಬ್ದಾರಿ ಮತ್ತು ಕರ್ತವ್ಯಗಳ ಕುರಿತು ಹಾಗೂ ಸಹಕಾರಿಗಳ ನಿರ್ದೇಶಕರುಗಳು ಗಮನಿಸಬೇಕಾದ ಅಂಶಗಳ ಕುರಿತು ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ್‍ಯಾಕಲೆಯವರು ಉಪನ್ಯಾಸ ನೀಡಿದರು.

ಸಾಮಾನ್ಯ ಸೇವಾ ಕೇಂದ್ರ ಆರಂಭದ ಸಾಂಕೇತಿಕವಾಗಿ ಎರಡು ಸೌಹಾರ್ದ ಸಹಕಾರಿಗಳಿಗೆ ಕೀಯನ್ನು ವೇದಿಕೆಯ ಮೇಲಿರುವ ಮಾನ್ಯ ಅಧ್ಯಕ್ಷರು, ನಿರ್ದೇಶಕರು ಹಾಗೂ ಗಣ್ಯರಿಂದ ಹಸ್ತಾಂತರಿಸಿಲಾಯಿತು. ಕೃಷಿ ವಿಶ್ವವಿದ್ಯಾಲಯ ರಾಯಚೂರು ವತಿಯಿಂದ ಡಾಕ್ಟರೇಟ್ ಪದವಿ ಪಡೆದ ದೊಡ್ಡ ಬಸವೇಶ್ವರ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ದೇವೆಂದ್ರಪ್ಪ ಬಳೂಟಗಿಯವರಿಗೆ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರು, ನಿರ್ದೇಶಕರು ಸನ್ಮಾನಿಸಿದರು. ಕಾರ್ಯಕ್ರಮದ ಪ್ರಾಸ್ತವಿಕ ನುಡಿಯನ್ನು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ್‍ಯಾಕಲೆಯವರು ನುಡಿದರು. ಕಾರ್ಯಕ್ರಮದಲ್ಲಿ 500 ಪ್ರತಿನಿಧಿಗಳು ಉಪಸ್ಥಿತರಿದ್ದರು.



**ಚಿತ್ರದುರ್ಗ :** ದಿನಾಂಕ 14.07.2025ರಂದು ಚಿತ್ರದುರ್ಗ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ನಿರ್ದೇಶಕರು ಹಾಗೂ ಮುಖ್ಯಕಾರ್ಯ ನಿರ್ವಾಹಕರುಗಳಿಗಾಗಿ ಸಂಪರ್ಕ ಸಭೆಯನ್ನು ಹೋಟೆಲ್ ಐಶ್ವರ್ಯ ಪೋರ್ಟ್, ಚಿತ್ರದುರ್ಗ ಇಲ್ಲಿ ಆಯೋಜಿಸಲಾಗಿತ್ತು. ಸಭೆಯ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ರವರು ನೆರವೇರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ರಘುರಾಮ ರೆಡ್ಡಿ ರವರು ವಹಿಸಿದ್ದರು. ಚಿತ್ರದುರ್ಗ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ವೀರೇಂದ್ರ ಬಾಬು ರವರು, ಉಪಾಧ್ಯಕ್ಷರಾದ ಶ್ರೀ ತಿಪ್ಪೇಸ್ವಾಮಿ ರವರು ಉಪಸ್ಥಿತರಿದ್ದರು. ಪ್ರಾಸ್ತಾವಿಕ ನುಡಿಯನ್ನು ಪ್ರಾಂತೀಯ ಅಧಿಕಾರಿಗಳಾದ ಶ್ರೀ ಶ್ರೀಧರ್ ರವರು ನೆರವೇರಿಸಿದರು. ಕಾರ್ಯಕ್ರಮದ ನಿರೂಪಣೆಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಶಶಿಕುಮಾರ್ ಎಸ್, ರವರು ನಡೆಸಿಕೊಟ್ಟರು. ವಂದನಾರ್ಪಣೆಯನ್ನು ಕಿರಿಯ ಸಹಾಯಕರಾದ ಶ್ರೀ ಯೋಗೇಶ್ ವೈ.ಎಸ್. ರವರು ನೆರವೇರಿಸಿದರು. ವಿಷಯಾಧಾರಿತ ತರಬೇತಿಯಲ್ಲಿ ಸಹಕಾರಿಗಳ ವೃತ್ತಿಪರತೆ ಹಾಗೂ ಸಹಕಾರಿಗಳ ವ್ಯವಹಾರಾಭಿವೃದ್ಧಿ ವಿಷಯದ ಕುರಿತು ಸನ್ನದು ಲೆಕ್ಕಪರಿಶೋಧಕರಾ ಶ್ರೀ ಬಿ.ವಿ. ರವೀಂದ್ರನಾಥ್ ರವರು ಮಾಹಿತಿ ನೀಡಿದರು. 39 ಸೌಹಾರ್ದ ಸಹಕಾರಿಗಳಿಂದ 74 ಜನರು ಭಾಗವಹಿಸಿದ್ದರು.



**ತುಮಕೂರು :** ದಿನಾಂಕ 15.07.2025ರಂದು ತುಮಕೂರು ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ನಿರ್ದೇಶಕರು ಹಾಗೂ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ಸಂಪರ್ಕ ಸಭೆಯನ್ನು ಸೆಕ್ರೆಡ್ ಹಾರ್ಟ್ ಸೌಹಾರ್ದ ಸಹಕಾರಿಯ ಸಭಾಂಗಣ, ತುಮಕೂರು ಇಲ್ಲಿ ಆಯೋಜಿಸಲಾಗಿತ್ತು. ಸಭೆಯ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ರವರು ನೆರವೇರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಸಿ.ಪಿ. ವಿಜಯ್ ರವರು ವಹಿಸಿದ್ದರು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ನಿಕಟಪೂರ್ವ ನಿರ್ದೇಶಕರಾದ ಶ್ರೀ ಬಿ. ಗಂಗಾಧರಯ್ಯ ರವರು, ತುಮಕೂರು ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ಲಕ್ಷ್ಮೀನಾರಾಯಣ ಎಸ್. ರವರು ಉಪಾಧ್ಯಕ್ಷರಾದ ಶ್ರೀ ಲ್ಯಾನ್ಸಿ ಹೆಚ್. ಪಾಯಸ್ ರವರು ಉಪಸ್ಥಿತರಿದ್ದರು. ಪ್ರಾಸ್ತಾವಿಕ ನುಡಿಯನ್ನು ಪ್ರಾಂತೀಯ ಅಧಿಕಾರಿಗಳಾದ ಶ್ರೀ ಶ್ರೀಧರ್ ರವರು ನೆರವೇರಿಸಿದರು. ನಿರೂಪಣೆಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಉಮೇಶ್ ಎ.ಎಸ್ ರವರು ನಡೆಸಿಕೊಟ್ಟರು. ಸಂಪರ್ಕ ಸಭೆಯ ನಂತರ ಸಿಎಸ್‌ಸಿ ಸೇವೆ ನೀಡುವ ಸೌಹಾರ್ದ ಸಹಕಾರಿಗಳಿಗೆ ವೇದಿಕೆ ಮೇಲಿದ್ದ ಗಣ್ಯರು ಕೀ ವಿತರಣೆ ಮಾಡಿ ಶುಭ ಕೋರಿದರು. ವಿಷಯಾಧಾರಿತ ತರಬೇತಿಯಲ್ಲಿ ಸನ್ನದು ಲೆಕ್ಕಪರಿಶೋಧಕರಾದ ಶ್ರೀ ಮಧುಕರ ಹಗ್ಡೆ ರವರು ಜಿಎಸ್‌ಟಿ ಹಾಗೂ ಸೌಹಾರ್ದ ಸಹಕಾರಿಗಳಿಗೆ ಅನ್ವಯಿಸುವ ತೆರಿಗೆ ಕಾಯ್ದೆಗಳು ವಿಷಯದ ಕುರಿತು ಮಾಹಿತಿ ನೀಡಿದರು. 136 ಸೌಹಾರ್ದ ಸಹಕಾರಿಗಳಿಂದ 158 ಜನರು ಭಾಗವಹಿಸಿದ್ದರು.



**ಕಲಬುರಗಿ ಮತ್ತು ಯಾದಗಿರಿ :** ದಿನಾಂಕ : 11.07.2025, ಶುಕ್ರವಾರ ದಂದು ಮಧ್ಯಾಹ್ನ 2:30 ಗಂಟೆಗೆ ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಮತ್ತು ಉಪಾಧ್ಯಕ್ಷರಿಗಾಗಿ ಸಂಪರ್ಕ ಸಭೆಯನ್ನು ಹೋಟಲ್ ಅನಂತ, ಕುಮಾರೇಶ್ವರ ಕಾಲೋನಿ, ಹೊಸ ಜೇವರ್ಗಿ ರಸ್ತೆ, ಕಲಬುರಗಿಯಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ರವರು ನೆರವೇರಿಸಿದರು. ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀಮತಿ ಶೈಲಜಾ ತಪಲಿ ರವರು ವಹಿಸಿದರು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಕಲಬುರಗಿ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಮಾನ್ಯ ಸಂಸ್ಥಾಪಕ ಅಧ್ಯಕ್ಷರಾದ ಶ್ರೀ

ಚಂದ್ರಶೇಖರ ಪರಸರೆಡ್ಡಿ, ಕಲಬುರಗಿ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಮಾನ್ಯ ಅಧ್ಯಕ್ಷರಾದ ಶ್ರೀ ಎಸ್.ಎಸ್ ಪಾಟೀಲ, ಸಂಯುಕ್ತ ಸಹಕಾ–ರಿಯ ಮಾಜಿ ನಿರ್ದೇಶಕರಾದ ಶ್ರೀ ಸಂಜೀವ ಮಹಾಜನ, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲ್ ರವರು ಉಪಸ್ಥಿತರಿದ್ದರು. ಕಾರ್ಯಕ್ರಮದ ಪ್ರಾಸ್ತವಿಕ ನುಡಿಗಳನ್ನು ಕಲಬುರಗಿ ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ್‍ಯಾಕಲೇ ರವರು ನೆರವೇರಿಸಿದರು. ಸ್ವಾಗತ ಮತ್ತು ವಂದನಾರ್ಪಣೆಯನ್ನು ಬೀದರ ಮತ್ತು ಕಲಬುರಗಿ ಜಿಲ್ಲೆಗಳ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಶಿವಕಾಂತ ಎನ್ ರವರು ನಡೆಸಿಕೊಟ್ಟರು. ಸಂಪರ್ಕ ಸಭೆಯಲ್ಲಿ 82 ಸಹಕಾರಿಗಳಿಂದ 82 ಜನರು ಭಾಗವಹಿಸಿದ್ದರು.

ಸಾಮಾನ್ಯ ಸೇವಾ ಕೇಂದ್ರ ಆರಂಭದ ಸಲುವಾಗಿ ಸಾಂಕೇತಿಕವಾಗಿ ಎರಡು ಸೌಹಾರ್ದ ಸಹಕಾರಿಗಳಿಗೆ ಕೀಯನ್ನು ವೇದಿಕೆಯ ಮೇಲಿರುವ ಮಾನ್ಯ ಅಧ್ಯಕ್ಷರು, ನಿರ್ದೇಶಕರು ಹಾಗೂ ಗಣ್ಯರಿಂದ ಹಸ್ತಾಂತರಿಸಲಾಯಿತು

---



**ಬೆಂಗಳೂರು** : ದಿನಾಂಕ 18.07.2025ರಂದು ಬೆಂಗಳೂರು ನಗರ (1&4ನೇ ವಲಯ) ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ನಿರ್ದೇಶಕರು ಹಾಗೂ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ಸಂಪರ್ಕ ಸಭೆಯನ್ನು ಸೌಹಾರ್ದ ಸಹಕಾರಿ ಸೌಧ, ಮಲ್ಲೇಶ್ವರಂ, ಬೆಂಗಳೂರು ಇಲ್ಲಿ ಆಯೋಜಿಸಲಾಗಿತ್ತು. ಸಭೆಯ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ರವರು ನೆರವೇರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಬಿ.ಎಸ್. ಗುಂಡುರಾವ್ ರವರು ವಹಿಸಿದ್ದರು. ವೇದಿಕೆಯಲ್ಲಿ ಬೆಂಗಳೂರು ಜಿಲ್ಲೆಯ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ವೈ. ಕುಮಾರ್ ರವರು ಉಪಸ್ಥಿತರಿದ್ದರು. ಪ್ರಾಸ್ತಾವಿಕ ನುಡಿಯನ್ನು ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲ ರವರು ನೆರವೇರಿಸಿದರು. ಸ್ವಾಗತ ಕಾರ್ಯಕ್ರಮವನ್ನು ಬೆಂಗಳೂರು ಪ್ರಾಂತೀಯ ಅಧಿಕಾರಿಗಳಾದ ಶ್ರೀ ಶ್ರೀಧರ್ ರವರು ನೆರವೇರಿಸಿದರು. ನಿರೂಪಣೆಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ರವಿಕುಮಾರ್ ಕೆ.ಆರ್ ರವರು ನಡೆಸಿಕೊಟ್ಟರು. ವಂದನಾರ್ಪಣೆಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಅನಿಲ್ ಕುಮಾರ್ ರವರು ನೆರವೇರಿಸಿದರು. ಸಂಪರ್ಕ ಸಭೆಯ ನಂತರ ಸಿಎಸ್‌ಸಿ ಸೇವೆ ನೀಡುವ ಸೌಹಾರ್ದ ಸಹಕಾರಿಗಳಿಗೆ ವೇದಿಕೆ ಮೇಲಿದ್ದ ಗಣ್ಯರು ಕೀ ವಿತರಣೆ ಮಾಡಿ ಶುಭ ಕೋರಿದರು. ವಿಷಯಾಧಾರಿತ ತರಬೇತಿಯಲ್ಲಿ ಸನ್ನದು ಲೆಕ್ಕಪರಿಶೋಧಕರಾದ ಶ್ರೀ ಮಧುಕರ ಹಗ್ಡೆ ರವರು ಟಿಡಿಎಸ್, ಜಿಎಸ್‌ಟಿ ಮತ್ತು ಆದಾಯ ತೆರಿಗೆ ವಿಷಯದ ಕುರಿತು ಮಾಹಿತಿ ನೀಡಿದರು. 103 ಸೌಹಾರ್ದ ಸಹಕಾರಿಗಳಿಂದ 147 ಜನರು ಭಾಗವಹಿಸಿದ್ದರು.

---



**ಬೆಂಗಳೂರು** : ದಿನಾಂಕ 19.07.2025ರಂದು ಬೆಂಗಳೂರು ನಗರ (2&3ನೇ ವಲಯ) ಹಾಗೂ ರಾಮನಗರ ಜಿಲ್ಲೆಯ ಸೌಹಾರ್ದ ಸಹಕಾ–ರಿಗಳ ಅಧ್ಯಕ್ಷರು, ನಿರ್ದೇಶಕರು ಹಾಗೂ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ಸಂಪರ್ಕ ಸಭೆಯನ್ನು ಉದಯ ಸೌಹಾರ್ದ ಸಹಕಾರಿ ಸಂಘ ನಿ, ಹನುಮಂತನಗರ, ಬೆಂಗಳೂರು ಇಲ್ಲಿ ಆಯೋಜಿಸಲಾಗಿತ್ತು. ಸಭೆಯ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ರವರು ನೆರವೇರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಬಿ.ಎಸ್. ಗುಂಡುರಾವ್ ರವರು ವಹಿಸಿದ್ದರು. ವೇದಿಕೆಯಲ್ಲಿ ಬೆಂಗಳೂರು ಜಿಲ್ಲೆಯ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ವೈ. ಕುಮಾರ್ ರವರು ಉಪಸ್ಥಿತರಿದ್ದರು. ಪ್ರಾಸ್ತಾವಿಕ ನುಡಿಯನ್ನು ಬೆಂಗಳೂರು ಪ್ರಾಂತೀಯ ಅಧಿಕಾರಿಗಳಾದ ಶ್ರೀ ಶ್ರೀಧರ್ ರವರು ನೆರವೇರಿಸಿದರು. ಸ್ವಾಗತ ಕಾರ್ಯಕ್ರಮವನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಲಕ್ಷ್ಮೀಕಾಂತ್ ಎ.ಎಂ. ರವರು ನೆರವೇರಿಸಿದರು. ನಿರೂಪಣೆಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ರವಿಕುಮಾರ್ ಕೆ.ಆರ್ ರವರು ನಡೆಸಿಕೊಟ್ಟರು. ವಂದನಾರ್ಪಣೆಯನ್ನು ಕಿರಿಯ ಅಧಿಕಾರಿಗಳಾದ ಶ್ರೀ ಭವನ್‌ರಾವ್ ರವರು ನೆರವೇರಿಸಿದರು. ಸಂಪರ್ಕ ಸಭೆಯ ನಂತರ ಸಿಎಸ್‌ಸಿ ಸೇವೆ ನೀಡುವ ಸೌಹಾರ್ದ ಸಹಕಾರಿಗಳಿಗೆ ವೇದಿಕೆ ಮೇಲಿದ್ದ ಗಣ್ಯರು ಕೀ ವಿತರಣೆ ಮಾಡಿ ಶುಭ ಕೋರಿದರು. ವಿಷಯಾಧಾರಿತ ತರಬೇತಿಯಲ್ಲಿ ಸನ್ನದು ಲೆಕ್ಕಪರಿಶೋಧಕರಾದ ಶ್ರೀ ಮಧುಕರ ಹಗ್ಡೆ ರವರು ಟಿಡಿಎಸ್, ಜಿಎಸ್‌ಟಿ ಮತ್ತು ಆದಾಯ ತೆರಿಗೆ ವಿಷಯದ ಕುರಿತು ಮಾಹಿತಿ ನೀಡಿದರು. 52 ಸೌಹಾರ್ದ ಸಹಕಾರಿಗಳಿಂದ 90 ಜನರು ಭಾಗವಹಿಸಿದ್ದರು.



**ದಾವಣಗೆರೆ :** ದಿನಾಂಕ 21.07.2025ರಂದು ದಾವಣಗೆರೆ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ನಿರ್ದೇಶಕರು ಹಾಗೂ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ಸಂಪರ್ಕ ಸಭೆಯನ್ನು ಗಿಹಾನ್ ಸಭಾಂಗಣ, ಶ್ರೀಗಂಧ ರೆಸಿಡೆನ್ಸಿ, ದಾವಣಗೆರೆ ಇಲ್ಲಿ ಆಯೋಜಿಸಲಾಗಿತ್ತು. ಸಭೆಯ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ರವರು ನೆರವೇರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಎಂ.ಆರ್. ಪ್ರಭುದೇವ್ ರವರು ವಹಿಸಿದ್ದರು. ವೇದಿಕೆಯಲ್ಲಿ ದಾವಣಗೆರೆ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ಎಸ್.ಟಿ. ವೀರೇಶ್ ರವರು, ಉಪಾಧ್ಯಕ್ಷರಾದ ಶ್ರೀ ರುದ್ರೇಗೌಡ್ರು ರವರು, ಸಿಎ ಅಸೋಸಿಯೇಷನ್ ಇದರ ಅಧ್ಯಕ್ಷರಾದ ಶ್ರೀ ಉಮೇಶ್ ಶೆಟ್ಟಿ ರವರು ಉಪಸ್ಥಿತರಿದ್ದರು. ಪ್ರಾಸ್ತಾವಿಕ ನುಡಿಗಳನ್ನು ಬೆಂಗಳೂರು ಪ್ರಾಂತೀಯ ಅಧಿಕಾರಿಗಳಾದ ಶ್ರೀ ಶ್ರೀಧರ್ ರವರು ನೆರವೇರಿಸಿದರು. ನಿರೂಪಣೆಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಶಶಿಕುಮಾರ್ ಎಸ್. ರವರು ನಡೆಸಿಕೊಟ್ಟರು. ವಂದನಾರ್ಪಣೆಯನ್ನು ಕಿರಿಯ ಸಹಾಯಕರಾದ ಶ್ರೀ ವೈ. ಎಸ್. ಯೋಗೇಶ್ ರವರು ನೆರವೇರಿಸಿದರು. ವಿಷಯಾಧಾರಿತ ತರಬೇತಿಯಲ್ಲಿ ಸನ್ನದು ಲೆಕ್ಕಪರಿಶೋಧಕರಾದ ಶ್ರೀ ವರುಣ್ ಭಟ್ ರವರು ಸಹಕಾರಿಗಳಿಗೆ ಅನ್ವಯಿಸುವ ಆದಾಯ ತೆರಿಗೆ ಮತ್ತು ಜಿಎಸ್‌ಟಿ ವಿಷಯದ ಕುರಿತು ಮಾಹಿತಿ ನೀಡಿದರು. 51 ಸೌಹಾರ್ದ ಸಹಕಾರಿಗಳಿಂದ 138 ಜನ ಭಾಗವಹಿಸಿದ್ದರು.



**ಚಿಕ್ಕಬಳ್ಳಾಪುರ :** ದಿನಾಂಕ 22.07.2025ರಂದು ಚಿಕ್ಕಬಳ್ಳಾಪುರ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ನಿರ್ದೇಶಕರು ಹಾಗೂ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ಸಂಪರ್ಕ ಸಭೆಯನ್ನು ಹೋಟೆಲ್ ಶ್ರೀ ಅಂಭಾ ಭವಾನಿ, ಚಿಕ್ಕಬಳ್ಳಾಪುರ ಇಲ್ಲಿ ಆಯೋಜಿಸಲಾಗಿತ್ತು. ಸಭೆಯ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ರವರು ನೆರವೇರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ರವರು ಹಾಗೂ ಸಂಯುಕ್ತ ಸಹಕಾರಿಯ ಮಾಜಿ ನಿರ್ದೇಶಕರಾದ ಶ್ರೀ ನಾಗೇಂದ್ರ ಗುಪ್ತ ವಹಿಸಿದ್ದರು. ವೇದಿಕೆಯಲ್ಲಿ ಚಿಕ್ಕಬಳ್ಳಾಪುರ ಹಾಗೂ ಕೋಲಾರ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ಅಮರ್ ರವರು ಉಪಸ್ಥಿತರಿದ್ದರು. ಪ್ರಾಸ್ತಾವಿಕ ನುಡಿಗಳನ್ನು ಪ್ರಾಂತೀಯ ಅಧಿಕಾರಿಗಳಾದ ಶ್ರೀ ಶ್ರೀಧರ್ ರವರು ನೆರವೇರಿಸಿದರು. ಸ್ವಾಗತ ಕಾರ್ಯಕ್ರಮವನ್ನು ಕಿರಿಯ ಅಧಿಕಾರಿಗಳಾದ ಶ್ರೀ ಭವನ್‌ರಾವ್ ರವರು ನಡೆಸಿಕೊಟ್ಟರು. ನಿರೂಪಣೆಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಅನಿಲ್ ಕುಮಾರ್ ಎಮ್. ರವರು ನೆರವೇರಿಸಿದರು. ಸಂಪರ್ಕ ಸಭೆಯ ನಂತರ ಸಿಎಸ್‌ಸಿ ಸೇವೆ ನೀಡುವ ಸೌಹಾರ್ದ ಸಹಕಾರಿಗಳಿಗೆ ವೇದಿಕೆ ಮೇಲಿದ್ದ ಗಣ್ಯರು ಕೀ ವಿತರಣೆ ಮಾಡಿ ಶುಭ ಕೋರಿದರು. ವಿಷಯಾಧಾರಿತ ತರಬೇತಿಯಲ್ಲಿ ಸನ್ನದು ಲೆಕ್ಕಪರಿಶೋಧಕರಾದ ಶ್ರೀ ಅನಿಲ್ ಭಾರದ್ವಾಜ್ ರವರು ಟಿಡಿಎಸ್, ಜಿಎಸ್‌ಟಿ ಮತ್ತು ಆದಾಯ ತೆರಿಗೆ ವಿಷಯದ ಕುರಿತು ಮಾಹಿತಿ ನೀಡಿದರು. 21 ಸೌಹಾರ್ದ ಸಹಕಾರಿಗಳಿಂದ 52 ಜನರು ಭಾಗವಹಿಸಿದ್ದರು.



**ಕೋಲಾರ :** ದಿನಾಂಕ 22.07.2025ರಂದು ಕೋಲಾರ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ನಿರ್ದೇಶಕರು ಹಾಗೂ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ಸಂಪರ್ಕ ಸಭೆಯನ್ನು ಕೋಲಾರ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನ, ಕೋಲಾರ ಇಲ್ಲಿ ಆಯೋಜಿಸಲಾಗಿತ್ತು. ಸಭೆಯ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ರವರು ನೆರವೇರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ರವರು ವಹಿಸಿದ್ದರು. ವೇದಿಕೆಯಲ್ಲಿ ಚಿಕ್ಕಬಳ್ಳಾಪುರ ಹಾಗೂ ಕೋಲಾರ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ಅಮರ್ ರವರು ಉಪಸ್ಥಿತರಿದ್ದರು. ಪ್ರಾಸ್ತಾವಿಕ ನುಡಿಗಳನ್ನು ಪ್ರಾಂತೀಯ ಅಧಿಕಾರಿಗಳಾದ ಶ್ರೀ ಶ್ರೀಧರ್ ರವರು ನೆರವೇರಿಸಿದರು. ನಿರೂಪಣೆಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಅನಿಲ್ ಕುಮಾರ್ ಎಮ್. ರವರು ನೆರವೇರಿಸಿದರು. ಸಂಪರ್ಕ ಸಭೆಯ ನಂತರ ಸಿಎಸ್‌ಸಿ ಸೇವೆ ನೀಡುವ ಸೌಹಾರ್ದ ಸಹಕಾರಿಗಳಿಗೆ ವೇದಿಕೆ ಮೇಲಿದ್ದ ಗಣ್ಯರು ಕೀ ವಿತರಣೆ ಮಾಡಿ ಶುಭ ಕೋರಿದರು. ವಿಷಯಾಧಾರಿತ ತರಬೇತಿಯಲ್ಲಿ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ರವಿಕುಮಾರ್ ಕೆ.ಆರ್ ರವರು ಮುಖ್ಯಕಾರ್ಯನಿರ್ವಾಹಕರ ಜವಾಬ್ದಾರಿ ಮತ್ತು ಕರ್ತವ್ಯಗಳ ವಿಷಯದ ಕುರಿತು ಮಾಹಿತಿ ನೀಡಿದರು. 13 ಸೌಹಾರ್ದ ಸಹಕಾರಿಗಳಿಂದ 38 ಜನರು ಭಾಗವಹಿಸಿದ್ದರು.



**ಚಿಕ್ಕಮಗಳೂರು :** ಚಿಕ್ಕಮಗಳೂರು ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕರು ಗಳಿಗಾಗಿ ಸಂಪರ್ಕ ಸಭೆ ಮತ್ತು ವಿಷಯಾಧಾರಿತ ತರಬೇತಿ ಕಾರ್ಯಕ್ರಮವನ್ನು ದಿನಾಂಕ : 29.07.2025ರ ಮಂಗಳವಾರದಂದು ಹೋಟೆಲ್ ಕ್ರಿಸ್ಟಲಿನ್, ಶಂಕರಮಠ ರಸ್ತೆ, ಬಸವನಹಳ್ಳಿ, ಚಿಕ್ಕಮಗಳೂರು ಇಲ್ಲಿ ಜರುಗಿಸಲಾಯಿತು. ಸಂಪರ್ಕ ಸಭೆಯನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ ನಂಜನಗೌಡ ರವರು ಉದ್ಘಾಟಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಮಂಜುನಾಥ್ ಎಸ್.ಕೆ ರವರು ವಹಿಸಿದ್ದರು. ವೇದಿಕೆಯಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀಮತಿ ಭಾರತಿ ಜಿ. ಭಟ್ ಹಾಗೂ ಚಿಕ್ಕಮಗಳೂರು ಜಿಲ್ಲೆಯ ಸೌಹಾರ್ದ ಸಹಕಾರಿ ಸಂಘಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ವೈ.ಎಸ್. ಸುಬ್ರಹ್ಮಣ್ಯ, ಒಕ್ಕೂಟದ ಉಪಾಧ್ಯಕ್ಷರಾದ ಶ್ರೀ ದೇವರಾಜ್ ರವರು ಉಪಸ್ಥಿತರಿದ್ದರು. ಸಂಯುಕ್ತ ಸಹಕಾರಿಯ ಮೈಸೂರು ಪ್ರಾಂತೀಯ ಅಧಿಕಾರಿಗಳಾದ ಶ್ರೀ ಗುರುಪ್ರಸಾದ್ ಬಂಗೇರಾ ರವರು ಪ್ರಾಸ್ತಾವಿಕ ಮಾತುಗಳನ್ನು ಆಡಿದರು. ಉದ್ಘಾಟನಾ ನಂತರ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ ನಂಜನಗೌಡರವರು ಸಂಪರ್ಕಸಭೆಯನ್ನು ಉದ್ದೇಶಿಸಿ ಮಾತನಾಡಿದರು. ನಂತರ ಸೌಹಾರ್ದ ಸಹಕಾರಿಗಳು ಪ್ರಶ್ನೆಗಳನ್ನು ಕೇಳಿದರು. ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರು ಸಹಕಾರಿಗಳ ಪ್ರಶ್ನೆಗಳಿಗೆ ಉತ್ತರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಮಂಜುನಾಥ್ ಎಸ್.ಕೆ ರವರು ಅಧ್ಯಕ್ಷತೆಯ ಭಾಷಣ ನಡೆಸಿಕೊಟ್ಟರು. ಕಾರ್ಯಕ್ರಮದ ಸ್ವಾಗತ, ನಿರೂಪಣೆ ಮತ್ತು ವಂದನಾರ್ಪಣೆಯನ್ನು ಸಂಯುಕ್ತ ಸಹಕಾರಿಯ ಸೌಹಾರ್ದ ಅಭಿವೃದ್ಧಿ ಅಧಿಕಾರಿ ಶ್ರೀ ಅಶೋಕ್ ಜಿ ರವರು ನಡೆಸಿದರು. ಸಂಪರ್ಕಸಭೆಯ ನಂತರದಲ್ಲಿ "ಸಹಕಾರಿ ಸಂಸ್ಥೆಗಳ ಆರ್ಥಿಕ ಶಿಸ್ತಿನ ನಿರ್ವಹಣೆಯಲ್ಲಿ ನಿರ್ದೇಶಕರ ಹಕ್ಕುಗಳು ಮತ್ತು ಕರ್ತವ್ಯಗಳು" ವಿಷಯದ ಕುರಿತು ಶ್ರೀ ಎಚ್.ಎಸ್. ನಾಗರಾಜಯ್ಯ, ಮಾನ್ಯ ಸಹಕಾರ ಸಂಘಗಳ ಅಪರ ನಿಬಂಧಕರು (ನಿ.) ಇವರು ತರಬೇತಿಯನ್ನು ನೀಡಿದರು. ಚಿಕ್ಕಮಗಳೂರು ಸೌಹಾರ್ದ ಸಹಕಾರಿಗಳ ಮೂಲಕ ಸಿ.ಎಸ್.ಸಿ ಕೇಂದ್ರದ ಪ್ರಾರಂಭದ ಸಲುವಾಗಿ ಸಾಂಕೇತಿಕವಾಗಿ ಸಮಾನ ಪತ್ತಿನ ಸೌಹಾರ್ದ ಸಹಕಾರಿ ಚಿಕ್ಕಮಗಳೂರು ಹಾಗೂ ಯಡಗೆರೆ ಸೌಹಾರ್ದ ಸಹಕಾರಿ ಸಂಘ ನಿ., ಕೊಪ್ಪ, ಈ ಸೌಹಾರ್ದ ಸಹಕಾರಿಗಳಿಗೆ ಸಿ.ಎಸ್.ಸಿ ಕೀಯನ್ನು ವೇದಿಕೆ ಮೇಲಿದ್ದ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರು ಹಾಗೂ ಗಣ್ಯರು ಹಸ್ತಾಂತರಿಸಿದರು. ಸಿ.ಎಸ್.ಸಿ ಕುರಿತಾಗಿ ಸೌಹಾರ್ದ ಸಂಯುಕ್ತ ಸಹಕಾರಿಯ ಅಧ್ಯಕ್ಷರು ಶ್ರೀ ಜಿ.ನಂಜನಗೌಡ ರವರು ಸಹಕಾರಿಗಳಿಗೆ ಮಾಹಿತಿ ನೀಡಿದರು. ಚಿಕ್ಕಮಗಳೂರು ಜಿಲ್ಲೆಯ 24 ಸೌಹಾರ್ದ ಸಹಕಾರಿಗಳಿಂದ 48 ಜನರು ಭಾಗವಹಿಸಿದ್ದರು.

---



**ದಕ್ಷಿಣ ಕನ್ನಡ :** ದಕ್ಷಿಣ ಕನ್ನಡ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕರುಗಳಿಗಾಗಿ ಸಂಪರ್ಕಸಭೆ ಮತ್ತು ವಿಷಯಾಧಾರಿತ ತರಬೇತಿ ಕಾರ್ಯಕ್ರಮವನ್ನು ದಿನಾಂಕ 30.07.2025ರ ಬುಧವಾರದಂದು ಹೋಟೆಲ್ ಶ್ರೀನಿವಾಸ, ಹಂಪನಕಟ್ಟೆ ಮಂಗಳೂರು ಇಲ್ಲಿ ಏರ್ಪಡಿಸಲಾಗಿತ್ತು. ಪ್ರಾರಂಭದಲ್ಲಿ ಸಿ.ಎಸ್.ಸಿ. ಕೇಂದ್ರಗಳಲ್ಲಿ ಲಭ್ಯವಿರುವ ಸೇವೆಯ ಕುರಿತಾಗಿ ದಕ್ಷಿಣ ಕನ್ನಡ ಜಿಲ್ಲಾ ಸಂಯೋಜಕರಾದ ಶ್ರೀ ಗೋವರ್ಧನ್ ಡಿ.ಎಂ ರವರು ಸಭೆಗೆ ಮಾಹಿತಿ ನೀಡಿದರು. ತದನಂತರ ಸಂಪರ್ಕ ಸಭೆಯನ್ನು ಕರ್ನಾಟಕ ರಾಜ್ಯ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡರವರು ಉದ್ಘಾಟಿಸಿದರು. ಕಾರ್ಯಕ್ರಮದ ಆಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀಮತಿ ಭಾರತಿ ಜಿ ಭಟ್ ರವರು ವಹಿಸಿದ್ದರು. ವೇದಿಕೆಯಲ್ಲಿ ಎಸ್.ಆರ್. ಸತೀಶ್ಚಂದ್ರ, ಮಾಜಿ ಅಧ್ಯಕ್ಷರು ಕ.ರಾಸೌ.ಸ.ಸ ನಿ. ಹಾಗು ಅಧ್ಯಕ್ಷರು ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಸಂಘಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ಭಾಸ್ಕರ್ ದೇವಸ್ಯ ಇವರು ಉಪಸ್ಥಿತರಿದ್ದರು. ಸಂಯುಕ್ತ ಸಹಕಾರಿಯ ಮೈಸೂರು ವಿಭಾಗದ ಪ್ರಾಂತೀಯ ಅಧಿಕಾರಿಗಳಾದ ಶ್ರೀ ಗುರುಪ್ರಸಾದ್ ಬಂಗೇರ ರವರು ಪ್ರಾಸ್ತಾವಿಕ ಮಾತುಗಳನ್ನು ನುಡಿದರು. ಉದ್ಘಾಟನೆಯ ನಂತರ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡರವರು ಸಂಪರ್ಕ ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ನಂತರ ಸೌಹಾರ್ದ ಸಹಕಾರಿಗಳು ಪ್ರಶ್ನೆಗಳನ್ನು ಕೇಳಿದರು ಮತ್ತು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರು ಪ್ರಶ್ನೆಗಳಿಗೆ ಉತ್ತರಿಸಿದರು. ಅಧ್ಯಕ್ಷತೆಯನ್ನು ವಹಿಸಿದ್ದ ಸಂಯುಕ್ತ ಸಹಕಾರಿಯ ನಿರ್ದೇಶಕರಾಧ ಶ್ರೀಮತಿ ಭಾರತಿ ಜಿ ಭಟ್ ರವರು ಅಧ್ಯಕ್ಷೀಯ ಭಾಷಣವನ್ನು ಮಾಡಿದರು. ಕ್ರಾಯಕ್ರಮದ ಸ್ವಾಗತ ಮತ್ತು ನಿರೂಪಣೆಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿ ಶ್ರೀ ವಿಜಯ್ ಬಿ.ಎಸ್ ರವರು ಮತ್ತು ಕಾರ್ಯಕ್ರಮದ ವಂದನಾರ್ಪಣೆಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿ ಶ್ರೀ ನಂದನ್ ಬಿ.ಎನ್ ನೆರವೇರಿಸಿದರು.

ಸಂಪರ್ಕ ಸಭೆಯ ನಂತರದಲ್ಲಿ ಸಹಕಾರಿ ಸಂಸ್ಥೆಗಳ ಆರ್ಥಿಕ ಶಿಸ್ತಿನ ನಿರ್ವಹಣೆಯಲ್ಲಿ ನಿರ್ದೇಶಕರ ಹಕ್ಕುಗಳು ಮತ್ತು ಕರ್ತವ್ಯಗಳು ವಿಷಯದ ಕುರಿತು ಶ್ರೀ ಹೆಚ್.ಎಸ್. ನಾಗರಾಜಯ್ಯ, ಮಾನ್ಯ ಸಹಕಾರ ಸಂಘಗಳ ಅಪರ ನಿಬಂಧಕರು (ನಿ) ಇವರು ತರಬೇತಿಯನ್ನು ನೀಡಿದರು ಸಿ.ಎಸ್.ಸಿ ಕೇಂದ್ರದ ಪ್ರಾರಂಭದ ಸಲುವಾಗಿ ಸಾಂಕೇತಿಕವಾಗಿ ಶರ್ವಾಣಿ ಕ್ರೆಡಿಟ್ ಸೌಹಾರ್ದ ಸಹಕಾರಿ ಬಂಟ್ವಾಳ ತಾಲ್ಲೂಕು, ವಂದೇ ಮಾತರಂ ಸೌಹಾರ್ದ ಸಹಕಾರಿ ಮೂಡುಬಿದರೆ ತಾಲ್ಲೂಕು, ಶ್ರೀ ಗುರುಶಕ್ತಿ ಸೌಹಾರ್ದ ಸಹಕಾರಿ ಮಂಗಳೂರು ತಾಲ್ಲೂಕು, ಜಾಗೋಭಾರತ್ ಸೌಹಾರ್ದ ಸಹಕಾರಿ ಕಡಬ ತಾಲ್ಲೂಕು ಈ ಎಲ್ಲಾ ಸಹಕಾರಿಗಳಿಗೆ ಕೀ ಯನ್ನು ವೇದಿಕೆ ಮೇಲಿದ್ದ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರು ಹಾಗು ಗಣ್ಯರು ಹಸ್ತಾಂತರಿಸಿದರು. ಸಿ.ಎಸ್.ಸಿ ಕೇಂದ್ರದ ಕುರಿತಾಗಿ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಜಿ.ನಂಜನಗೌಡರವರು ಸಹಕಾರಿಗಳಿಗೆ ಮಾಹಿತಿ ನೀಡಿದರು. ದಕ್ಷಿಣ ಕನ್ನಡ ಜಿಲ್ಲೆಯ 88 ಸೌಹಾರ್ದ ಸಹಕಾರಿಗಳಿಂದ 183 ಜನರು ಭಾಗವಹಿಸಿದ್ದರು.



**ಹಾಸನ :** ಹಾಸನ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕರುಗಳಿಗಾಗಿ ಸಂಪರ್ಕ ಸಭೆ ಮತ್ತು ವಿಷಯಾಧಾರಿತ ತರಬೇತಿ ಕಾರ್ಯಕ್ರಮ ವನ್ನು ದಿನಾಂಕ 31.07.2025 ರ ಗುರುವಾರದಂದು ಹೋಟೆಲ್ ಜ್ಯುವೆಲ್ ರಾಕ್, ಬಿ.ಎಮ್ ರೋಡ್, ಹಾಸನ, ಇಲ್ಲಿ ಜರುಗಿಸಲಾಯಿತು. ಸಂಪರ್ಕ ಸಭೆಯನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ ನಂಜನಗೌಡ ರವರು ಉದ್ಘಾಟಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಮಂಜುನಾಥ್ ಎಸ್.ಕೆ ರವರು ವಹಿಸಿದ್ದರು. ವೇದಿಕೆಯಲ್ಲಿ ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀಮತಿ ಭಾರತಿ ಜಿ.ಭಟ್ ಹಾಗೂ ಹಾಸನ ಜಿಲ್ಲೆಯ ಸೌಹಾರ್ದ ಸಹಕಾರಿಯ ಒಕ್ಕೂಟದ ಮುಖ್ಯ ಪ್ರವರ್ತಕರಾದ ಶ್ರೀ ಮಾಧವ ಶೆಣೈ ರವರು ಉಪಸ್ಥಿತರಿದ್ದರು. ಸಂಯುಕ್ತ ಸಹಕಾರಿಯ ಮೈಸೂರು ಪ್ರಾಂತೀಯ ಅಧಿಕಾರಿಗಳಾದ ಶ್ರೀ ಗುರುಪ್ರಸಾದ್ ಬಂಗೇರಾ ರವರು ಪ್ರಾಸ್ತಾವಿಕ ಮಾತುಗಳನ್ನು ಆಡಿದರು. ಉದ್ಘಾಟನಾ ನಂತರ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ ನಂಜನಗೌಡರವರು ಸಂಪರ್ಕ ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ನಂತರ ಸೌಹಾರ್ದ ಸಹಕಾರಿಗಳು ಪ್ರಶ್ನೆಗಳನ್ನು ಕೇಳಿದರು. ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರು ಪ್ರಶ್ನೆಗಳಿಗೆ ಉತ್ತರಿಸಿದರು. ಅಧ್ಯಕ್ಷತೆಯನ್ನು ವಹಿಸಿದ್ದ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಮಂಜುನಾಥ್ ಎಸ್.ಕೆ ರವರು ಅಧ್ಯಕ್ಷತೆಯ ಭಾಷಣ ನಡೆಸಿಕೊಟ್ಟರು. ಕಾರ್ಯಕ್ರಮದ ಸ್ವಾಗತ ಮತ್ತು ನಿರೂಪಣೆಯನ್ನು ಸಂಯುಕ್ತ ಸಹಕಾರಿಯ ಸೌಹಾರ್ದ ಅಭಿವೃದ್ಧಿ ಅಧಿಕಾರಿ ಶ್ರೀ ಅಶೋಕ್ ಜಿ ರವರು ನಡೆಸಿದರು, ವಂದನಾರ್ಪಣೆಯನ್ನು ಸಂಯುಕ್ತ ಸಹಕಾರಿಯ ತರಬೇತಿ ವಿಭಾಗದ ಅಧಿಕಾರಿಗಳಾದ ಶ್ರೀ ಬಾಬು ಪಠಾಣ್ ರವರು ನಡೆಸಿಕೊಟ್ಟರು. ಸಂಪರ್ಕಸಭೆಯ ನಂತರದಲ್ಲಿ ಸಹಕಾರಿ ಸಂಸ್ಥೆಗಳ ಆರ್ಥಿಕ ಶಿಸ್ತಿನ ನಿರ್ವಹಣೆಯಲ್ಲಿ ನಿರ್ದೇಶಕರ ಹಕ್ಕುಗಳು ಮತ್ತು ಕರ್ತವ್ಯಗಳು ವಿಷಯದ ಕುರಿತು ಶ್ರೀ ವೈ.ವಿ ಗುಂಡುರಾವ್,ಅಸಿಸ್ಟೆಂಟ್ ಜನರಲ್ ಮ್ಯಾನೇಜರ್ ನಬಾರ್ಡ್,(ನಿ.) ಇವರು ತರಬೇತಿಯನ್ನು ನೀಡಿದರು. ಸಿ.ಎಸ್.ಸಿ ಕೇಂದ್ರದ ಪ್ರಾರಂಭದ ಸಲುವಾಗಿ ಸಾಂಕೇತಿಕವಾಗಿ ಸಹನಾ ವಿವಿಧೋದ್ದೇಶ ಸೌಹಾರ್ದ ಸಹಕಾರಿ ಹಾಸನ, ಬಿ.ಜಿ.ಎಸ್ ಸೌಹಾರ್ದ ಸಹಕಾರಿ ಚನ್ನರಾಯಪಟ್ಟಣ, ಹಾಗೂ ಶ್ರೀ ಸಾಯ್ ಸಕಲೇಶ್ವರಿ ಸೌಹಾರ್ದ ಸಹಕಾರಿ ಚನ್ನರಾಯಪಟ್ಟಣ, ಸೌಹಾರ್ದ ಸಹಕಾರಿಗಳಿಗೆ ಕೀಯನ್ನು ವೇದಿಕೆ ಮೇಲಿದ್ದ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರು ಹಾಗೂ ಗಣ್ಯರು ಹಸ್ತಾಂತರಿಸಿದರು. ಹಾಸನ ಜಿಲ್ಲೆಯ 38 ಸೌಹಾರ್ದ ಸಹಕಾರಿಗಳಿಂದ 92 ಜನರು ಭಾಗವಹಿಸಿದ್ದರು.



**ಗದಗ :** ದಿನಾಂಕ 31.07.2025 ರಂದು ಗದಗ ಜಿಲ್ಲೆಯ ನಷ್ಟದಲ್ಲಿರುವ ಸೌಹಾರ್ದ ಸಹಕಾರಿಗಳ ಆಡಳಿತ ಮಂಡಳಿ ಸದಸ್ಯರಿಗೆ ಮತ್ತು ಮುಖ್ಯಕಾರ್ಯನಿರ್ವಾಹಕರಿಗೆ ವ್ಯವಹಾರ ಅಭಿವೃದ್ಧಿ ತರಬೇತಿಯನ್ನು ದಿ ಮುಳಗುಂದ ಅರ್ಬನ್ ಸೌಹಾರ್ದ ಕೋ-ಆಪ್ ಬ್ಯಾಂಕ, ಶಾಖೆ ಗದಗ ಇಲ್ಲಿ ಆಯೋಜಿಸಲಾಗಿತ್ತು. ತರಬೇತಿ ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ನಾಗರಾಜ ದೇಶಪಾಂಡೆ ಇವರು ನೆರವೇರಿಸಿದರು. ಮೊದಲನೇಯ ಅವಧಿಯಲ್ಲಿ ಕ್ರೀಯಾಯೋಜನೆ ವಿಷಯದ ಕುರಿತು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಕಲ್ಮೇಶ ಎಮ್ ಇವರು ಮಾಹಿತಿ ನೀಡಿದರು. ಮಧ್ಯಾನ್ಹದ ಅವಧಿಯಲ್ಲಿ ವ್ಯವಹಾರ ಅಭಿವೃದ್ಧಿ ವಿಷಯದ ಕುರಿತು ಶ್ರೀಮತಿ ರೇಷ್ಮಾ ಪಾಟೀಲ ಇವರು ಮಾಹಿತಿ ನೀಡಿದರು. ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಕಲ್ಮೇಶ ಎಮ್ ಇವರು ಕಾರ್ಯಕ್ರಮ ನಿರೂಪಿಸಿದರು. ಈ ತರಬೇತಿಯಲ್ಲಿ ಒಟ್ಟು 10 ಸೌಹಾರ್ದ ಸಹಕಾರಿಗಳಿಂದ 20 ಜನ ಪ್ರತಿನಿಧಿಗಳು ಭಾಗಿಯಾಗಿದ್ದರು.



**ಬೆಳಗಾವಿ :** ದಿನಾಂಕ 07.07.2025 ರಂದು ಬೆಳಗಾವಿ ಜಿಲ್ಲೆಯ ಬೆಳಗಾವಿ, ಖಾನಾಪುರ ಮತ್ತು ಹುಕ್ಕೇರಿ ತಾಲೂಕಿನ ಸೌಹಾರ್ದ ಸಹಕಾ–ರಿಗಳ ಮುಖ್ಯಕಾರ್ಯನಿರ್ವಾಹಕರಿಗೆ ವಿಷಯಾಧಾರಿತ ತರಬೇತಿಯನ್ನು ಮಹಾಂತ ಭವನ, ಮಹಾಂತೇಶ ನಗರ, ಬೆಳಗಾವಿ ಇಲ್ಲಿ ಆಯೋಜಿಸಲಾಗಿತ್ತು. ತರಬೇತಿ ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಗದೀಶ ಕವಟಗಿಮಠ ಇವರು ನೇರವೇ–ರಿಸಿದರು. ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಜಿ.ಕೆ. ರಾಮಪ್ಪರವರು ಮತ್ತು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ ಹೊಂಗಲ ಇವರು ವೇದಿಕೆ ಮೇಲೆ ಉಪಸ್ಥಿತರಿದ್ದರು. ಮೊದಲನೇ ಅವಧಿಯಲ್ಲಿ ಲೆಕ್ಕಪತ್ರಗಳ ಅಂತಿಮಗೊಳಿಸುವಿಕೆ ವಿಷಯದ ಕುರಿತು ಜಿ.ಕೆ.ರಾಮಪ್ಪ ಉಪನಿರ್ದೇಶಕರು(ನಿ), ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆ, ಇವರು ಉಪನ್ಯಾಸ ನೀಡಿದರು. ಎರಡನೇ ಅವಧಿಯಲ್ಲಿ ವ್ಯವಹಾರ ಅಭಿವೃದ್ಧಿ ಮತ್ತು ಗ್ರಾಹಕ ಸಂಬಂಧ ನಿರ್ವಹಣೆ ವಿಷಯದ ಕುರಿತು ವಿಕಾಸ ಸೌಹಾರ್ದ ಕೋ–ಆಪ್ ಬ್ಯಾಂಕ್, ಹೊಸಪೇಟೆ ಇದರ ನಿರ್ದೇಶಕರಾದ ಶ್ರೀ ಅಮೃತ ಜೋಶಿ ಇವರು ಉಪನ್ಯಾಸ ನೀಡಿದರು. ಪ್ರಾಸ್ತಾವಿಕ ನುಡಿಗಳನ್ನು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ ಹೊಂಗಲ ಇವರು ನುಡಿದರು. ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಸುಜಯ ಬೆಳವಿ ಇವರು ಕಾರ್ಯಕ್ರಮ ನಿರೂಪಿಸಿದರು ಹಾಗೂ ಶ್ರೀ ವಿನೋದ ಮರಾಠಾ ಇವರು ವಂದಿಸಿದರು. ಈ ತರಬೇತಿಯಲ್ಲಿ ಒಟ್ಟು 259 ಸೌಹಾರ್ದ ಸಹಕಾರಿಗಳಿಂದ 313 ಜನ ಪ್ರತಿನಿಧಿಗಳು ಭಾಗಿಯಾಗಿದ್ದರು.



**ಬೆಳಗಾವಿ :** ದಿನಾಂಕ 07.07.2025 ರಂದು ಬೆಳಗಾವಿ ಜಿಲ್ಲೆಯ ಬೈಲಹೊಂಗಲ, ಚನ್ನಮ್ಮನ ಕಿತ್ತೂರು, ಸವದತ್ತಿ, ಯರಗಟ್ಟಿ ಮತ್ತು ರಾಮದುರ್ಗ ತಾಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗೆ ವಿಷಯಾಧಾರಿತ ತರಬೇತಿಯನ್ನು ಪ್ರಾಂತೀಯ ಕಛೇರಿ, ಬೆಳಗಾವಿ ಇಲ್ಲಿ ಆಯೋಜಿಸಲಾಗಿತ್ತು. ತರಬೇತಿ ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಗದೀಶ ಕವಟಗಿಮಠ ಇವರು ನೇರವೇರಿಸಿದರು. ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಅಮೃತ ಜೋಶಿ ಹಾಗೂ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ ಹೊಂಗಲ ಇವರು ವೇದಿಕೆ ಮೇಲೆ ಉಪಸ್ಥಿತರಿದ್ದರು. ಮೊದಲನೇ ಅವಧಿಯಲ್ಲಿ ವ್ಯವಹಾರ ಅಭಿವೃದ್ಧಿ ಮತ್ತು ಗ್ರಾಹಕ ಸಂಬಂಧ ನಿರ್ವಹಣೆ ವಿಷಯದ ಕುರಿತು ವಿಕಾಸ ಸೌಹಾರ್ದ ಕೋ–ಆಪ್ ಬ್ಯಾಂಕ್, ಹೊಸಪೇಟೆ ಇದರ ನಿರ್ದೇಶಕರಾದ ಶ್ರೀ ಅಮೃತ ಜೋಶಿ ಇವರು ಉಪನ್ಯಾಸ ನೀಡಿದರು. ಎರಡನೇ ಅವಧಿಯಲ್ಲಿ ಲೆಕ್ಕಪತ್ರಗಳ ಅಂತಿಮಗೊಳಿಸುವಿಕೆ ವಿಷಯದ ಕುರಿತು ಶ್ರೀ ಜಿ.ಕೆ. ರಾಮಪ್ಪ ಉಪನಿರ್ದೇಶಕರು(ನಿ), ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆ, ಇವರು ಉಪನ್ಯಾಸ ನೀಡಿದರು. ಪ್ರಾಸ್ತಾವಿಕ ನುಡಿಗಳನ್ನು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ ಹೋಂಗಲ ಇವರು ನುಡಿದರು. ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ರಾಚಯ್ಯ ಹಿರೇಮಠ ಇವರು ಕಾರ್ಯಕ್ರಮ ನಿರೂಪಿಸಿ, ವಂದಿಸಿದರು. ಈ ತರಬೇತಿಯಲ್ಲಿ ಒಟ್ಟು 46 ಸೌಹಾರ್ದ ಸಹಕಾರಿಗಳಿಂದ 51 ಜನ ಪ್ರತಿನಿಧಿಗಳು ಭಾಗಿಯಾಗಿದ್ದರು.



**ವಿಜಯಪುರ :** ದಿನಾಂಕ 10.07.2025 ರಂದು ವಿಜಯಪುರ ಜಿಲ್ಲೆಯ ನಷ್ಟದಲ್ಲಿರುವ ಸೌಹಾರ್ದ ಸಹಕಾರಿಗಳ ಅಧ್ಯಕ್ಷರಿಗೆ ಮತ್ತು ಮುಖ್ಯಕಾರ್ಯನಿರ್ವಾಹಕರಿಗೆ ವ್ಯವಹಾರ ಅಭಿವೃದ್ಧಿ ತರಬೇತಿಯನ್ನು ಶ್ರೀ ಶಾಂತೇಶ್ವರ ವಿವಿಧ ಉದ್ದೇಶಗಳ ಸಹಕಾರ ಸಂಘ ನಿ., ವಿಜಯಪುರ ಇಲ್ಲಿ ಆಯೋಜಿಸಲಾಗಿತ್ತು. ತರಬೇತಿ ಕಾರ್ಯಕ್ರಮದ ಉದ್ಘಾಟನೆಯನ್ನು ಹಿರಿಯ ಸಹಕಾರಿಗಳಾದ ಶ್ರೀ ಅಮರನಾಥ ಬಿರಾದಾರ ಇವರು ನೇರವೇರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ವೃತ್ತಿಪರ ನಿರ್ದೇಶಕರಾದ ಶ್ರೀ ಸುಭಾಷ ಇಂಡಿ ಇವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಕೆ. ರಘುನಂದನ್ ಇವರು ವೇದಿಕೆ ಮೇಲೆ ಉಪಸ್ಥಿತರಿದ್ದರು. ಮೊದಲನೇಯ ಅವಧಿಯಲ್ಲಿ ವ್ಯವಹಾರ ಅಭಿವೃದ್ಧಿ ವಿಷಯದ ಕುರಿತು ಶ್ರೀ ಕೆ. ರಘುನಂದನ್, ಸಲಹೆಗಾರರು ಯಡಗೆರೆ ಸೌಹಾರ್ದ ಸಹಕಾರಿ ನಿ., ಚಿಕ್ಕಮಗಳೂರು ಇವರು ಉಪನ್ಯಾಸ ನೀಡಿದರು. ಮಧ್ಯಾಹ್ನದ ಅವಧಿಯಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ವೃತ್ತಿಪರ ನಿರ್ದೇಶಕರಾದ ಶ್ರೀ ಸುಭಾಷ ಇಂಡಿ ಮತ್ತು ಸೌಹಾರ್ದ ಅಭಿವೃದ್ಧಿ

ಅಧಿಕಾರಿಗಳಾದ ಶ್ರೀ ಬಸವರಾಜ ಇವರು ಸಹಕಾರಿಗಳೊಡನೆ ಸಮಾಲೋಚನೆ ನಡೆಸಿದರು. ಸ್ವಾಗತ ಮತ್ತು ಪ್ರಾಸ್ತಾವಿಕ ನುಡಿಗಳನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಬಸವರಾಜ ಎಸ್. ಇವರು ನುಡಿದರು. ಶ್ರೀಮತಿ ಪ್ರತಿಭಾ ಮಠ ಇವರು ಕಾರ್ಯಕ್ರಮ ನಿರೂಪಿಸಿದರು ಹಾಗೂ ಶ್ರೀ ವಿನೋದ ಹಟ್ಟಿ ಇವರು ವಂದಿಸಿದರು. ಈ ತರಬೇತಿಯಲ್ಲಿ ಒಟ್ಟು 65 ಸೌಹಾರ್ದ ಸಹಕಾರಿಗಳಿಂದ 98 ಜನ ಪ್ರತಿನಿಧಿಗಳು ಭಾಗಿಯಾಗಿದ್ದರು.



**ಹಾವೇರಿ** : ದಿನಾಂಕ 11.07.2025 ರಂದು ಹಾವೇರಿ ಜಿಲ್ಲೆಯ ನಷ್ಟದಲ್ಲಿರುವ ಸೌಹಾರ್ದ ಸಹಕಾರಿಗಳ ಅಧ್ಯಕ್ಷರಿಗೆ ಮತ್ತು ಮುಖ್ಯಕಾರ್ಯನಿರ್ವಾಹಕರಿಗೆ ವ್ಯವಹಾರ ಅಭಿವೃದ್ಧಿ ತರಬೇತಿಯನ್ನು ಹೋಟೆಲ್ ಅಶೋಕ, ಹಾವೇರಿ ಇಲ್ಲಿ ಆಯೋಜಿಸಲಾಗಿತ್ತು. ತರಬೇತಿ ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಕೆ. ಶಿವಲಿಂಗಪ್ಪ ಇವರು ನೇರವೇರಿಸಿದರು. ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಕೆ. ರಘುನಂದನ್ ಇವರು ವೇದಿಕೆ ಮೇಲೆ ಉಪಸ್ಥಿತರಿದ್ದರು. ಮೊದಲನೇಯ ಅವಧಿಯಲ್ಲಿ ವ್ಯವಹಾರ ಅಭಿವೃದ್ಧಿ ವಿಷಯದ ಕುರಿತು ಶ್ರೀ ಕೆ.ರಘುನಂದನ್, ಸಲಹೆಗಾರರು ಯಡಗೆರೆ ಸೌಹಾರ್ದ ಸಹಕಾರಿ ನಿ., ಚಿಕ್ಕಮಗಳೂರು ಇವರು ಉಪನ್ಯಾಸ ನೀಡಿದರು. ಮಧ್ಯಾಹ್ನದ ಅವಧಿಯಲ್ಲಿ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಕಲ್ಮೇಶ ಎಮ್ ಮತ್ತು ಶ್ರೀ ಪ್ರವೀಣ ಬಾರ್ಕಿ ಇವರು ಸಹಕಾರಿಗಳೊಡನೆ ಸಮಾಲೋಚನೆ ನಡೆಸಿದರು. ಕಾರ್ಯಕ್ರಮವನ್ನು ಶ್ರೀ ಪ್ರವೀಣ ಬಾರ್ಕಿ ನಿರೂಪಿಸಿದರು. ಈ ತರಬೇತಿಯಲ್ಲಿ ಒಟ್ಟು 32 ಸೌಹಾರ್ದ ಸಹಕಾರಿಗಳಿಂದ 52 ಜನ ಪ್ರತಿನಿಧಿಗಳು ಭಾಗಿಯಾಗಿದ್ದರು.



**ಬಾಗಲಕೋಟೆ** : ದಿನಾಂಕ 14.07.2025 ರಂದು ಬಾಗಲಕೋಟೆ ಜಿಲ್ಲೆಯ ನಷ್ಟದಲ್ಲಿರುವ ಮತ್ತು 2023-24 ನೇ ಸಾಲಿನ ಲೆಕ್ಕಪರಿಶೋಧನೆ ಜರುಗಿಸದ ಸೌಹಾರ್ದ ಸಹಕಾರಿಗಳ ಆಡಳಿತ ಮಂಡಳಿ ಸದಸ್ಯರಿಗೆ ಮತ್ತು ಮುಖ್ಯಕಾರ್ಯನಿರ್ವಾಹಕರಿಗೆ ವ್ಯವಹಾರ ಅಭಿವೃದ್ಧಿ ತರಬೇತಿಯನ್ನು ಶ್ರೀ ಸಾಯಿ ಮಂದಿರ, ವಿದ್ಯಾಗಿರಿ, ಬಾಗಲಕೋಟೆ ಇಲ್ಲಿ ಆಯೋಜಿಸಲಾಗಿತ್ತು. ತರಬೇತಿ ಕಾರ್ಯಕ್ರಮದ ಉದ್ಘಾಟನೆಯನ್ನು ಸಹಕಾರ ಭಾರತಿ ಜಿಲ್ಲಾಧ್ಯಕ್ಷರಾದ ಡಾ॥ಎಮ್.ಎಸ್.ದಡ್ಡೆನ್ನವರ ಇವರು ನೇರವೇರಿಸಿದರು. ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಿ. ಎನ್.ಪಾಟೀಲ ಇವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸಹಕಾರ ಸಂಘಗಳ ಉಪನಿಬಂಧಕರಾದ ಶ್ರೀ ದಾನಯ್ಯ ಹಿರೇಮಠ ಹಾಗೂ ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಕೆ.ರಘುನಂದನ್ ಇವರು ಆಗಮಿಸಿದ್ದರು. ಮೊದಲನೇಯ ಅವಧಿಯಲ್ಲಿ ವ್ಯವಹಾರ ಅಭಿವೃದ್ಧಿ ವಿಷಯದ ಕುರಿತು ಶ್ರೀ ಕೆ.ರಘುನಂದನ್, ಸಲಹೆಗಾರರು ಯಡಗೆರೆ ಸೌಹಾರ್ದ ಸಹಕಾರಿ ನಿ., ಚಿಕಮಗಳೂರು ಇವರು ಉಪನ್ಯಾಸ ನೀಡಿದರು. ಎರಡನೇಯ ಅವಧಿಯಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಜಿ.ಎನ್. ಪಾಟೀಲ ಇವರು ಸಹಕಾರಿಗಳೊಡನೆ ಸಮಾಲೋಚನೆ ನಡೆಸಿದರು. ಮಧ್ಯಾಹ್ನ ಅವಧಿಯಲ್ಲಿ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ವೆಂಕಟೇಶ ರಾಠೋಡ ಇವರು ಆರ್ಥಿಕ ತಖ್ತೆಗಳ ವಿಶ್ಲೇಷಣೆ ವಿಷಯದ ಕುರಿತು ಮಾಹಿತಿ ನೀಡಿದರು. ಪ್ರಾಸ್ತಾವಿಕ ನುಡಿಗಳನ್ನು ಶ್ರೀ ವೆಂಕಟೇಶ ರಾಠೋಡ ಇವರು ನುಡಿದರು. ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಸುರೇಶ ಶೆಗುಣಸಿ ಇವರು ಸ್ವಾಗತಿಸಿದರು. ಕಾರ್ಯಕ್ರಮವನ್ನು ಶ್ರೀಮತಿ ರೇಷ್ಮಾ ಪಾಟೀಲ ನಿರೂಪಿಸಿ, ವಂದಿಸಿದರು.ಈ ತರಬೇತಿಯಲ್ಲಿ ಒಟ್ಟು 83 ಸೌಹಾರ್ದ ಸಹಕಾರಿಗಳಿಂದ 142 ಜನ ಪ್ರತಿನಿಧಿಗಳು ಭಾಗಿಯಾಗಿದ್ದರು.



**ಬೆಳಗಾವಿ** : ದಿನಾಂಕ 25.07.2025 ರಂದು ಬೆಳಗಾವಿ ಜಿಲ್ಲೆಯ ನಷ್ಟದಲ್ಲಿರುವ ಸೌಹಾರ್ದ ಸಹಕಾರಿಗಳ ಆಡಳಿತ ಮಂಡಳಿ ಸದಸ್ಯರಿಗೆ ಮತ್ತು ಮುಖ್ಯಕಾರ್ಯನಿರ್ವಾಹಕರಿಗೆ ವ್ಯವಹಾರ ಅಭಿವೃದ್ಧಿ ತರಬೇತಿಯನ್ನು ದಿ ಇನ್ಸ್ಟಿಟ್ಯೂಟ್ ಆಫ್ ಇಂಜನಿಯರ್ಸ್, ಶಿವಬಸವ ನಗರ, ಬೆಳಗಾವಿ ಇಲ್ಲಿ ಆಯೋಜಿಸಲಾಗಿತ್ತು. ತರಬೇತಿ ಕಾರ್ಯಕ್ರಮದ ಉದ್ಘಾಟನೆಯನ್ನು ಸನ್ನದು ಲೆಕ್ಕಪರಿಶೋಧಕರಾದ ಶ್ರೀ ಮಹಾಂತೇಶ ಹೋಸಪೇಟ ಹಾಗೂ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ ಹೊಂಗಲ ಇವರು ನೇರವೇರಿಸಿದರು. ಮೊದಲನೇಯ ಅವಧಿಯಲ್ಲಿ ವ್ಯವಹಾರ ಅಭಿವೃದ್ಧಿ ವಿಷಯದ ಕುರಿತು ಶ್ರೀ ಸನ್ನದು ಲೆಕ್ಕಪರಿಶೋಧಕರಾದ ಶ್ರೀ ಮಹಾಂತೇಶ ಹೋಸಪೇಠ ಇವರು ಉಪನ್ಯಾಸ ನೀಡಿದರು. ಮಧ್ಯಾಹ್ನದ ಅವಧಿಯಲ್ಲಿ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ ಹೊಂಗಲ ಇವರು ಸಹಕಾರಿಗಳೊಡನೆ ಸಮಾಲೋಚನೆ ನಡೆಸಿದರು. ಈ ತರಬೇತಿಯಲ್ಲಿ ಒಟ್ಟು 78 ಸೌಹಾರ್ದ ಸಹಕಾರಿಗಳಿಂದ 121 ಜನ ಪ್ರತಿನಿಧಿಗಳು ಭಾಗಿಯಾಗಿದ್ದರು.



**ರಾಯಚೂರು** : ದಿನಾಂಕ 26.07.2025 ರಂದು ರಾಯಚೂರು ಜಿಲ್ಲೆಯ ಸೌಹಾರ್ದ ಸಹಕಾರಿಗಳ ಸಂಘಗಳ ಮಾನ್ಯ ಅಧ್ಯಕ್ಷರು/ಉಪಾಧ್ಯಕ್ಷರು/ನಿರ್ದೇಶಕರುಗಳಿಗಾಗಿ ಸಂಪರ್ಕ ಸಭೆಯನ್ನು ಕೆ.ಪಿ.ಎಸ್.ವಿ.ಎಸ್ ಕಲ್ಮಠ ಆಯುರ್ವೇದಿಕ ಕಾಲೇಜು ಆವರಣ ಮಾನವಿ ಇಲ್ಲಿ ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡರವರು ನೆರವೇಸಿದರು. ಸಭೆಯನ್ನು ಉದ್ದೇಶಿಸಿ ಮಾತನಾಡಿದರು ಮತ್ತು ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಕೇಳಿರುವ ಪ್ರಶ್ನೆಗಳಿಗೆ ಉತ್ತರಿಸಿದರು. ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಆರ್. ತಿಮ್ಮಯ್ಯ ಶೆಟ್ಟಿ ಯವರು ವಹಿಸಿದ್ದರು. ಮುಖ್ಯಅತಿಥಿಗಳಾಗಿ ರಾಯಚೂರು ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ., ರಾಯಚೂರು ನಿರ್ದೇಶಕರಾದ ಎಂ. ದೊಡ್ಡ ಬಸವರಾಜುರವರು ಆರ್.ಡಿ.ಸಿ.ಸಿ ಬ್ಯಾಂಕಿನ ನಿರ್ದೇಶಕರಾದ ಶ್ರೀ ಸೋಮನಗೌಡ ಬಾದರ್ಲಿಯವರು, ಶ್ರೀ ಮಲ್ಲನಗೌಡ ನಕ್ಕುಂದಿಯವರು, ಸೌಹಾರ್ದ ಸಹಕಾರಿಗಳ ಒಕ್ಕೂಟದ ನಿರ್ದೇಶಕರಾದ ಶ್ರೀಮತಿ ನಾಗರತ್ನಮ್ಮ ಪಾಟೀಲರವರು ಹಾಗೂ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ‍್ಯಾಕಲೆಯವರು ವೇದಿಕೆಯ ಮೇಲೆ ಉಪಸ್ಥಿತರಿದ್ದರು. ಆಡಳಿತ ಮಂಡಳಿಯ ಜವಾಬ್ದಾರಿ ಮತ್ತು ಕರ್ತವ್ಯಗಳ ಕುರಿತು ಹಾಗೂ ಸಹಕಾರಿಗಳ ನಿರ್ದೇಶಕರು ಗಮನಿಸಬೇಕಾದ ಅಂಶಗಳ ಕುರಿತು ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ನಟರಾಜ ರವರು ಮತ್ತು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ‍್ಯಾಕಲೆಯವರು ಮಾಹಿತಿ ನೀಡಿದರು. ಕಾಮನ್ ಸರ್ವಿಸ್ ಸೆಂಟರ್ ಸೇವೆ ನೀಡುವ ಸಲುವಾಗಿ ಸಾಂಕೇತಿಕವಾಗಿ ಎರಡು ಸಹಕಾರಿಗಳಿಗೆ ಕೀಯನ್ನು ನೀಡುವುದರ ಮುಖಾಂತರ ಚಾಲನೆ ನೀಡಿದರು. ಕಾರ್ಯಕ್ರಮದ ನಿರೂಪಣೆಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ನಟರಾಜರವರು, ಪ್ರಾರ್ಥನೆಯನ್ನು ತನುಜಾ ಮತ್ತು ಸಂಗಡಿಗರು ಮತ್ತು ಪ್ರಾಸ್ತವಿಕ ನುಡಿಯನ್ನು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ‍್ಯಾಕಲೆಯವರು ನುಡಿದರು. ಕಾರ್ಯಕ್ರಮದಲ್ಲಿ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಆಂಜನೆಯ್ಯನವರು ಉಪಸ್ಥಿತರಿದ್ದರು. ಸಂಪರ್ಕ ಸಭೆಯಲ್ಲಿ 300 ಪ್ರತಿನಿಧಿಗಳು ಭಾಗವಹಿಸಿದ್ದರು.

## ಆಡಳಿತ ಪರಿಣಿತಿ ತರಬೇತಿ



**ಮಂಡ್ಯ** : ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ಮೈಸೂರು ಪ್ರಾಂತೀಯ ಕಛೇರಿ ವತಿಯಿಂದ ಮಂಡ್ಯ ಜಿಲ್ಲೆಯಲ್ಲಿನ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು / ಉಪಾಧ್ಯಕ್ಷರು, ನಿರ್ದೇಶಕರುಗಳಿಗಾಗಿ "ಆಡಳಿತ ಪರಿಣಿತಿ ತರಬೇತಿ" ಕಾರ್ಯಕ್ರಮವನ್ನು ದಿನಾಂಕ 08.07.2025ರಂದು "ಕರ್ನಾಟಕ ಸಂಘ, ಆರ್.ಪಿ ರಸ್ತೆ, ಮಂಡ್ಯ ಇಲ್ಲಿ ತರಬೇತಿಯನ್ನು ಆಯೋಜಿಸಲಾಗಿತ್ತು. ಸದರಿ ಕಾರ್ಯಕ್ರಮದ ಉದ್ಘಾಟನೆ & ಅಧ್ಯಕ್ಷತೆಯನ್ನು ಶ್ರೀಮತಿ ಭಾರತಿ ಜಿ ಭಟ್, ಮಾನ್ಯ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇವರು ವಹಿಸಿದ್ದರು. ಈ ಸಭೆಯಲ್ಲಿ ಶ್ರೀ ಗುರುಪ್ರಸಾದ್ ಬಂಗೇರಾ, ಪ್ರಾಂತೀಯ ಅಧಿಕಾರಿ, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇವರು ಉಪಸ್ಥಿತರಿದ್ದು ಕಾರ್ಯಕ್ರಮದ ಪ್ರಸ್ತಾವಿಕ ನುಡಿಗಳನ್ನು ನುಡಿದರು. ಕಾರ್ಯಕ್ರಮದ ನಿರೂಪಣೆ, ಸ್ವಾಗತ, ವಂದನಾರ್ಪಣೆಯನ್ನು ಶ್ರೀ ಬಲರಾಮ್ ಎನ್ ಸೌಹಾರ್ದ ಅಭಿವೃದ್ಧಿ ಅಧಿಕಾರಿ ಇವರು ಮಾಡಿದರು. ಈ ಕಾರ್ಯಾಗಾರದ ಮೊದಲನೇ ಅವಧಿಯಲ್ಲಿ "ಸಹಕಾರಿ ಸಂಸ್ಥೆಗಳ ಆರ್ಥಿಕ ಶಿಸ್ತಿನ ನಿರ್ವಹಣೆಯಲ್ಲಿ ನಿರ್ದೇಶಕರ ಹಕ್ಕುಗಳು ಮತ್ತು ಜವಾಬ್ದಾರಿ" ಎಂಬ ವಿಷಯದ ಕುರಿತು ಶ್ರೀ ರತ್ನ ನಾಯಕ್, ನಿವೃತ್ತ ಸಹಕಾರಿ ಸಂಘಗಳ ಲೆಕ್ಕಪರಿಶೋಧನಾ ಜಂಟಿ ನಿರ್ದೇಶಕರು, ಎರಡನೇ ಅವಧಿಯಲ್ಲಿ "ಸೌಹಾರ್ದ ಸಹಕಾರಿಗಳಲ್ಲಿ ವ್ಯವಹಾರಾಭಿವೃದ್ಧಿ ಯೋಜನೆ" ಎಂಬ ವಿಷಯದ ಕುರಿತು ಶ್ರೀ ಜಗದೀಶ್ ರಾಮನ್, ರವರು ಉಪನ್ಯಾಸವನ್ನು ನೀಡಿದರು ಈ ತರಬೇತಿ ಕಾರ್ಯಕ್ರಮದಲ್ಲಿ ಒಟ್ಟು 30 ಸೌಹಾರ್ದ ಸಹಕಾರಿಗಳಿಂದ 134 ಪ್ರತಿನಿಧಿಗಳು ಭಾಗವಹಿಸಿದ್ದರು.

## ಹೊಸ ಸೌಹಾರ್ದ ಸಹಕಾರಿ ಸಂಘ ಪ್ರಾರಂಭಕ್ಕಾಗಿ ಪ್ರವರ್ತಕರ ಸಭೆ

**ಹಾಸನ** : ದಿನಾಂಕ : 09.07.2025ರಂದು ಅರಸೀಕೆರೆಯಲ್ಲಿ ನೂತನ ಸೌಹಾರ್ದ ಸಹಕಾರಿಯನ್ನು ಪ್ರಾರಂಭಿಸುವ ದೃಷ್ಟಿಯಿಂದ ಅರಸೀಕೆರೆಯಲ್ಲಿ ಶ್ರೀ ರಮೇಶ್ ಆರ್ ರವರ ಅಧ್ಯಕ್ಷತೆಯಲ್ಲಿ ಉದ್ದೇಶಿತ ಅರಸೀಕೆರೆ ಸೌಹಾರ್ದ ಸಹಕಾರಿ ಸಂಘ ಇದರ ಪ್ರವರ್ತಕರ ಸಭೆಯನ್ನು ಆಯೋಜಿಸಲಾಗಿತ್ತು. ಹೊಸ ಸೌಹಾರ್ದ ಸಹಕಾರಿಯ ಸ್ಥಾಪನೆಯ ಕುರಿತು ಹಾಗೂ ಸೌಹಾರ್ದ ಚಳುವಳಿಯ ಬಗ್ಗೆ ಹಾಸನ ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಅಶೋಕ ಜಿ ರವರು ಮಾಹಿತಿಯನ್ನು ನೀಡಿದರು. ಸದರಿ ಸಭೆಯಲ್ಲಿ ಒಟ್ಟು 11 ಮಂದಿ ಪ್ರವರ್ತಕರು ಭಾಗವಹಿಸಿದ್ದರು.

## ಪತ್ರಿಕಾಗೋಷ್ಠಿ




**ತುಮಕೂರು :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ, ಬೆಂಗಳೂರು ಇದರ ರಜತ ಮಹೋತ್ಸವದ ಆಚರಣೆಯ ಹಿನ್ನೆಲೆಯಲ್ಲಿ ದಿನಾಂಕ 15.07.2025ರಂದು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ, ಪತ್ರಿಕಾ ಭವನ, ತುಮಕೂರು ಇಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ರವರು ಹಾಗೂ ಮಾನ್ಯ ನಿರ್ದೇಶಕರಾದ ಶ್ರೀ ಸಿ.ಪಿ. ವಿಜಯ್ ರವರು ಪತ್ರಿಕಾಗೋಷ್ಠಿಯನ್ನು ನಡೆಸಿಕೊಟ್ಟರು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ನಿಕಟಪೂರ್ವ ನಿರ್ದೇಶಕರಾದ ಶ್ರೀ ಬಿ. ಗಂಗಾಧರಯ್ಯ ರವರು, ತುಮಕೂರು ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ನಿರ್ದೇಶಕರಾದ ಶ್ರೀ ಟಿ.ಎಲ್. ಸುರೇಶ್ ರಾವ್ ರವರು ಹಾಗೂ ಬೆಂಗಳೂರು ಪ್ರಾಂತೀಯ ಅಧಿಕಾರಿಗಳಾದ ಶ್ರೀ ಶ್ರೀಧರ್ ರವರು ಉಪಸ್ಥಿತರಿದ್ದರು.



**ದಕ್ಷಿಣ ಕನ್ನಡ :** ದಿನಾಂಕ 30–07–2025ರಂದು ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರಿನ ಪ್ರೆಸ್‌ಕ್ಲಬ್ ನಲ್ಲಿ ಸೌಹಾರ್ದ ಸಹಕಾರಿ ಕಾಯ್ದೆ 2001ರಲ್ಲಿ ಜಾರಿಗೆ ಬಂದು 25ನೇ ವರ್ಷಕ್ಕೆ ಪಾದಾರ್ಪಣೆ ಮಾಡಿರುವ ಹಿನ್ನೆಲೆಯಲ್ಲಿ ಸೌಹಾರ್ದ ಸಹಕಾರಿಗಳು ಸೌಹಾರ್ದ ಸಹಕಾರಿ ಕಾಯ್ದೆಯ ರಜತ ಮಹೋತ್ಸವದ ಸಂಭ್ರಮದಲ್ಲಿರುವ ಹಿನ್ನಲೆಯಲ್ಲಿ ಪತ್ರಿಕಾಗೋಷ್ಠಿಯನ್ನು ಏರ್ಪಡಿಸಲಾಗಿತ್ತು. ಈ ಪತ್ರಿಕಾಗೋಷ್ಠಿಯಲ್ಲಿ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ರವರು, ಮೈಸೂರು ಪ್ರಾಂತ್ಯದ ನಿರ್ದೇಶಕರಾದ ಶ್ರೀ ಮಂಜುನಾಥ್ ಎಸ್.ಕೆ ರವರು ಹಾಗೂ ಶ್ರೀಮತಿ ಭಾರತಿ ಜಿ ಭಟ್ ರವರು ನಡೆಸಿಕೊಟ್ಟರು. ಈ ಸಂದರ್ಭದಲ್ಲಿ ಮೈಸೂರು ಪ್ರಾಂತೀಯ ಅಧಿಕಾರಿಯವರಾದ ಶ್ರೀ ಗುರುಪ್ರಸಾದ್ ಬಂಗೇರ ರವರು ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಸೌಹಾರ್ದ ಅಭಿವೃದ್ಧಿ ಅಧಿಕಾರಿಯವರಾದ ಶ್ರೀ ನಂದನ್ ಬಿ.ಎಸ್ ರವರು ಉಪಸ್ಥಿತರಿದ್ದರು.




**ಹಾಸನ :** ದಿನಾಂಕ 31–07–2025 ರಂದು ಹಾಸನ ಪ್ರೆಸ್‌ಕ್ಲಬ್ ಇಲ್ಲಿ ಸಂಯುಕ್ತ ಸಹಕಾರಿಯ ವತಿಯಿಂದ ಪತ್ರಿಕಾಗೋಷ್ಠಿಯನ್ನು ಏರ್ಪಡಿಸಲಾಗಿತ್ತು. ಈ ಪತ್ರಿಕಾಗೋಷ್ಠಿಯನ್ನು ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ರವರು ಹಾಗೂ ಸೌಹಾರ್ದ ಸಂಯುಕ್ತ ಸಹಕಾರಿಯ ಮೈಸೂರು ಪ್ರಾಂತ್ಯದ ನಿರ್ದೇಶಕರಾದ ಶ್ರೀ ಮಂಜುನಾಥ್ ಎಸ್.ಕೆ ಹಾಗೂ ಶ್ರೀಮತಿ ಭಾರತಿ ಜಿ ಭಟ್ ರವರು ನಡೆಸಿಕೊಟ್ಟರು. ಈ ಸಂದರ್ಭದಲ್ಲಿ ಮೈಸೂರು ಪ್ರಾಂತೀಯ ಅಧಿಕಾರಿಯವರಾದ ಶ್ರೀ ಗುರುಪ್ರಸಾದ್ ಬಂಗೇರ ರವರು ಮತ್ತು ಹಾಸನ ಜಿಲ್ಲೆಯ ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಅಶೋಕ ಜಿ ಉಪಸ್ಥಿತರಿದ್ದರು. ಈ ಪತ್ರಿಕಾಗೋಷ್ಠಿಯಲ್ಲಿ ಸೌಹಾರ್ದ ಸಹಕಾರಿ ಕಾಯ್ದೆಯ ರಜತ ಮಹೋತ್ಸವದ ಹಿನ್ನಲೆಯಲ್ಲಿ ರಾಜ್ಯಾದ್ಯಂತ ಸಂಪರ್ಕ ಸಭೆಗಳನ್ನು ನಡೆಸಲಾಗುತ್ತಿದೆ ಎಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಅಧ್ಯಕ್ಷ ಜಿ.ನಂಜನಗೌಡ ಅವರು ತಿಳಿಸಿದರು. ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಜತ ಮಹೋತ್ಸವದ ಪ್ರಯುಕ್ತ ಹಾಸನದಲ್ಲೂ ಸಂಪರ್ಕ ಸಭೆ ಮತ್ತು ವಿಷಯಾಧಾರಿತ ತರಬೇತಿ ಕಾರ್ಯಕ್ರಮ ನಡೆಸಲಾಗಿದೆ. ಸೌಹಾರ್ದ ಸಹಕಾರಿ ಕಾಯ್ದೆ 2001ರಲ್ಲಿ ಜಾರಿಗೆ ಬಂದು 25ನೇ ವರ್ಷಕ್ಕೆ ಪಾದಾರ್ಪಣೆ ಮಾಡಿರುವ ಹಿನ್ನೆಲೆಯಲ್ಲಿ ವಿವಿಧ ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತಿದೆ ಎಂದು ಹೇಳಿದರು. 1904ರಲ್ಲಿ ಆರಂಭವಾದ ಸಹಕಾರ ಚಳುವಳಿಯು ಸರ್ವರಿಗೂ ಸಮಪಾಲು ಸರ್ವ–ರಿಗೂ ಸಮಬಾಳು ದೊರಕಿಸಿಕೊಡಬೇಕೆಂಬ ಮಹತ್ತರ ಆಶಯವನ್ನು ಇರಿಸಿಕೊಂಡು ಹಲವು ಕ್ಷೇತ್ರಗಳಲ್ಲಿ ಪ್ರಗತಿ ಸಾಧಿಸುತ್ತಾ ಆರ್ಥಿಕತೆಯ ಸುಭದ್ರತೆಗೆ ತನ್ನದೆಯಾದ ಕೊಡುಗೆ ನೀಡಿದೆ. ಬಡತನ ನಿವಾರಣೆ, ಉದ್ಯೋಗ ಸೃಷ್ಟಿಯಲ್ಲಿ ಮಹತ್ತರ ಪಾತ್ರವಹಿಸಿದೆ. ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಸಂಸ್ಥೆ ರಾಜ್ಯದಲ್ಲಿನ ಸೌಹಾರ್ದ ಸಹಕಾರ ಕ್ಷೇತ್ರದ ನೇತೃತ್ವವನ್ನು ವಹಿಸಿ, ಮಾತೃ ಸಂಸ್ಥೆಯಾಗಿ ಐಕ್ಯಕ ಶಾಸನಬದ್ಧ ಸಂಸ್ಥೆಯಾಗಿ, ಕಾನೂನು ಬದ್ಧವಾಗಿ ಕಾರ್ಯನಿರ್ವಹಿಸುವ ಜೊತೆಗೆ ತರಬೇತಿ, ಶಿಕ್ಷಣ, ಪ್ರಚಾರ ಚಟುವಟಿಕೆ ನಡೆಸುತ್ತಾ ಬಂದಿದೆ. ಪ್ರತಿ ವರ್ಷದಂತೆ ಸಂಯುಕ್ತ ಸಹಕಾರಿಯ ಸಾಮಾನ್ಯ ಸಭೆ ನಡೆಯುವ ಮೊದಲು ರಾಜ್ಯದಾದ್ಯಂತ ಪ್ರವಾಸ ಮಾಡಿ, ಸಹಕಾರ ಕ್ಷೇತ್ರದ ಜ್ವಲಂತ ವಿಷಯಗಳನ್ನು ಚರ್ಚಿಸುವುದು ನಮ್ಮ ಗುರಿಯಾಗಿದೆ ಎಂದು ತಿಳಿಸಿದರು.

# ಸೌಹಾರ್ದ ಸಹಕಾರಿ ಕಾಯ್ದೆಯ ರಜತ ಮಹೋತ್ಸವದ ನಿಮಿತ್ಯ ಪತ್ರಕರ್ತ ಮತ್ತು ಮಾಧ್ಯಮರೊಂದಿಗೆ ಸಂವಾದ ಕಾರ್ಯಕ್ರಮ



**ಕಲಬುರಗಿ :** ದಿನಾಂಕ: 11.07.2025, ಶುಕ್ರವಾರದಂದು ಬೆಳಗ್ಗೆ 10:30 ಗಂಟೆಗೆ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಹಾಗೂ ಕಲಬುರಗಿ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘ ಮತ್ತು ಪತ್ರಿಕೋದ್ಯಮ ಹಾಗೂ ಸಮೂಹ ಸಂವಹನ ಅಧ್ಯಯನ ಹಾಗೂ ಸಂಶೋಧನಾ ವಿಭಾಗ, ಶರಣಬಸವ ವಿಶ್ವವಿದ್ಯಾಲಯ, ಕಲಬುರಗಿ ರವರ ಸಹಯೋಗದೊಂದಿಗೆ ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆಯ ರಜತ ಮಹೋತ್ವದ ನಿಮಿತ್ಯ "ಸಹಕಾರ ಮತ್ತು ಮಾಧ್ಯಮ" ವಿಷಯದ ಕುರಿತು ಸಂವಾದ ಕಾರ್ಯಕ್ರಮವನ್ನು ಹೋಟಲ್ ಅನಂತ, ಕುಮಾರೇಶ್ವರ ಕಾಲೋನಿ. ಹೊಸ ಜೇವರ್ಗಿ ರಸ್ತೆ, ಕಲಬುರಗಿಯಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಶರಣಬಸವೇಶ್ವರ ವಿದ್ಯಾವರ್ಧಕ ಸಂಘದ ಮಾನ್ಯ ಕಾರ್ಯದರ್ಶಿಗಳಾದ ಶ್ರೀ ಬಸವರಾಜ ದೇಶಮುಖ ರವರು ನೆರವೇರಿಸಿದರು. ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ರವರು ವಹಿಸಿದರು. ಅತಿಥಿಗಳಾಗಿ ಕರ್ನಾಟಕ ರಾಜ್ಯ ಕಾರ್ಯನಿರತ ಪತ್ರಕರ್ತ ಸಂಘದ ಮಾನ್ಯ ಸದಸ್ಯರಾದ ಡಾ॥ ಶಿವರಂಜನ ಸತ್ಯಂಪೇಟೆ, ಕಲಬುರಗಿ ಪ್ರಾಂತದ ಮಾನ್ಯ ಜಂಟಿ ನಿಬಂಧಕರಾದ ಶ್ರೀ ವಿಶ್ವನಾಥ ಮಲಕೂಡ, ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀಮತಿ ಶೈಲಜಾ ತಪಲಿ, ಕಲಬುರಗಿ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಮಾನ್ಯ ಅಧ್ಯಕ್ಷರಾದ ಶ್ರೀ ಬಾಬುರಾವ್ ಯಡ್ರಾಮಿ ರವರು ಉಪಸ್ಥಿತರಿದ್ದರು.

ಪ್ರಾಸ್ತವಿಕ ನುಡಿಯನ್ನು ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲ್ ರವರು ನೆರವೇರಿಸಿದರು. ನಿರೂಪಣೆಯನ್ನು ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ದ್ಯಾಕಲೆ ರವರು ಹಾಗೂ ವಂದರ್ನಾಪಣೆಯನ್ನು ಶ್ರೀ ಟಿ.ಬಿ ಶಿವನಂದನ ರವರು ನೆರವೇರಿಸಿದರು. ಕಾರ್ಯಕ್ರಮದಲ್ಲಿ 50 ಜನ ವರದಿಗಾರರು/ಸಂಪಾದಕರು ಹಾಗೂ 15 ಜನ ಪತ್ರಿಕೋದ್ಯಮ ವಿಭಾಗದ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಸಂವಾದ ಕಾರ್ಯಕ್ರಮದಲ್ಲಿ ಸಹಕಾರ ಸಂಘಗಳು ಮತ್ತು ಸೌಹಾರ್ದ ಸಹಕಾರಿ ಸಂಘಗಳ ವ್ಯತ್ಯಾಸ, ಹೊಸ ಸಹಕಾರಿ ಆರಂಭದ ಪದ್ಧತಿ, ಚಟುವಟಿಕೆ ಕಾರ್ಯವೈಖರಿ, ಸಹಕಾರಿ ಕ್ಷೇತ್ರದಲ್ಲಿನ ತೊಡಕುಗಳು, ಭವಿಷ್ಯದಲ್ಲಿ ವೃದ್ಧಿಸುವ ಯೋಚನೆ, ಸಂಘಗಳ ರಚನೆ, ವಹಿವಾಟು ಸಾಲ ಸೌಲಭ್ಯ ಸೇರಿ ವಿವಿಧ ವಿಷಯಗಳ ಕುರಿತು ಸುಧೀರ್ಘ ಸಂವಾದ ನಡೆಯಿತು. ಸೌಹಾರ್ದ ಸಹಕಾರಿ ವ್ಯವಸ್ಥಾಪಕ ನಿರ್ದೇಶಕರ ಶರಣಗೌಡ ಜಿ ಪಾಟೀಲ, ಸಹಕಾರಿ ಸಂಘಗಳ ಜಂಟಿ ನಿಬಂಧಕರಾದ ಶ್ರೀ ವಿಶ್ವನಾಥ ಮಲಕುಡ, ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಸಿಎ ಶ್ರೀ ಜಿ. ನಂಜನಗೌಡರವರು ಪ್ರಶ್ನೆಗಳಿಗೆ ಸಮರ್ಪಕವಾಗಿ ಉತ್ತರ ನೀಡಿದರು.

### ಸಹಕಾರ ಕ್ಷೇತ್ರದ ಜಾಗೃತಿ ಅಗತ್ಯ

ಜಿ. ನಂಜನಗೌಡ ಬೆಳಗಾವಿ ಮತ್ತು ಬೆಂಗಳೂರು ಹಾಗೂ ಬೀದರ ಜಿಲ್ಲೆಗಳಿಗೆ ಹೋಲಿಸಿದರೆ ಕಲಬುರಗಿ ಜಿಲ್ಲೆಯ ಸಹಕಾರ ಕ್ಷೇತ್ರದಲ್ಲಿ ಹಿಂದುಳಿದಿದೆ. ಸರಕಾರ ಬಿಟ್ಟರೆ ಅತೀ ಹೆಚ್ಚು ಜನರು ಭಾಗವಹಿಸುವ ಅತಿದೊಡ್ಡ ವಲಯ ಸಹಕಾರಿ ಸಂಸ್ಥೆಯಾಗಿದ್ದು ಕಟ್ಟಕಡೆಯ ವ್ಯಕ್ತಿ ಮತ್ತು ಮಹಿಳೆಯವರಿಗೆ ಸ್ವಾವಲಂಬಿಯಾಗಿ ಬದುಕುವ ಹಕ್ಕನ್ನು ಸಹಕಾರಿ ಸಂಸ್ಥೆಗಳು ನೀಡುತ್ತವೆ. ಅನೇಕ ಮಹಿಳೆಯರು ಸಹಕಾರಿ ಸಂಘಗಳ ಮೂಲಕ ತಮ್ಮ ಜೀವನ ರೂಪಿಸಿಕೊಂಡಿದ್ದಾರೆ. ತಮ್ಮ ಮಕ್ಕಳ ಶೈಕ್ಷಣಿಕ ಪ್ರಗತಿ ಸಾಧಿಸಿದ್ದಾರೆ. ಆದ್ದರಿಂದ ಕಲಬುರಗಿ ವಿಭಾಗದ ಹೆಚ್ಚಿನ ಜನರಿಗೆ ಸೌಹಾರ್ದ ಸಹಕಾರಿ ಕ್ಷೇತ್ರದ ಬಗ್ಗೆ ಜಾಗೃತಿ ಮೂಡಿಸುವ ಕೆಲಸ ಆಗಬೇಕು ಎಂದರು. ಸಹಕಾರ ಕ್ಷೇತ್ರದ ಅಮುಲ್, ಇಫ್ಕೋ ಸೇರಿದಂತೆ, ಹತ್ತಾರು ಸಹಕಾರ ಸಂಘಗಳು ಬೃಹದಾಕಾರವಾಗಿ ಬೆಳೆದಿವೆ. ಸಹಕಾರ ಸಂಘಗಳಲ್ಲಿ ಪಾರದರ್ಶಕತೆ ಕಾಯ್ದುಕೊಳ್ಳಲು ಸಮಾಜದ ಕಟ್ಟಕಡೆಯ ಜನರ ತಲುಪಲು ಹಾಗೂ ಯುವಜನರು ಮಹಿಳೆಯರನ್ನು ಪಾಲ್ಗೊಳ್ಳಬೇಕಿದೆ ಎಂದು ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡರವರು ನುಡಿದರು.

**ಶ್ರೀ ಬಾಬುರಾವ್ ಯಡ್ರಾಮಿ ಮಾತನಾಡಿ** ಭವಿಷ್ಯದಲ್ಲಿ ಕಲಬುರಗಿ ಜಿಲ್ಲೆಯ ಪತ್ರಕರ್ತರಿಗಾಗಿ ಪತ್ರಕರ್ತರ ಸೌಹಾರ್ದ ಸಹಕಾರಿ ಸಂಘ ಸ್ಥಾಪಿಸಲು ಉದ್ದೇಶಿಸಲಾಗಿದೆ ಎಂದು ತಿಳಿಸಿದರು.

**ಶ್ರೀ ವಿಶ್ವನಾಥ ಮಲಕೂಡ ಮಾತನಾಡಿ** ಸ್ವಯಂ ಉದ್ಯೋಗಿಗಳಿಗೆ ಸೌಹಾರ್ದ ಸಂಯುಕ್ತ ಸಹಕಾರಿಗಳ ಸಾಲ ನೀಡಿ ಸಹಾಯ ಮಾಡಲಾಗುತ್ತದೆ. ಕೇಂದ್ರ ಸರ್ಕಾರದ ಸ್ವಯಂ ಉದ್ಯೋಗ ಮೂಲಕ ಆತ್ಮನಿರ್ಭರ ಭಾರತದ ಉದ್ದೇಶ ಹೋಂದಲಾಗಿದೆ. ಇದಕ್ಕೆ ಸಹಕಾರಿಗಳು ಮುಂದಾಗಿವೆ. ಬೆಂಗಳೂರು, ಮೈಸೂರು ಬೆಳಗಾವಿ ಹೋಲಿಸಿದರೆ ಕಲಬುರಗಿ ವಿಭಾಗದಲ್ಲಿ ಸಹಕಾರ ಕ್ಷೇತ್ರ ಹಿಂದುಳಿದೆ, ಈ ಭಾಗದಲ್ಲಿ ಸಹಕಾರ ಕ್ಷೇತ್ರ ಬಲಪಡಿಸಲು ಉದ್ದೇಶಿಸಲಾಗಿದೆ. ಕಲಬುರಗಿ ವಿಭಾಗದಲ್ಲಿ 5530 ಸಹಕಾರ ಸಂಘಗಳು ಸಕ್ರೀಯವಾಗಿವೆ. ಸದ್ಯ ನಗರದಲ್ಲಿ 46 ಗೃಹ ನಿರ್ಮಾದಲ್ಲಿ ಸಹಕಾರ ಸಂಘ ಸೋಸೈಟಿಗಳಿದ್ದು, ಮುಂದಿನ ದಿನಗಳಲ್ಲಿ ಪತ್ರಕರ್ತರ ಅನೂಕೂಲಕ್ಕಾಗಿ ಪತ್ರಕರ್ತರ ಗೃಹ ನಿರ್ಮಾಣ ಸಹಕಾರ ಸಂಘ ರಚಿಸಿದರೆ ಸಹಕಾರ ಒದಗಿಸುವುದಾಗಿ ತಿಳಿಸಿದರು. ಅಲ್ಲದೇ ಸಹಕಾರ ಸಂಘ ಮತ್ತು ಸೌಹಾರ್ದ ಸಹಕಾರಿ ಸಹಕಾರಿಗಳಲ್ಲಿ ಡಿಜಿಟಲಿಕರಣ ಮತ್ತು ಕಂಪ್ಯೂಟರಿಕರಣದಿಂದಾಗಿ ದುರುಪಯೋಗ ತಡೆಯಲು ಸಾಧ್ಯವಾಗಿದೆ. ಇ–ಆಡಿಟ್ ಸೌಲಭ್ಯ ಕೂಡ ಲಭ್ಯವಿದೆ ಎಂದು ತಿಳಿಸಿದರು.

**ಶ್ರೀ ಬಸವರಾಜ ದೇಶಮುಖ, ಕಾರ್ಯದರ್ಶಿ, ಶರಣಬಸವೇಶ್ವರ ವಿದ್ಯಾವರ್ಧಕ ಸಂಘ :** ಗ್ರಾಮೀಣ ಭಾಗದಲ್ಲಿ ಬಡ್ಡಿದರ ವ್ಯವಹಾರಕ್ಕೆ ಪಿಕೆಪಿ–ಎಸ್ ಕಡಿವಾಣ ಹಾಕಿವೆ. ಸ್ವಯಂ ಉದ್ಯೋಗ ಕೈಗೊಳ್ಳುವವರಿಗೆ ಸಹಕಾರ ಸಂಘಗಳು ಉತ್ತಮ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿವೆ. ಅದರಲ್ಲೂ ವಿಶೇಷವಾಗಿ ಬಡ ಮಹಿಳೆಯವರಿಗೆ ಸ್ತ್ರೀ ಶಕ್ತಿ ಗುಂಪುಗಳು ವರದಾನವಾಗಿದೆ.

# ಕ್ಲಸ್ಟರ್ ಮಟ್ಟದ ತರಬೇತಿ ಕಾರ್ಯಕ್ರಮ




**ಉಡುಪಿ :** ದಿನಾಂಕ 11.07.2025 ರಂದು ಬೆಳಿಗ್ಗೆ 11.00 ಘಂಟೆಗೆ ಉಡುಪಿ ನಗರ ವ್ಯಾಪ್ತಿಯ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗಾಗಿ ಕ್ಲಸ್ಟರ್ ಮಟ್ಟದ ತರಬೇತಿಯನ್ನು ಉಡುಪಿ ಜಿಲ್ಲಾ ಸಂಪರ್ಕ ಕಛೇರಿಯಲ್ಲಿ ಆಯೋಜಿಸಲಾಗಿತ್ತು. ಸದರಿ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇದರ ನಿರ್ದೇಶಕರಾದ ಶ್ರೀ ಮಂಜುನಾಥ ಎಸ್. ಕೆ. ರವರು ವಹಿಸಿದ್ದರು. ಸದರಿ ಸಭೆಯಲ್ಲಿ ಸೌಹಾರ್ದ ಸಹಕಾರಿ ಸಂಸ್ಥೆಗಳ ಸಿಬ್ಬಂದಿಗಳ ಬಗೆಗಿನ ಮೇಲ್ವಿಚಾರಣೆ, ಸುಸ್ತಿಸಾಲದ ವಸೂಲಾತಿ ಹಾಗೂ ಲೆಕ್ಕಪ-ರಿಶೋಧನೆಯಲ್ಲಿ ಕಂಡುಬಂದಿರುವ ಗಂಭೀರ ನ್ಯೂನತೆಗಳನ್ನು ಸರಿಪಡಿಸಿಕೊಳ್ಳಲು ಅಗತ್ಯ ಕ್ರಮವಹಿಸಲು ಕೈಗೊಳ್ಳಬಹುದಾದ ಕ್ರಮಗಳ ಕುರಿತು ಉಪನ್ಯಾಸ ನೀಡಿದರು. ಅನಂತರ ಉಡುಪಿ ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ವಿಜಯ್ ಬಿ.ಎಸ್ ರವರು ಸೌಹಾರ್ದ ಸಹಕಾರಿಗಳ ಆಡಳಿತ ಮಂಡಳಿ ಸಭೆ ಹಾಗೂ ಸಾಮಾನ್ಯ ಸಭೆಯ ಜರುಗುವ ವಿಧಾನಗಳು ಹಾಗೂ ಕಾಯ್ದೆ ಕಲಂ 34 ರ ಮಾಹಿತಿ ಸಲ್ಲಿಕೆ ಕುರಿತು ಉಪನ್ಯಾಸ ನೀಡಿದರು. ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಉಡುಪಿ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ಜಗನ್ನಾಥ ಶೆಟ್ಟಿ ರವರು ಸೌಹಾರ್ದ ಸಹಕಾರಿಗಳ ಅಭಿವೃದ್ಧಿಗೆ ಸಂಬಂಧಿಸಿದಂತೆ ಸಲಹೆಗಳನ್ನು ನೀಡಿದರು. ಈ ತರಬೇತಿ ಕಾರ್ಯಕ್ರಮಕ್ಕೆ 22 ಸೌಹಾರ್ದ ಸಹಕಾರಿಗಳಿಂದ ಒಟ್ಟು 25 ಮಂದಿ ಪ್ರತಿನಿಧಿಗಳು ಭಾಗವಹಿಸಿದ್ದರು.

**ದಿನಾಂಕ 11.07.2025 ರಂದು** ಮಧ್ಯಾಹ್ನ 03.00 ಗಂಟೆಗೆ ಕಾಪು ತಾಲ್ಲೂಕು ವ್ಯಾಪ್ತಿಯ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕ-ರಿಗೆ ಕ್ಲಸ್ಟರ್ ಮಟ್ಟದ ತರಬೇತಿಯನ್ನು ಭಾರತಿ ಸೌಹಾರ್ದ ಸಹಕಾರಿ ನಿ., ಕಛೇರಿಯಲ್ಲಿ ಆಯೋಜಿಸಲಾಗಿತ್ತು. ಸದರಿ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇದರ ನಿರ್ದೇಶಕರಾದ ಶ್ರೀ ಮಂಜುನಾಥ ಎಸ್. ಕೆ. ರವರು ವಹಿಸಿದ್ದರು. ಸದರಿ ಸಭೆಯಲ್ಲಿ ಸೌಹಾರ್ದ ಸಹಕಾರಿ ಸಂಸ್ಥೆಗಳ ಸಿಬ್ಬಂದಿಗಳ ಬಗೆಗಿನ ಮೇಲ್ವಿಚಾರಣೆ, ಸುಸ್ತಿಸಾಲದ ವಸೂಲಾತಿ ಹಾಗೂ ಲೆಕ್ಕಪರಿಶೋದನೆಯಲ್ಲಿ ಕಂಡುಬಂದಿರುವ ಗಂಭೀರ ನ್ಯೂನತೆಗಳನ್ನು ಸರಿಪಡಿಸಿಕೊಳ್ಳಲು ಕೈಗೊಳ್ಳಬಹುದಾದ ಕ್ರಮಗಳ ಕುರಿತು ಉಪನ್ಯಾಸ ನೀಡಿದರು. ಅನಂತರ ಉಡುಪಿ ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ವಿಜಯ್ ಬಿ.ಎಸ್ ರವರು ಸೌಹಾರ್ದ ಸಹಕಾರಿಗಳ ಆಡಳಿತ ಮಂಡಳಿ ಸಭೆ ಹಾಗೂ ಸಾಮಾನ್ಯ ಸಭೆಯ ಜರುಗುವ ವಿಧಾನಗಳು ಹಾಗೂ ಕಾಯ್ದೆ ಕಲಂ 34 ರ ಮಾಹಿತಿ ಸಲ್ಲಿಕೆ ಕುರಿತು ಉಪನ್ಯಾಸ ನೀಡಿದರು. ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಉಡುಪಿ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ಜಗನ್ನಾಥ ಶೆಟ್ಟಿ ರವರು ಸೌಹಾರ್ದ ಸಹಕಾರಿಗಳ ಅಭಿವೃದ್ಧಿಗೆ ಸಂಬಂಧಿಸಿದಂತೆ ಸಲಹೆಗಳನ್ನು ನೀಡಿದರು. ಈ ತರಬೇತಿ ಕಾರ್ಯಕ್ರಮಕ್ಕೆ 08 ಸೌಹಾರ್ದ ಸಹಕಾರಿಗಳಿಂದ 13 ಮಂದಿ ಪ್ರತಿನಿಧಿಗಳು ಭಾಗವಹಿಸಿದ್ದರು.

**ದಿನಾಂಕ 18.07.2025ರಂದು** ಬ್ರಹ್ಮಾವರ ತಾಲ್ಲೂಕಿನ ಸೌಹಾರ್ದ ಸಹಕಾರಿ ಸಂಘಗಳ ಮುಖ್ಯಕಾರ್ಯನಿರ್ವಾಹಕರಿಗಾಗಿ ಸಾಹೇಬರ ಕಟ್ಟೆಯ ಜೈ ಗಣೇಶ್ ಸೌಹಾರ್ದ ಸಹಕಾರಿ ಸಂಘ ನಿ., ಪ್ರಧಾನ ಕಛೇರಿಯಲ್ಲಿ ಕ್ಲಸ್ಟರ್ ಮಟ್ಟದ ತರಬೇತಿಯನ್ನು ಆಯೋಜಿಸಲಾಗಿತ್ತು. ಸದರಿ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇದರ ನಿರ್ದೇಶಕರಾದ ಶ್ರೀ ಮಂಜುನಾಥ ಎಸ್. ಕೆ. ರವರು ವಹಿಸಿದ್ದರು. ಸದರಿ ಸಭೆಯಲ್ಲಿ ಸೌಹಾರ್ದ ಸಹಕಾರಿ ಸಂಸ್ಥೆಗಳ ಸಿಬ್ಬಂದಿಗಳ ಬಗೆಗಿನ ಮೇಲ್ವಿಚಾರಣೆ, ಸುಸ್ತಿಸಾಲದ ವಸೂಲಾತಿ ಹಾಗೂ ಲೆಕ್ಕಪ-ರಿಶೋದನೆಯಲ್ಲಿ ಕಂಡು ಬಂದಿರುವ ಗಂಭೀರ ನ್ಯೂನತೆಗಳನ್ನು ಸರಿಪಡಿಸಿಕೊಳ್ಳಲು ಕೈಗೊಳ್ಳಬಹುದಾದ ಕ್ರಮಗಳ ಕುರಿತು ಉಪನ್ಯಾಸ ನೀಡಿದರು. ಅನಂತರ ಉಡುಪಿ ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾ-ರಿಯಾದ ಶ್ರೀ ವಿಜಯ್ ಬಿ.ಎಸ್ ರವರು ಸೌಹಾರ್ದ ಸಹಕಾರಿಗಳ ಆಡಳಿತ ಮಂಡಳಿ ಸಭೆ ಹಾಗೂ ಸಾಮಾನ್ಯ ಸಭೆಯ ಜರುಗುವ ವಿಧಾನಗಳು ಹಾಗೂ ಕಾಯ್ದೆ ಕಲಂ 34 ರ ಮಾಹಿತಿ ಸಲ್ಲಿಕೆ ಕುರಿತು ಉಪನ್ಯಾಸ ನೀಡಿದರು. ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಉಡುಪಿ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ಜಗನ್ನಾಥ ಶೆಟ್ಟಿ ರವರು ಸೌಹಾರ್ದ ಸಹಕಾರಿಗಳ ಅಭಿವೃದ್ಧಿಗೆ ಸಂಬಂಧಿಸಿದಂತೆ ಸಲಹೆಗಳನ್ನು ನೀಡಿದರು. ಈ ತರಬೇತಿ ಕಾರ್ಯಕ್ರಮಕ್ಕೆ 23 ಸೌಹಾರ್ದ ಸಹಕಾರಿ ಸಂಘಗಳಿಂದ 45 ಮಂದಿ ಪ್ರತಿನಿಧಿಗಳು ಭಾಗವಹಿಸಿದ್ದರು.

**ದಿನಾಂಕ 18.07.2025 ರಂದು** ಉಡುಪಿ ಗ್ರಾಮಾಂತರ ವ್ಯಾಪ್ತಿಯ ಸೌಹಾರ್ದ ಸಹಕಾರಿ ಸಂಘಗಳ ಮುಖ್ಯಕಾರ್ಯನಿರ್ವಾಹಕರಿಗೆ ಕ್ಲಸ್ಟರ್ ಮಟ್ಟದ ತರಬೇತಿಯನ್ನು ಮಧ್ಯಾಹ್ನ 03.00 ಘಂಟೆಗೆ ಉಡುಪಿ ಜಿಲ್ಲಾ ಸಂಪರ್ಕ ಕಛೇರಿಯಲ್ಲಿ ಆಯೋಜಿಸಲಾಗಿತ್ತು. ಸದರಿ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇದರ ನಿರ್ದೇಶಕರಾದ ಶ್ರೀ ಮಂಜುನಾಥ ಎಸ್. ಕೆ. ರವರು ವಹಿಸಿದ್ದರು. ಸದರಿ ಸಭೆಯಲ್ಲಿ ಸೌಹಾರ್ದ ಸಹಕಾರಿ ಸಂಸ್ಥೆಗಳ ಸಿಬ್ಬಂದಿಗಳ ಬಗೆಗಿನ ಮೇಲ್ವಿಚಾರಣೆ, ಸುಸ್ತಿಸಾಲದ ವಸೂಲಾತಿ ಹಾಗೂ ಲೆಕ್ಕಪರಿಶೋಧನೆಯಲ್ಲಿ ಕಂಡುಬಂದಿರುವ ಗಂಭೀರ ನ್ಯೂನತೆಗಳನ್ನು ಸರಿಪಡಿಸಿಕೊಳ್ಳಲು ಕೈಗೊಳ್ಳಬಹುದಾದ ಕ್ರಮಗಳ ಕುರಿತು ಉಪನ್ಯಾಸ ನೀಡಿದರು. ಅನಂತರ ಉಡುಪಿ ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ವಿಜಯ್

ಬಿ.ಎಸ್ ರವರು ಸೌಹಾರ್ದ ಸಹಕಾರಿಗಳ ಆಡಳಿತ ಮಂಡಳಿ ಸಭೆ ಹಾಗೂ ಸಾಮಾನ್ಯ ಸಭೆಯ ಜರುಗುವ ವಿಧಾನಗಳು ಹಾಗೂ ಕಾಯ್ದೆ ಕಲಂ 34 ರ ಮಾಹಿತಿ ಸಲ್ಲಿಕೆ ಕುರಿತು ಉಪನ್ಯಾಸ ನೀಡಿದರು. ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಉಡುಪಿ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ಜಗನ್ನಾಥ ಶೆಟ್ಟಿ ರವರು ಭಾಗವಹಿಸಿ ಸೌಹಾರ್ದ ಸಹಕಾರಿಗಳ ಅಭಿವೃದ್ಧಿಗೆ ಸಂಬಂಧಿಸಿದಂತೆ ಸಲಹೆಗಳನ್ನು ನೀಡಿದರು. ಈ ತರಬೇತಿ ಕಾರ್ಯಕ್ರಮಕ್ಕೆ 21 ಸೌಹಾರ್ದ ಸಹಕಾರಿ ಸಂಘಗಳಿಂದ 23 ಮಂದಿ ಪ್ರತಿನಿಧಿಗಳು ಭಾಗವಹಿಸಿದ್ದರು.

**ಶಿವಮೊಗ್ಗ :** ದಿನಾಂಕ 13.07.2025ರಂದು ಮಡಿಲು ಮಹಿಳಾ ಸೌಹಾರ್ದ ಸಹಕಾರಿ ಸಂಘ ನಿ, ಶಿಕಾರಿಪುರ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ನಾಗರಾಜ ಜಿ.ಹೆಚ್. ರವರು ಭಾಗವಹಿಸಿ ಸದಸ್ಯರ ಹಕ್ಕುಗಳು ಮತ್ತು ಕರ್ತವ್ಯಗಳ ಕುರಿತು ಮಾಹಿತಿ ನೀಡಿದರು. ಸಭೆಯಲ್ಲಿ ಸಹಕಾರಿಯ 110 ಜನ ಸದಸ್ಯರು ಭಾಗವಹಿಸಿದ್ದರು.

**ದಿನಾಂಕ 15.07.2025ರಂದು** ಶಿವಮೊಗ್ಗ ಜಿಲ್ಲೆಯ ಸಾಗರ ತಾಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ಕ್ಲಸ್ಟರ್ ಮಟ್ಟದ ತರಬೇತಿಯನ್ನು ಅಂಕಿತ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘ ನಿ, ಸಾಗರ ಇಲ್ಲಿ ಆಯೋಜಿಸಲಾಗಿತ್ತು. ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ನಾಗರಾಜ ಜಿ.ಹೆಚ್. ರವರು ಲೆಕ್ಕಪರಿಶೊಧನಾ ವರದಿ ಸಲ್ಲಿಕೆ, ಸಾಮಾನ್ಯ ಸಭೆ, ಕಲಂ 34ರ ಮಾಹಿತಿ ಸಲ್ಲಿಕೆ, ಸಹಕಾರಿಗಳ ಚುನಾವಣೆ ಹಾಗೂ ಸಿಎಸ್‌ಸಿ ಕೇಂದ್ರ ತೆರೆಯುವ ಕುರಿತು ಮಾಹಿತಿ ನೀಡಿದರು. 18 ಸಹಕಾರಿಗಳಿಂದ 23 ಜನ ಭಾಗವಹಿಸಿದ್ದರು.

**ದಿನಾಂಕ 20.07.2025ರಂದು** ತೀರ್ಥಹಳ್ಳಿ ತಾಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ಕ್ಲಸ್ಟರ್ ಮಟ್ಟದ ತರಬೇತಿಯನ್ನು ಶ್ರೀ ರಾಮೇಶ್ವರ ಬಹು ಉದ್ದೇಶ ಸೌಹಾರ್ದ ಸಹಕಾರಿ ಸಂಘ ನಿ, ತೀರ್ಥಹಳ್ಳಿ ಇಲ್ಲಿ ಆಯೋಜಿಸಲಾಗಿತ್ತು. ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ನಾಗರಾಜ ಜಿ.ಹೆಚ್. ರವರು ಲೆಕ್ಕಪರಿಶೊಧನಾ ವರದಿ ಸಲ್ಲಿಕೆ, ಸಾಮಾನ್ಯ ಸಭೆ, ಕಲಂ 34ರ ಮಾಹಿತಿ ಸಲ್ಲಿಕೆ, ಸಹಕಾರಿಗಳ ಚುನಾವಣೆ ಹಾಗೂ ಸಿಎಸ್‌ಸಿ ಕೇಂದ್ರ ತೆರೆಯುವ ಕುರಿತು ಮಾಹಿತಿ ನೀಡಿದರು. 21 ಸಹಕಾರಿಗಳಿಂದ 27 ಜನ ಭಾಗವಹಿಸಿದ್ದರು.

**ದಿನಾಂಕ 21.07.20205ರಂದು** ಶಿವಮೊಗ್ಗ ತಾಲೂಕು ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ಕ್ಲಸ್ಟರ್ ಮಟ್ಟದ ತರಬೇತಿಯನ್ನು ವಿಪ್ರ ವಿವಿದೋದ್ದೇಶ ಸೌಹಾರ್ದ ಸಹಕಾರಿ ಸಂಘ ನಿ, ಶಿವಮೊಗ್ಗ ಇಲ್ಲಿ ಆಯೋಜಿಸಲಾಗಿತ್ತು. ತರಬೇತಿಯಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ಉಪಾಧ್ಯಕ್ಷರಾದ ಶ್ರೀ ಎ.ಆರ್. ಪ್ರಸನ್ನಕುಮಾರ್ ರವರು ಉಪಸ್ಥಿತರಿದ್ದರು. ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ನಾಗರಾಜ ಜಿ.ಹೆಚ್. ರವರು ಲೆಕ್ಕಪರಿಶೊಧನಾ ವರದಿ ಸಲ್ಲಿಕೆ, ಸಾಮಾನ್ಯ ಸಭೆ, ಕಲಂ 34ರ ಮಾಹಿತಿ ಸಲ್ಲಿಕೆ, ಸಹಕಾರಿಗಳ ಚುನಾವಣೆ ಹಾಗೂ ಸಿಎಸ್‌ಸಿ ಕೇಂದ್ರ ತೆರೆಯುವ ಕುರಿತು ಮಾಹಿತಿ ನೀಡಿದರು. 32 ಸಹಕಾರಿಗಳಿಂದ 37 ಜನ ಭಾಗವಹಿಸಿದ್ದರು.

**ದಿನಾಂಕ 23.07.2025ರಂದು** ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ನಾಗರಾಜ ಜಿ.ಹೆಚ್. ರವರು ಶಿವಮೊಗ್ಗ ಜಿಲ್ಲೆಯ ಕಾರ್ಯನಿರತವಲ್ಲದ ಸೌಹಾರ್ದ ಸಹಕಾರಿಯಾದ ಶ್ರೀ ಪಂಚಮಶಾಲಿ ಸೌಹಾರ್ದ ಸಹಕಾರಿ ನಿ, ಶಿಕಾರಿಪುರ ಇದರ ಪುನಶ್ಚೇತನ ಕುರಿತು ಮಾರ್ಗದರ್ಶನ ನೀಡಿದರು. ಈ ಸಂದರ್ಭದಲ್ಲಿ ಸಹಕಾರಿಯ ಆಡಳಿತ ಮಂಡಳಿ ಸದಸ್ಯರು ಉಪಸ್ಥಿತ–ರಿದ್ದರು.

**ದಿನಾಂಕ 23.07.2025ರಂದು** ಶಿಕಾರಿಪುರ ಹಾಗೂ ಸೊರಬ ತಾಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ಕ್ಲಸ್ಟರ್ ಮಟ್ಟದ ತರಬೇತಿಯನ್ನು ಸರ್ವೇಶ್ವರ ಸೌಹಾರ್ದ ಸಹಕಾರಿ ಸಂಘ ನಿ, ಶಿಕಾರಿಪುರ ಇಲ್ಲಿ ಆಯೋಜಿಲಾಗಿತ್ತು. ಸೌಹಾರ್ದ ಅಭಿವೃದ್ಧಿ ಅಧಿಕಾ–ರಿಗಳಾದ ಶ್ರೀ ನಾಗರಾಜ ಜಿ.ಹೆಚ್. ರವರು ಲೆಕ್ಕಪರಿಶೊಧನಾ ವರದಿ ಸಲ್ಲಿಕೆ, ಸಾಮಾನ್ಯ ಸಭೆ, ಕಲಂ 34ರ ಮಾಹಿತಿ ಸಲ್ಲಿಕೆ, ಸಹಕಾರಿಗಳ ಚುನಾವಣೆ ಹಾಗೂ ಸಿಎಸ್‌ಸಿ ಕೇಂದ್ರ ತೆರೆಯುವ ಕುರಿತು ಮಾಹಿತಿ ನೀಡಿದರು. 12 ಸಹಕಾರಿಗಳಿಂದ 16 ಜನ ಭಾಗವಹಿಸಿದ್ದರು.

**ದಿನಾಂಕ 25.07.2025ರಂದು** ಭದ್ರಾವತಿ ತಾಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ಕ್ಲಸ್ಟರ್ ಮಟ್ಟದ ತರಬೇತಿಯನ್ನು ಭದ್ರಾ ವೀರಶೈವ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ, ಭದ್ರಾವತಿ ಇಲ್ಲಿ ಆಯೋಜಿಸಲಾಗಿತ್ತು. ಸೌಹಾರ್ದ ಅಭಿವೃದ್ಧಿ ಅಧಿಕಾ–ರಿಗಳಾದ ಶ್ರೀ ನಾಗರಾಜ ಜಿ.ಹೆಚ್. ರವರು ಲೆಕ್ಕಪರಿಶೊಧನಾ ವರದಿ ಸಲ್ಲಿಕೆ, ಸಾಮಾನ್ಯ ಸಭೆ, ಕಲಂ 34ರ ಮಾಹಿತಿ ಸಲ್ಲಿಕೆ, ಸಹಕಾರಿಗಳ ಚುನಾವಣೆ ಹಾಗೂ ಸಿಎಸ್‌ಸಿ ಕೇಂದ್ರ ತೆರೆಯುವ ಕುರಿತು ಮಾಹಿತಿ ನೀಡಿದರು. 10 ಸಹಕಾರಿಗಳಿಂದ 12 ಜನ ಭಾಗವಹಿಸಿದ್ದರು.

**ದಿನಾಂಕ 26.07.2025ರಂದು** ಸಮೃದ್ಧ ವಿವಿದೋದ್ದೇಶ ಸೌಹಾರ್ದ ಸಹಕಾರಿ ಸಂಘ ನಿ, ಶಿವಮೊಗ್ಗ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ನಾಗರಾಜ ಜಿ. ಹೆಚ್. ರವರು ಭಾಗವಹಿಸಿ ಸದಸ್ಯರ ಹಕ್ಕು ಹಾಗೂ ಕರ್ತವ್ಯಗಳ ಕುರಿತು ಮಾಹಿತಿ ನೀಡಿದರು. ಸಭೆಯಲ್ಲಿ 125 ಜನ ಸದಸ್ಯರು ಭಾಗವಹಿಸಿದ್ದರು.

**ತುಮಕೂರು :** ದಿನಾಂಕ 26.07.2025ರಂದು ಶ್ರೀ ವಿಠ್ಠಲ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿ, ತುಮಕೂರು ಸಹಕಾರಿಯು 2024–25ನೇ ಸಾಲಿನಲ್ಲಿ ಹೆಚ್ಚಿನ ಲಾಭ ಗಳಿಸಿರುವ ಹಿನ್ನೆಲೆಯಲ್ಲಿ ಪೂಜಾ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದರು. ಸೌಹಾರ್ದ ಅಭಿವೃದ್ಧಿ ಅಧಿಕಾ–ರಿಗಳಾದ ಶ್ರೀ ಉಮೇಶ್ ಎ.ಎಸ್. ರವರು ಸದರಿ ಪೂಜಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಆಡಳಿತ ಮಂಡಳಿಗೆ ಅಭಿನಂದನೆಗಳನ್ನು ಸಲ್ಲಿಸಿದರು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಎನ್. ಎನ್. ಸುರೇಶ್ ರವರು, ಉಪಾಧ್ಯಕ್ಷರು, ನಿರ್ದೇಶಕರು, ಮುಖ್ಯಕಾರ್ಯನಿರ್ವಾಹಕರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



**ಕೊಪ್ಪಳ :** ದಿನಾಂಕ 17.07.2025 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಬೆಂಗಳೂರು ಪ್ರಾಂತೀಯ ಕಛೇರಿ ಕಲಬುರಗಿ ವತಿಯಿಂದ ಕೊಪ್ಪಳ ಜಿಲ್ಲೆಯ ಕುಕನೂರ ಮತ್ತು ಯಲಬುರ್ಗಾ ತಾಲೂಕಿನ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಹಾಗೂ ನಿರ್ದೇಶಕರುಗಳಿಗೆ ತರಬೇತಿ ಕಾರ್ಯಕ್ರಮವನ್ನು ಶ್ರೀ ಸಾಯಿ ಪ್ಯಾಲೆಸ್ ಯಲಬುರ್ಗಾದಲ್ಲಿ ಆಯೋಜಿಸಲಾಗಿತ್ತು. ತರಬೇತಿ ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಿ. ಶ್ರೀಧರ ರವರು ನೆರವೆಸಿದರು. ಮುಖ್ಯ ಅತಿಥಿಗಳಾಗಿ ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾ–ರಿಗಳ ಒಕ್ಕೂಟದ ಮಾಜಿ ಅಧ್ಯಕ್ಷರಾದ ಶ್ರೀ ನಾಗಲಿಂಗಪ್ಪ ಪತ್ತಾರ, ನಿರ್ದೇಶಕರಾದ ಶ್ರೀ ನಿಲನಗೌಡರವರು ಉಪಸ್ಥಿತರಿದ್ದರು.

ಉದ್ಘಾಟನಾ ಕಾರ್ಯಕ್ರಮದ ನಂತರ ಸಂವಾದ ಕಾರ್ಯಕ್ರಮ ಆಯೋಜಿಸಲಾಗಿತ್ತು. ನಂತರ ಆಡಳಿತ ಮಂಡಳಿಯ ಅಧಿಕಾರಿಗಳು ಮತ್ತು ಪ್ರಕಾರ್ಯಗಳು ಮತ್ತು ಆರ್ಥಿಕ ಸಬಲತೆಯ ಮಾನದಂಡಗಳ ಕುರಿತು ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ್‍ಯಾಕಲೆಯವರು ಉಪನ್ಯಾಸ ನೀಡಿದರು. ತರಬೇತಿಯಲ್ಲಿ 46 ಸೌಹಾರ್ದ ಸಹಕಾರಿಗಳಿಂದ 70 ಪ್ರತಿನಿಧಿಗಳು ಭಾಗವಹಿಸಿದ್ದರು.

**ದಿನಾಂಕ 28.06.2025 ರಂದು** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರ ಕಲಬುರಗಿ ಪ್ರಾಂತೀಯ ಕಛೇರಿಯ ವತಿಯಿಂದ ಕೊಪ್ಪಳ ಜಿಲ್ಲೆಯ ಕೊಪ್ಪಳ ತಾಲೂಕಿನ ಹುಲಿಗಿ ಮತ್ತು ಗಿಣಿಗೇರಾ ಹೊಬಳಿ ಹೊರತು ಪಡಿಸಿ ಕೊಪ್ಪಳ ತಾಲೂಕಿನಲ್ಲಿ ಬರುವ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಹಾಗೂ ನಿರ್ದೇಶಕರಿಗಾಗಿ ಕ್ಲಸ್ಟರ್ ಮಟ್ಟದ ತರಬೇತಿ ಕಾರ್ಯಕ್ರಮವನ್ನು ಗಂಗಾ ಯಮುನಾ ಸೌಹಾರ್ದ ಸಹಕಾರಿ ಸಭಾಂಗಣ ಕೊಪ್ಪಳ ಇಲ್ಲಿ ಆಯೋಜಿಸಲಾಗಿತ್ತು.

ತರಬೇತಿ ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಿ. ಶ್ರೀಧರರವರು ನೆರವೇರಿಸಿದರು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾ–ರಿಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ಚನ್ನಬಸಪ್ಪ ಕಡ್ಡಿಪುಡಿ, ಒಕ್ಕೂಟದ ನಿಕಟಪೂರ್ವ ಅಧ್ಯಕ್ಷರಾದ ಶ್ರೀ ನಾಗಲಿಂಗಪ್ಪ ಪತ್ತಾರ, ಒಕ್ಕೂಟದ ನಿರ್ದೇಶಕರಾದ ಶ್ರೀ ಗವಿಸಿಧಯ್ಯ, ಮುದ್ದಪ್ಪ ಬೇವಿನಹಳ್ಳಿ, ಶರಣಪ್ಪ ವಡಗೇರಿ ಹಾಗೂ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ್‍ಯಾಕಲೆ ರವರು ಉಪಸ್ಥಿತರಿದ್ದರು. ಆಡಳಿತ ಮಂಡಳಿಯ ಅಧಿಕಾರಗಳು ಮತ್ತು ಪ್ರಕಾರ್ಯಗಳು,ಕುರಿತು ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಓಂಕಾರ ಮಾಹಿತಿ ನೀಡಿದರು.

ಪ್ರಾಸ್ತಾವಿಕ ನುಡಿಯನ್ನು ಹಾಗೂ ಸಹಕಾರಿಯ ಅಧ್ಯಕ್ಷರು ಮತ್ತು ನಿರ್ದೇಶಕರು ಗಮನಿಸಬೇಕಾದ ಅಂಶಗಳ ಕುರಿತು ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ್‍ಯಾಕಲೆರವರು ಮಾಹಿತಿ ನೀಡಿದರು ಸ್ವಾಗತ ಮತ್ತು ನಿರೂಪಣೆಯನ್ನು ಶ್ರೀ ಓಂಕಾರ ನಡೆಸಿಕೊಟ್ಟರು. ತರಬೇತಿ ಕಾರ್ಯಕ್ರಮದಲ್ಲಿ 98 ಪ್ರತಿನಿಧಿಗಳು ಭಾಗವಹಿಸಿದ್ದರು.



**ಹಾವೇರಿ :** ದಿನಾಂಕ 21.07.2025 ರಂದು ಹಾವೇರಿ ಜಿಲ್ಲೆಯ ರಾಣೆಬೆನ್ನೂರು ತಾಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗಾಗಿ ಕ್ಲಸ್ಟರ ಮಟ್ಟದ ತರಬೇತಿಯನ್ನು ಚನ್ನೇಶ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿ, ರಾಣೆಬೆನ್ನೂರು ಇಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾ–ರಿಯ ಮಾನ್ಯ ನಿರ್ದೇಶಕರಾದ ಶ್ರೀ ಕೆ.ಶಿವಲಿಂಗಪ್ಪ ಇವರು ವಹಿಸಿದ್ದರು. ಸದರಿ ತರಬೇತಿಯಲ್ಲಿ ಸಾಮಾನ್ಯ ಸಭೆ ಜರುಗಿಸುವ ಕುರಿತು, ಕಾಲಕಾಲಕ್ಕೆ ಸಲ್ಲಿಸಬೇಕಾದ ಮಾಹಿತಿಗಳ ಕುರಿತು, ಕಲಂ 18 ರ ಅನ್ವಯ ಹೂಡಿಕೆ ಕುರಿತು, ಕಲಂ 34 ಅಡಿ ಮಾಹಿತಿ ಸಲ್ಲಿಕೆ, ಅನುಪಾಲನಾ ವರದಿ ಸಲ್ಲಿಕೆ, ಶಾಸನಾತ್ಮಕ ಪಾವತಿಗಳ ಕುರಿತು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಕಲ್ಮೇಶ ಎಮ್ ಹಾಗೂ ಶ್ರೀ ಪ್ರವೀಣ ಬಾರ್ಕಿ ಇವರು ಮಾಹಿತಿ ನೀಡಿದರು. ಈ ತರಬೇತಿಯಲ್ಲಿ ಒಟ್ಟು 19 ಸಹಕಾರಿ ಸೌಹಾರ್ದ ಸಹಕಾರಿಗಳಿಂದ 21 ಜನ ಪ್ರತಿನಿಧಿಗಳು ಹಾಜರಾಗಿದ್ದರು.

**ದಿನಾಂಕ 24.07.2025 ರಂದು** ಹಾವೇರಿ ಜಿಲ್ಲೆಯ ಹಾವೇರಿ ತಾಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗಾಗಿ ಕ್ಲಸ್ಟರ ಮಟ್ಟದ ತರಬೇತಿಯನ್ನು ಸುವರ್ಣ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿ, ಹಾವೇರಿ ಇಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಕೆ.ಶಿವಲಿಂಗಪ್ಪ ಇವರು ವಹಿಸಿದ್ದರು. ಸದರಿ ತರಬೇತಿಯಲ್ಲಿ ಸಾಮಾನ್ಯ ಸಭೆ ಜರುಗಿಸುವ ಕುರಿತು, ಕಾಲಕಾಲಕ್ಕೆ ಸಲ್ಲಿಸಬೇಕಾದ ಮಾಹಿತಿಗಳ ಕುರಿತು, ಕಲಂ 18 ರ ಅನ್ವಯ ಹೂಡಿಕೆ ಕುರಿತು, ಕಲಂ 34 ಅಡಿ ಮಾಹಿತಿ ಸಲ್ಲಿಕೆ, ಅನುಪಾಲನಾ ವರದಿ ಸಲ್ಲಿಕೆ, ಶಾಸನಾತ್ಮಕ ಪಾವತಿಗಳ ಕುರಿತು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಕಲ್ಮೇಶ ಎಮ್ ಹಾಗೂ ಶ್ರೀ ಪ್ರವೀಣ ಬಾರ್ಕಿ ಇವರು ಮಾಹಿತಿ ನೀಡಿದರು. ಈ ತರಬೇತಿಯಲ್ಲಿ ಒಟ್ಟು

18 ಸೌಹಾರ್ದ ಸಹಕಾರಿಗಳಿಂದ 18 ಜನ ಪ್ರತಿನಿಧಿಗಳು ಹಾಜರಾಗಿದ್ದರು.

**ದಿನಾಂಕ 16.07.2025 ರಂದು** ಬಾಗಲಕೋಟೆ ಜಿಲ್ಲೆಯ ರಬಕವಿ-ಬನಹಟ್ಟಿ ಮತ್ತು ತೇರದಾಳ ತಾಲೂಕುಗಳ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗಾಗಿ ಕ್ಲಸ್ಟರ ಮಟ್ಟದ ತರಬೇತಿಯನ್ನು ಸುಯಿಧಾನಿ ಸೌಹಾರ್ದ ಸಹಕಾರಿ ನಿ., ರಬಕವಿ ಇಲ್ಲಿ ಆಯೋಜಿಸಲಾಗಿತ್ತು. ಸದರಿ ತರಬೇತಿಯಲ್ಲಿ ಸಾಮಾನ್ಯ ಸಭೆ ಜರುಗಿಸುವ ಕುರಿತು, ಸಭೆಯ ನಡವಳಿಗಳನ್ನು ದಾಖಲಿಸುವ ಕುರಿತು, ಕಾಲಕಾಲಕ್ಕೆ ಸಲ್ಲಿಸಬೇಕಾದ ಮಾಹಿತಿಗಳ ಕುರಿತು, ಕಲಂ 18 ರ ಅನ್ವಯ ಹೂಡಿಕೆ ಕುರಿತು, ಕಲಂ 34 ಅಡಿ ಮಾಹಿತಿ ಸಲ್ಲಿಕೆ, ಅನುಪಾಲನಾ ವರದಿ ಸಲ್ಲಿಕೆ ಕುರಿತು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ವೆಂಕಟೇಶ ರಾಠೋಡ ಹಾಗೂ ಶ್ರೀ ಸುರೇಶ ಶೇಗುಣಸಿ ಇವರು ಮಾಹಿತಿ ನೀಡಿದರು. ಈ ತರಬೇತಿಯಲ್ಲಿ ಒಟ್ಟು 65 ಸೌಹಾರ್ದ ಸಹಕಾರಿಗಳಿಂದ 70 ಜನ ಪ್ರತಿನಿಧಿಗಳು ಹಾಜರಾಗಿದ್ದರು.

**ದಿನಾಂಕ 28.07.2025 ರಂದು** ಬಾಗಲಕೋಟೆ ಜಿಲ್ಲೆಯ ಬಾಗಲಕೋಟೆ ಮತ್ತು ಬೀಳಗಿ ತಾಲೂಕುಗಳ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗಾಗಿ ಕ್ಲಸ್ಟರ ಮಟ್ಟದ ತರಬೇತಿಯನ್ನು ಶ್ರೀ ಸಾಯಿ ಮಂದಿರ, ಬಾಗಲಕೋಟೆ ಇಲ್ಲಿ ಆಯೋಜಿಸಲಾಗಿತ್ತು. ಸದರಿ ತರಬೇತಿಯಲ್ಲಿ ಸಾಮಾನ್ಯ ಸಭೆ ಜರುಗಿಸುವ ಕುರಿತು, ಸಭೆಯ ನಡವಳಿಗಳನ್ನು ದಾಖಲಿಸುವ ಕುರಿತು, ಕಾಲಕಾಲಕ್ಕೆ ಸಲ್ಲಿಸಬೇಕಾದ ಮಾಹಿತಿಗಳ ಕುರಿತು, ಕಲಂ 18 ರ ಅನ್ವಯ ಹೂಡಿಕೆ ಕುರಿತು, ಕಲಂ 34 ಅಡಿ ಮಾಹಿತಿ ಸಲ್ಲಿಕೆ, ಅನುಪಾಲನಾ ವರದಿ ಸಲ್ಲಿಕೆ ಕುರಿತು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ವೆಂಕಟೇಶ ರಾಠೋಡ ಹಾಗೂ ಶ್ರೀಮತಿ ರೇಷ್ಮಾ ಪಾಟೀಲ ಮಾಹಿತಿ ನೀಡಿದರು. ಈ ತರಬೇತಿಯಲ್ಲಿ ಒಟ್ಟು 52 ಸಹಕಾರಿ ಸೌಹಾರ್ದಗಳಿಂದ 59 ಜನ ಪ್ರತಿನಿಧಿಗಳು ಹಾಜರಾಗಿದ್ದರು.

**ದಿನಾಂಕ 31.07.2025 ರಂದು** ಬಾಗಲಕೋಟೆ ಜಿಲ್ಲೆಯ ಮುಧೋಳ ತಾಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗಾಗಿ ಕ್ಲಸ್ಟರ ಮಟ್ಟದ ತರಬೇತಿಯನ್ನು ಮುಧೋಳ ಕಬ್ಬು ಬೆಳೆಗಾರರ ಸೌಹಾರ್ದ ಸಹಕಾರಿ ನಿ., ಮುಧೋಳ ಇಲ್ಲಿ ಆಯೋಜಿಸಲಾಗಿತ್ತು. ಸದರಿ ತರಬೇತಿಯಲ್ಲಿ ಸಾಮಾನ್ಯ ಸಭೆ ಜರುಗಿಸುವ ಕುರಿತು, ಸಭೆಯ ನಡವಳಿಗಳನ್ನು ದಾಖಲಿಸುವ ಕುರಿತು, ಕಾಲಕಾಲಕ್ಕೆ ಸಲ್ಲಿಸಬೇಕಾದ ಮಾಹಿತಿಗಳ ಕುರಿತು, ಕಲಂ 18 ರ ಅನ್ವಯ ಹೂಡಿಕೆ ಕುರಿತು, ಕಲಂ 34 ಅಡಿ ಮಾಹಿತಿ ಸಲ್ಲಿಕೆ, ಅನುಪಾಲನಾ ವರದಿ ಸಲ್ಲಿಕೆ ಕುರಿತು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ವೆಂಕಟೇಶ ರಾಠೋಡ ಹಾಗೂ ಶ್ರೀ ಸುರೇಶ ಶೇಗುಣಸಿ ಇವರು ಮಾಹಿತಿ ನೀಡಿದರು. ಈ ತರಬೇತಿಯಲ್ಲಿ ಒಟ್ಟು 41 ಸಹಕಾರಿ ಸೌಹಾರ್ದಗಳಿಂದ 42 ಜನ ಪ್ರತಿನಿಧಿಗಳು ಹಾಜರಾಗಿದ್ದರು.

**ಉಡುಪಿ :** ದಿನಾಂಕ 25.07.2025 ರಂದು ಬೆಳಿಗ್ಗೆ 10.30 ಘಂಟೆಗೆ ಬೈಂದೂರು ತಾಲ್ಲೂಕಿನ ಸೌಹಾರ್ದ ಸಹಕಾರಿಗಳ ಕ್ಲಸ್ಟರ್ ಮಟ್ಟದ ತರಬೇತಿಯನ್ನು ರಾಘವೇಂದ್ರ ಮಠ ಒತ್ತಿನೇಣಿ ಇಲ್ಲಿ ಆಯೋಜನೆ ಮಾಡಲಾಗಿತ್ತು. ಈ ಸಭೆಯ ಅಧ್ಯಕ್ಷತೆಯನ್ನು ಉಡುಪಿ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ಜಗನ್ನಾಥ ಶೆಟ್ಟಿ ರವರು ವಹಿಸಿದ್ದು ಸೌಹಾರ್ದ ಸಹಕಾರಿಗಳ ಅಭಿವೃದ್ದಿಗೆ ಸಂಬಂಧಿಸಿದಂತೆ ಮುಂದಿನ ಗುರಿಗಳ ಬಗ್ಗೆ ಗಮನಹರಿಸಲು ಸಲಹೆಗಳನ್ನು ನೀಡಿದರು. ಅನಂತರ ಉಡುಪಿ ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿಯವರಾದ ಶ್ರೀ ವಿಜಯ್ ಬಿ.ಎಸ್ ರವರು ಸೌಹಾರ್ದ ಸಹಕಾರಿಗಳ ಆಡಳಿತ ಮಂಡಳಿ ಸಭೆ ಹಾಗೂ ಸಾಮಾನ್ಯ ಸಭೆಯ ಜರುಗುವ ವಿಧಾನಗಳು ಹಾಗೂ ಕಾಯ್ದೆ ಕಲಂ 34 ರ ಮಾಹಿತಿ ಸಲ್ಲಿಕೆ ಕುರಿತು ಹಾಗೂ ಸೌಹಾರ್ದ ಸಹಕಾರಿಗಳ ಸಿಬ್ಬಂದಿಗಳ ಮೇಲ್ವಿಚಾರಣೆ, ಸುಸ್ತಿಸಾಲದ ವಸೂಲಾತಿ ಹಾಗೂ ಲೆಕ್ಕಪರಿಶೋಧನೆಯಲ್ಲಿ ಕಂಡುಬಂದಿರುವ ಗಂಭೀರ ನ್ಯೂನತೆಗಳನ್ನು ಸರಿಪಡಿಸಿಕೊಳ್ಳಲು ಕೈಗೊಳ್ಳಬಹುದಾದ ಕ್ರಮಗಳ ಕುರಿತು ಉಪನ್ಯಾಸ ನೀಡಿದರು. ಈ ತರಬೇತಿ ಕಾರ್ಯಕ್ರಮಕ್ಕೆ 13 ಸೌಹಾರ್ದ ಸಹಕಾರಿ ಸಂಘಗಳಿಂದ 21 ಮಂದಿ ಪ್ರತಿನಿಧಿಗಳು ಭಾಗವಹಿಸಿದ್ದರು.

**ಶಿವಮೊಗ್ಗ :** ದಿನಾಂಕ 30.07.2025ರಂದು ಶಿವಮೊಗ್ಗ ಜಿಲ್ಲೆಯ ಹೊಸನಗರ ತಾಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ಕ್ಲಸ್ಟರ್ ಮಟ್ಟದ ತರಬೇತಿಯನ್ನು ಕೊಡಚಾದ್ರಿ ಅಡಿಕೆ ಸೌಹಾರ್ದ ಸಹಕಾರಿ ಸಂಘ ನಿ, ಹೊಸನಗರ ಇಲ್ಲಿ ಆಯೋಜಿಸಲಾಗಿತ್ತು. ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ನಾಗರಾಜ ಜಿ.ಹೆಚ್. ರವರು ಲೆಕ್ಕಪರಿಶೊಧನಾ ವರದಿ ಸಲ್ಲಿಕೆ, ಸಾಮಾನ್ಯ ಸಭೆ, ಕಲಂ 34ರ ಮಾಹಿತಿ ಸಲ್ಲಿಕೆ, ಸಹಕಾರಿಗಳ ಚುನಾವಣೆ ಹಾಗೂ ಸಿಎಸ್‌ಸಿ ಕೇಂದ್ರ ತೆರೆಯುವ ಕುರಿತು ಮಾಹಿತಿ ನೀಡಿದರು. 10 ಸಹಕಾರಿಗಳಿಂದ 12 ಜನ ಭಾಗವಹಿಸಿದ್ದರು.

**ದಿನಾಂಕ 25.07.2025 ರಂದು** ಬೆಳಿಗ್ಗೆ 10.30 ಘಂಟೆಗೆ ಬೈಂದೂರು ತಾಲ್ಲೂಕಿನ ಸೌಹಾರ್ದ ಸಹಕಾರಿಗಳ ಕ್ಲಸ್ಟರ್ ಮಟ್ಟದ ತರಬೇತಿಯನ್ನು ರಾಘವೇಂದ್ರ ಮಠ ಒತ್ತಿನೇಣಿ ಇಲ್ಲಿ ಆಯೋಜನೆ ಮಾಡಲಾಗಿತ್ತು. ಈ ಸಭೆಯ ಅಧ್ಯಕ್ಷತೆಯನ್ನು ಉಡುಪಿ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ಜಗನ್ನಾಥ ಶೆಟ್ಟಿ ರವರು ವಹಿಸಿದ್ದು ಸೌಹಾರ್ದ ಸಹಕಾರಿಗಳ ಅಭಿವೃದ್ದಿಗೆ ಸಂಬಂಧಿಸಿದಂತೆ ಮುಂದಿನ ಗುರಿಗಳ ಬಗ್ಗೆ ಗಮನಹರಿಸಲು ಸಲಹೆಗಳನ್ನು ನೀಡಿದರು. ಅನಂತರ ಉಡುಪಿ ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿಯವರಾದ ಶ್ರೀ ವಿಜಯ್ ಬಿ.ಎಸ್ ರವರು ಸೌಹಾರ್ದ ಸಹಕಾರಿಗಳ ಆಡಳಿತ ಮಂಡಳಿ ಸಭೆ ಹಾಗೂ ಸಾಮಾನ್ಯ ಸಭೆಯ ಜರುಗುವ ವಿಧಾನಗಳು ಹಾಗೂ ಕಾಯ್ದೆ ಕಲಂ 34 ರ ಮಾಹಿತಿ ಸಲ್ಲಿಕೆ ಕುರಿತು ಹಾಗೂ ಸೌಹಾರ್ದ ಸಹಕಾರಿಗಳ ಸಿಬ್ಬಂದಿಗಳ ಮೇಲ್ವಿಚಾರಣೆ, ಸುಸ್ತಿಸಾಲದ ವಸೂಲಾತಿ ಹಾಗೂ ಲೆಕ್ಕಪರಿಶೋಧನೆಯಲ್ಲಿ ಕಂಡುಬಂದಿರುವ ಗಂಭೀರ ನ್ಯೂನತೆಗಳನ್ನು ಸರಿಪಡಿಸಿಕೊಳ್ಳಲು ಕೈಗೊಳ್ಳಬಹುದಾದ ಕ್ರಮಗಳ ಕುರಿತು ಉಪನ್ಯಾಸ ನೀಡಿದರು. ಈ ತರಬೇತಿ ಕಾರ್ಯಕ್ರಮಕ್ಕೆ 13 ಸೌಹಾರ್ದ ಸಹಕಾರಿ ಸಂಘಗಳಿಂದ 21 ಮಂದಿ ಪ್ರತಿನಿಧಿಗಳು ಭಾಗವಹಿಸಿದ್ದರು.

# ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳು ಸಹಕಾರಿಯ ಆಡಳಿತ ಮಂಡಳಿ ಸಭೆಯಲ್ಲಿ

**ಉಡುಪಿ :** ದಿನಾಂಕ 08.07.2025 ರಂದು ಉಡುಪಿ ವರ್ತಕರ ಸೌಹಾರ್ದ ಸಹಕಾರಿ ನಿ., ಇದರ ಆಡಳಿತ ಮಂಡಳಿ ಸಭೆಯಲ್ಲಿ ಉಡುಪಿ ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿ ಶ್ರೀ ವಿಜಯ್ ಬಿ. ಎಸ್ ರವರು ಭಾಗವಹಿಸಿ ಸದರಿ ಸಭೆಯಲ್ಲಿ ಸಹಕಾರಿಯ ಸಹಕಾರಿ ಬೆಳವಣಿಗೆಯಲ್ಲಿ ನಿರ್ದೇಶಕರ ಪಾತ್ರದ ಕುರಿತು ಮಾಹಿತಿ ನೀಡಿದರು ಹಾಗೂ ಸಹಕಾರಿ ನಿರ್ದೇಶಕರಿಗೆ ತಮ್ಮ ಹೊಣೆಗಾರಿಕೆ, ಹಕ್ಕು ಮತ್ತು ಕರ್ತವ್ಯಗಳ ಬಗ್ಗೆ ಮಾಹಿತಿಯನ್ನು ನೀಡಿ ಸಿಬ್ಬಂದಿಗಳ ಕಾರ್ಯನಿರ್ವಹಣೆಗಳ ಬಗೆಗೆ ಮೇಲ್ವಿಚಾರಣೆಗೆ ಗಮನಹರಿಸಲು ಸಲಹೆ ನೀಡಿದರು. ಅಧ್ಯಕ್ಷ ಮತ್ತು ನಿರ್ದೇಶಕರುಗಳಿಗೆ ಸಿ.ಎಸ್.ಸಿ ಯೋಜನೆಯ ಬಗೆಗೆ ಅವಶ್ಯಕ ಮಾಹಿತಿಯನ್ನು ನೀಡಿದರು. ಸಾಲ ವಸೂಲಾತಿ ಕುರಿತು ಚರ್ಚಿಸಲಾಯಿತು. ಮತ್ತು ಸುಸ್ತಿ ಸಾಲ ವಸೂಲಾತಿಗೆ ಸೌಹಾರ್ದ ದಾವಾ ನ್ಯಾಯಾಲಯದಲ್ಲಿ ದಾವೆ ದಾಖಲಿಸುವ ಕುರಿತು ಮಾಹಿತಿ ನೀಡಿ ಸಾಲ ವಸೂಲಾತಿ ಕುರಿತು ಚರ್ಚಿಸಲಾಯಿತು.

**ದಕ್ಷಿಣ ಕನ್ನಡ :** ದಿನಾಂಕ 19.07.2025 ರಂದು ವಿಟ್ಲದ ಮಾಚಿದೇವ ಸೌಹಾರ್ದ ಸಹಕಾರಿ ನಿ. ಇದರ ಆಡಳಿತ ಮಂಡಳಿಯ ಸಭೆಯಲ್ಲಿ ಭಾಗವಹಿಸಲಾಯಿತು. ಸದರಿ ಸಭೆಯಲ್ಲಿ ಸಹಕಾರಿಯ ಠೇವಣಿಗಳನ್ನು ಹೆಚ್ಚಿಸುವ ಮತ್ತು ಸಾಲ ವಸೂಲಾತಿ ಕುರಿತು ಚರ್ಚಿಸಲಾಯಿತು ಮತ್ತು ಸುಸ್ತಿ ಸಾಲ ವಸೂಲಾತಿಗೆ ಸೌಹಾರ್ದ ದಾವಾ ಪಂಚಾಯ್ತಿ ನ್ಯಾಯಾಲಯದಲ್ಲಿ ದಾವೆ ದಾಖಲಿಸುವ ಕುರಿತು ನಂದನ್ ಬಿ.ಎಸ್. ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿ ದಕ್ಷಿಣ ಕನ್ನಡ ಜಿಲ್ಲೆ ಇವರು ಮಾಹಿತಿಯನ್ನು ನೀಡಿರುತ್ತಾರೆ.

**ದಕ್ಷಿಣ ಕನ್ನಡ :** ದಿನಾಂಕ 08.07.2025 ರಂದು ಕುಡ್ಲ ಸೌಹಾರ್ದ ಸಹಕಾರಿ ನಿ. ಮಂಗಳೂರು ಈ ಸಹಕಾರಿಯ ಆಡಳಿತ ಮಂಡಳಿ ಸಭೆಯಲ್ಲಿ ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳು ಭಾಗವಹಿಸಿರುತ್ತಾರೆ. ಈ ಸಭೆಯಲ್ಲಿ ಸಹಕಾರಿಯ ಸಾಲ ವಸೂಲಾತಿ ಕುರಿತು, ಸುಸ್ತಿ ಸಾಲ ವಸೂಲಾತಿಗೆ ಸೌಹಾರ್ದ ದಾವಾ ನ್ಯಾಯಾಲಯದಲ್ಲಿ ದಾವೆ ದಾಖಲಿಸುವ ಕುರಿತು ಹಾಗೂ ಸಿ.ಎಸ್.ಸಿ ಕೇಂದ್ರ ತೆರೆಯುವ ಬಗ್ಗೆ ಮಾಹಿತಿಯನ್ನು ನೀಡಿ ಸಹಕಾರಿಯ ಕಾರ್ಯಚಟುವಟಿಕೆಯ ಕುರಿತು ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿಯವರಾದ ಶ್ರೀ ನಂದನ್ ಬಿ.ಎಸ್ ರವರು ಮಾರ್ಗದರ್ಶನ ನೀಡಿರುತ್ತಾರೆ.

**ಮಂಡ್ಯ :** ದಿನಾಂಕ : 06.07.2025ರಂದು ಮಾಮರ ಸೌಹಾರ್ದ ಸಹಕಾರಿ ಸಂಘ ನಿ., ಮಳವಳ್ಳಿ, ಮಂಡ್ಯ ಈ ಸಹಕಾರಿಯ ಆಡಳಿತ ಮಂಡಲಿ ಸಭೆಯಲ್ಲಿ ಶ್ರೀ ಬಲರಾಮ್ ಎನ್, ಸೌಹಾರ್ದ ಅಭಿವೃದ್ಧಿ ಅಧಿಕಾರಿ, ಇವರು ಭಾಗವಹಿಸಿ ಸಹಕಾರಿಯ ಕಾರ್ಯನಿರ್ವಹಣೆಯಲ್ಲಿ ಆಡಳಿತ ಮಂಡಲಿ ನಿರ್ದೇಶಕರ ಹಕ್ಕು ಮತ್ತು ಜವಾಬ್ದಾರಿಗಳ ಕುರಿತು ಹಾಗೂ ಸೌಹಾರ್ದ ಕಾಯ್ದೆಯ ಬಗ್ಗೆ ಮಾಹಿತಿಯನ್ನು ನೀಡಲಾಯಿತು ಈ ಸಂದರ್ಭದಲ್ಲಿ ಸಹಕಾರಿಯ 10 ಜನ ನಿರ್ದೇಶಕರುಗಳು ಹಾಗೂ ಮುಖ್ಯ ಕಾರ್ಯನಿರ್ವಾಹಕರು ಹಾಜರಿದ್ದರು.

**ಬೆಂಗಳೂರು :** ದಿನಾಂಕ 04.07.2025ರಂದು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಲಕ್ಷ್ಮೀಕಾಂತ್ ಎ.ಎಮ್. ರವರು ಗಂಗೋತ್ರಿ ಸೌಹಾರ್ದ ಸಹಕಾರಿ ನಿ, ಬೆಂಗಳೂರು ಸಹಕಾರಿಯ ನೂತನ ಆಡಳಿತ ಮಂಡಳಿ ಸದಸ್ಯರಿಗೆ ತಮ್ಮ ವಿಶೇಷಾಧಿಕಾರಿ ಅಧಿಕಾರವನ್ನು ಹಸ್ತಾಂತರ ಮಾಡಿದರು.

## ಭೇಟಿ



**ಬೆಳಗಾವಿ :** ದಿನಾಂಕ 19.07.2025 ರಂದು ಮಲೆನಾಡು ಅಡಿಕೆ ಮಾರಾಟದ ಸಹಕಾರ ಸಂಘ ನಿಯಮಿತ ಶಿವಮೊಗ್ಗ ಇದರ ಉಪಾಧ್ಯಕ್ಷರಾದ ಶ್ರೀ ಮಹೇಶ್ ಹೆಚ್. ಎಸ್ ಹಾಗೂ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶ್ರೀಕಾಂತ ಬರುವೆ ಇವರು ಬೆಳಗಾವಿ ಪ್ರಾಂತೀಯ ಕಛೇರಿಗೆ ಭೇಟಿ ನೀಡಿದರು. ಈ ಸಂಧರ್ಭದಲ್ಲಿ ಪ್ರಾಂತೀಯ ಕಛೇರಿ ಸಿಬ್ಬಂದಿಗಳು ಉಪಸ್ಥಿತರಿದ್ದರು.




**ಬೆಳಗಾವಿ :** ಬೆಳಗಾವಿ ಪ್ರಾಂತದ ಸಹಕಾರ ಸಂಘಗಳ ಜಂಟಿ ನಿಬಂಧಕರಾಗಿ ಶ್ರೀ ಕಲ್ಲಪ್ಪ ಓಬಣ್ಣಗೋಳ ಇವರು ಅಧಿಕಾರ ಸ್ವೀಕರಿಸಿದರು. ಈ ಸಂದರ್ಭದಲ್ಲಿ ಸಹಕಾರ ಸಂಘಗಳ ಉಪನಿಬಂಧಕರು ಹಾಗೂ ದಾವಾ ಪಂಚಾಯಿತಿ ನ್ಯಾಯಾಲಯದ ಪಿಠಾಧೀಕಾರಿಗಳಾದ ಶ್ರೀಮತಿ ರಂಜನಾ ಪೋಳ, ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ ಹೊಂಗಲ ಮತ್ತು ಪ್ರಾಂತೀಯ ಕಛೇರಿ ಸಿಬ್ಬಂದಿಗಳು ಉಪಸ್ಥಿತರಿದ್ದರು.

## ಜುಲೈ 2025 : ಶಾಸನಾತ್ಮಕ ವಿಭಾಗದ ಕಾರ್ಯಚಟುವಟಿಕೆಗಳು


**1. ಸೌಹಾರ್ದ ಸಹಕಾರಿಗಳಿಗೆ ವಿಶೇಷಾಧಿಕಾರಿಯನ್ನು ನೇಮಕ ಮಾಡಿರುವ ಕುರಿತು.**

ಸಂಯುಕ್ತ ಸಹಕಾರಿಯ ಸದಸ್ಯ ಸಹಕಾರಿಯ ಆಡಳಿತ ಮಂಡಲಿಯ ಪದಾವಧಿಯು ಮುಕ್ತಾಯವಾದ ಹಾಗೂ ನಿರ್ದೇಶಕರ ಅನರ್ಹತೆಯ ಹಿನ್ನಲೆಯಲ್ಲಿ ಜುಲೈ ಮಾಹೆಯಲ್ಲಿ ಒಟ್ಟು 12 ಸೌಹಾರ್ದ ಸಹಕಾರಿಗಳಿಗೆ ಕರ್ನಾಟಕ ಸೌಹಾರ್ದ ಕಾಯ್ದೆ 1997ರ ಕಲಂ 38ಎ ರನ್ವಯ ವಿಶೇಷಾಧಿಕಾರಿಗಳನ್ನು ನೇಮಕ ಮಾಡಿ ಆದೇಶವನ್ನು ಹೊರಡಿಸಲಾಗಿರುತ್ತದೆ.

**2. ಸಮಾಪನಾಧಿಕಾರಿ ನೇಮಕವಾಗಿರುವ ಸೌಹಾರ್ದ ಸಹಕಾರಿಗಳ ವಿವರ :**

| ಕ್ರ. ಸಂ. | ಸಹಕಾರಿಯ ಹೆಸರು | ನೇಮಕಾತಿ ಪ್ರಾಧಿಕಾರ | ಆದೇಶದ ದಿನಾಂಕ | ಸಮಾಪನಾಧಿಕಾರಿಯ ಹೆಸರು |
|---|---|---|---|---|
| 1 | ಶ್ರೀ ಲಕ್ಷ್ಮೀ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಗುಟ್ಟೂರು ಕಾಲೋನಿ ಹರಿಹರ, ದಾವಣಗೆರೆ ಜಿಲ್ಲೆ | ಸಹಾಯಕ ನಿಬಂಧಕರು, ದಾವಣಗೆರೆ | 26–06–2025 | ಸೌಹಾರ್ದ ಅಭಿವೃದ್ಧಿ ಅಧಿಕಾರಿ, ದಾವಣಗೆರೆ ಜಿಲ್ಲೆ |
| 2 | ಶ್ರೀ ಗುರುಗದ್ದಿಗೇಶ್ವರ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಟಿ.ಎಮ್. ರೋಡ್, ಟಿ.ಎಸ್. ಕಾಂಪ್ಲೇಕ್ಸ್, ಪಟ್ಟಣ ಪಂಚಾಯತಿ ಎದುರು, ಹೊನ್ನಾಳಿ, ದಾವಣಗೆರೆ ಜಿಲ್ಲೆ | ಸಹಾಯಕ ನಿಬಂಧಕರು, ದಾವಣಗೆರೆ | 26–06–2025 | ಸೌಹಾರ್ದ ಅಭಿವೃದ್ಧಿ ಅಧಿಕಾರಿ, ದಾವಣಗೆರೆ ಜಿಲ್ಲೆ |
| 3 | ಕವಾಡ ಮಾರ್ಗದರ್ಶಿ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಗೊಲ್ಲರಹಟ್ಟಿ, ಜಗಳೂರು ತಾಲೂಕು, ದಾವಣಗೆರೆ ಜಿಲ್ಲೆ | ಸಹಾಯಕ ನಿಬಂಧಕರು, ದಾವಣಗೆರೆ | 26.06.2025 | ಸೌಹಾರ್ದ ಅಭಿವೃದ್ಧಿ ಅಧಿಕಾರಿ, ದಾವಣಗೆರೆ ಜಿಲ್ಲೆ |
| 4 | ಕವಾಡ ಅರುಣೋದಯ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಅನಬೂರ್, ಜಗಳೂರು ತಾಲೂಕು, ದಾವಣಗೆರೆ ಜಿಲ್ಲೆ | ಸಹಾಯಕ ನಿಬಂಧಕರು, ದಾವಣಗೆರೆ | 26.06.2025 | ಸೌಹಾರ್ದ ಅಭಿವೃದ್ಧಿ ಅಧಿಕಾರಿ, ದಾವಣಗೆರೆ ಜಿಲ್ಲೆ |
| 5 | ಕವಾಡ ಆದರ್ಶ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ದೊಡ್ಡಬೊಮ್ಮನಹಳ್ಳಿ, ಜಗಳೂರು ತಾಲೂಕು, ದಾವಣಗೆರೆ ಜಿಲ್ಲೆ | ಸಹಾಯಕ ನಿಬಂಧಕರು, ದಾವಣಗೆರೆ | 26.06.2025 | ಸೌಹಾರ್ದ ಅಭಿವೃದ್ಧಿ ಅಧಿಕಾರಿ, ದಾವಣಗೆರೆ ಜಿಲ್ಲೆ |
| 6 | ಸಾಕೇತ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಬೆಳ್ತಂಗಡಿ, ದ.ಕ. ಜಿಲ್ಲೆ | ಸಹಾಯಕ ನಿಬಂಧಕರು, ಪುತ್ತೂರು | 27.06.2025 | ಶ್ರೀ ನಂದನ ಬಿ.ಎನ್. ಸೌಹಾರ್ದ ಅಭಿವೃದ್ಧಿ ಅಧಿಕಾರಿ, ದ.ಕ. ಜಿಲ್ಲೆ |
| 7 | ಜನತಾ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಮ.ನಂ. 9–1–575, ನಂದಿ ಕಾಲೋನಿ, ಕೆಪಿಟಿಸಿಎಲ್ ರಸ್ತೆ, ಬೀದರ ತಾಲೂಕು, ಬೀದರ ಜಿಲ್ಲೆ | ಸಹಾಯಕ ನಿಬಂಧಕರು, ಬೀದರ | 23.06.2025 | ಸೌಹಾರ್ದ ಜಿಲ್ಲಾ ಸಂಯೋಜಕರು, ಬೀದರ |
| 8 | ಗ್ರಾಮೀಣ ಅಭಿವೃದ್ಧಿ ಪತ್ತಿನ ಸೌಹಾರ್ದ ಸಹಕಾರಿ ನಿ., ಶಿರಸಿ (ಎ), ತಾ. & ಜಿ. ಬೀದರ | ಸಹಾಯಕ ನಿಬಂಧಕರು, ಬೀದರ | 23.06.2025 | ಸೌಹಾರ್ದ ಜಿಲ್ಲಾ ಸಂಯೋಜಕರು, ಬೀದರ |
| 9 | ಪ್ರಗತಿ ಸೌಹಾರ್ದ ಪತ್ತಿನ ಸಹಕಾರಿ ನಿ., ಮುದ್ದಣ್ಣ ಕಾಂಪ್ಲೆಕ್ಸ್, ಬಿವಿಬಿ ಕಾಲೇಜ್ ರಸ್ತೆ, ಬೀದರ | ಸಹಾಯಕ ನಿಬಂಧಕರು, ಬೀದರ | 23.06.2025 | ಸೌಹಾರ್ದ ಜಿಲ್ಲಾ ಸಂಯೋಜಕರು, ಬೀದರ |
| 10 | ಶ್ರೀ ಸ್ವಾಮಿ ವೀರಭದ್ರೇಶ್ವರ ಪತ್ತಿನ ಸೌಹಾರ್ದ ಸಹಕಾರಿ ನಿ., ಅಂಗಡಿ ಸಂಖ್ಯೆ–2, ಉದಗಿರೆ ಕಾಂಪ್ಲೆಕ್ಸ್, ಎಸ್.ಬಿ. ಎಚ್. ಎದುರುಗಡೆ, ಶಿವನಗರ (ಉತ್ತರ), ಬೀದರ ತಾಲೂಕು, ಬೀದರ ಜಿಲ್ಲೆ | ಸಹಾಯಕ ನಿಬಂಧಕರು, ಬೀದರ | 23.06.2025 | ಸೌಹಾರ್ದ ಜಿಲ್ಲಾ ಸಂಯೋಜಕರು, ಬೀದರ |

| | | | | |
|---|---|---|---|---|
| 11 | ನಂದಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ನಂ. 9–10–216, "ಶ್ರೀ ನಿವಾಸ", ಕೆನರಾ ಬ್ಯಾಂಕ್ ಹಿಂದೆ, ಚಿಟ್ಟಾ, ಬೀದರ ತಾಲೂಕು, ಬೀದರ ಜಿಲ್ಲೆ | ಸಹಾಯಕ ನಿಬಂಧಕರು, ಬೀದರ | 23.06.2025 | ಸೌಹಾರ್ದ ಜಿಲ್ಲಾ ಸಂಯೋಜಕರು, ಬೀದರ |
| 12 | ಆರ್.ಕೆ. ಸೌಹಾರ್ದ ಪತ್ತಿನ ಸಹಕಾರಿ ನಿ., ಧನರಾಜ್ ಚಿದ್ರೆ ಕಾಂಪ್ಲೆಕ್ಸ್, ಎಸ್.ಬಿ.ಹೆಚ್. ಪಕ್ಕದಲ್ಲಿ, ಮುಂಗ್ಲೆ ಆಸ್ಪತ್ರೆ ಹತ್ತಿರ, ಔರಾದ (ಬಿ) ಬೀದರ ಜಿಲ್ಲೆ | ಸಹಾಯಕ ನಿಬಂಧಕರು, ಬೀದರ | 23.06.2025 | ಸೌಹಾರ್ದ ಜಿಲ್ಲಾ ಸಂಯೋಜಕರು, ಬೀದರ |
| 13 | ಶ್ರೀ ಸಾಯಿ ಕೃಪಾ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಬಸವಕಲ್ಯಾಣ ತಾಲೂಕು, ಬೀದರ ಜಿಲ್ಲೆ | ಸಹಾಯಕ ನಿಬಂಧಕರು, ಬೀದರ | 23.06.2025 | ಸೌಹಾರ್ದ ಜಿಲ್ಲಾ ಸಂಯೋಜಕರು, ಬೀದರ |



## 103ನೇ ಅಂತರರಾಷ್ಟ್ರೀಯ ಸಹಕಾರ ದಿನ

**ಧ್ಯೇಯ : "ಉತ್ತಮ ಜಗತ್ತಿಗಾಗಿ ಸಮಗ್ರ ಮತ್ತು ಸುಸ್ಥಿರ ಪರಿಹಾರಗಳನ್ನು ಚಾಲನೆ ಮಾಡುವುದು."**

103ನೇ ಅಂತರರಾಷ್ಟ್ರೀಯ ಸಹಕಾರ ದಿನವನ್ನು ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿ, ಬೆಂಗಳೂರು ವಿಭಾಗ ಹಾಗೂ ಸೌಹಾರ್ದ ಸಹಕಾರಿಗಳ ದಾವಾ ಪಂಚಾಯಿತಿ ನ್ಯಾಯಾಲಯ ಮತ್ತು ಬೆಳಗಾವಿ ವಿಭಾಗ, ಕಲಬುರಗಿ ವಿಭಾಗ, ಮೈಸೂರು ವಿಭಾಗದಲ್ಲಿ ಹಾಗೂ ಜಿಲ್ಲಾ ಸಂಪರ್ಕ ಕಛೇರಿಗಳಲ್ಲಿ ಆಚರಿಸಲಾಯಿತು.



**ಬೆಂಗಳೂರು :** 103ನೇ ಅಂತರರಾಷ್ಟ್ರೀಯ ಸಹಕಾರ ದಿನಾಚರಣೆಯ ಧ್ವಜಾರೋಹಣವನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಮಾನ್ಯ ಶ್ರೀ ಬಿ ಎಸ್ ಗುಂಡುರಾವ್ ರವರು ನೆರವೇರಿಸಿದರು.

ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲ, ಮತ್ತು ಕೇಂದ್ರ ಕಛೇರಿ, ಬೆಂಗಳೂರು ಪ್ರಾಂತೀಯ ಕಛೇರಿಯ ಹಾಗೂ ದಾವಾ ಪಂಚಾಯಿತಿ ನ್ಯಾಯಾಲಯದ ಸಿಬ್ಬಂದಿಯವರು ಉಪಸ್ಥಿತರಿದ್ದರು.



**ಕಲಬುರಗಿ :** 103ನೇ ಅಂತರರಾಷ್ಟ್ರೀಯ ಸಹಕಾರ ದಿನಾಚರಣೆಯ ಧ್ವಜಾರೋಹಣವನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀಮತಿ ಶೈಲಜಾ ತಪಲಿಯವರು ನೆರವೇರಿಸಿದರು. ಈ ಸಂದರ್ಭದಲ್ಲಿ ಮಾನ್ಯ ಪ್ರಾಂತೀಯ ವ್ಯವಸ್ಥಾಪಕರು ಹಾಗೂ ಕಛೇರಿಯ ಸಿಬ್ಬಂದಿಗಳು ಉಪಸ್ಥಿತರಿದ್ದರು.



**ಬೆಳಗಾವಿ :** 103ನೇ ಅಂತರರಾಷ್ಟ್ರೀಯ ಸಹಕಾರ ದಿನಾಚರಣೆಯ ಧ್ವಜಾರೋಹಣವನ್ನು ಮಾನ್ಯ ಸಹಕಾರ ಸಂಘಗಳ ಉಪ ನಿಬಂಧಕರು ಹಾಗೂ (441) ನ್ಯಾಯಾಲಯದ ಮಾನ್ಯ ಪೀಠಾಧಿಕಾರಿಗಳಾದ ಶ್ರೀಮತಿ ರಂಜನಾ ಪೋಳರವರು ನೆರವೇರಿಸಿದರು. ಈ ಸಂದರ್ಭದಲ್ಲಿ ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಹಾಗೂ ಕಛೇರಿಯ ಸಿಬ್ಬಂದಿಗಳು ಉಪಸ್ಥಿತರಿದ್ದರು



**ಮೈಸೂರು :** 103ನೇ ಅಂತರರಾಷ್ಟ್ರೀಯ ಸಹಕಾರ ದಿನಾಚರಣೆಯ ಧ್ವಜಾರೋಹಣವನ್ನು ಸಂಯುಕ್ತ ಸಹಕಾರಿಯ ಮಾನ್ಯ ಸಹಪ್ರಧಾನ ವ್ಯವಸ್ಥಾಪಕರಾದ ಶ್ರೀ ರಾಜಶೇಖರ್ ಹೂಗಾರ ರವರು ನೆರವೇರಿಸಿದರು. ಈ ಸಂದರ್ಭದಲ್ಲಿ ಮಾನ್ಯ ಪ್ರಾಂತೀಯ ವ್ಯವಸ್ಥಾಪಕರು ಹಾಗೂ ಕಛೇರಿಯ ಸಿಬ್ಬಂದಿಗಳು ಉಪಸ್ಥಿತರಿದ್ದರು.

## ತರಬೇತಿ ಹಾಗೂ ಶಿಕ್ಷಣ ವಿಭಾಗದ 2025-26ನೇ ಸಾಲಿನ ಕಾರ್ಯಕ್ರಮಗಳ ಮುನ್ನೋಟ

### ಕೇಂದ್ರ ಕಛೇರಿ ಬೆಂಗಳೂರು

| ಕ್ರ. ಸಂ. | ತರಬೇತಿ/ ಕಾರ್ಯಕ್ರಮದ ಹೆಸರು | ತರಬೇತಿಯ ಫಲಾನುಭವಿಗಳು | ಮಾಹೆ | ತರಬೇತಿಗಳು | ಅವಧಿ | ಭಾಗವಹಿಸುವವರ ಅಂದಾಜು ಸಂಖ್ಯೆ |
|---|---|---|---|---|---|---|
| 1 | ಕೌಶಲ್ಯ ಅಭಿವೃದ್ಧಿ ತರಬೇತಿ | ಸಂಯುಕ್ತ ಸಹಕಾರಿಯ ಹಿರಿಯ ಅಧಿಕಾರಿಗಳು, ಅಧಿಕಾರಿ, ಕಿರಿಯ ಅಧಿಕಾರಿ & ಜಿಲ್ಲಾ ಸಂಯೋಜಕರು | ಏಪ್ರಿಲ್ | 1 | 2 ದಿನಗಳು | 60 |
| 2 | ವೃತ್ತಿಪರತೆ | ಸಂಯುಕ್ತ ಸಹಕಾರಿಯ ಹಿರಿಯ ಹಾಗೂ ಕಿರಿಯ ಸಹಾಯಕರು | ಏಪ್ರಿಲ್ | 1 | 2 ದಿನಗಳು | 50 |
| 3 | ವೃತ್ತಿಪರತೆ | ಸಂಯುಕ್ತ ಸಹಕಾರಿಯ ಉಪಸಿಬ್ಬಂದಿ ಮತ್ತು ಚಾಲಕರು | ಏಪ್ರಿಲ್ | 1 | 2 ದಿನಗಳು | 22 |
| 4 | ಆಡಳಿತ ಪರಿಣಿತಿ ತರಬೇತಿ | ಸೌಹಾರ್ದ ಸಹಕಾರಿಗಳ ನಿರ್ದೇಶಕರು | ಏಪ್ರಿಲ್ | 2 | 2 ದಿನಗಳು | 160 |
| 5 | ತರಬೇತುದಾರರ ತರಬೇತಿ | ತರಬೇತಿಯನ್ನು ನೀಡುವವರು | ಮೇ | 1 | 2 ದಿನಗಳು | 50 |
| 6 | ವಿಶೇಷ ತರಬೇತಿ /ಸಮನ್ವಯ ಸಭೆ | ಸಹಕಾರ ಇಲಾಖೆಯ ಅಧಿಕಾರಿಗಳು | ಮೇ | 2 | 2 ದಿನಗಳು | 100 |
| 7 | ಸಂಪನ್ಮೂಲ ವ್ಯಕ್ತಿಗಳ ಸಭೆ(ಆನ್‌ಲೈನ್ ಮೀಟಿಂಗ್) | ಸಂಯುಕ್ತ ಸಹಕಾರಿಯ ಸಂಪನ್ಮೂಲ ವ್ಯಕ್ತಿಗಳು | ಮೇ | 1 | 1 ದಿನ | 50 |
| 8 | ಕಾರ್ಯಕ್ಷಮತೆ ತರಬೇತಿ | ಸೌಹಾರ್ದ ಸಹಕಾರಿಗಳ ಅಧಿಕಾರಿಗಳು | ಜೂನ್ | 1 | 5 ದಿನಗಳು | 60 |
| 9 | ಬೇಸಿಕ್ ಬ್ಯಾಂಕಿಂಗ್ ಸರ್ಟಿಫಿಕೇಟ್ ಕೋರ್ಸ್ | ಸೌಹಾರ್ದ ಸಹಕಾರಿ ಬ್ಯಾಂಕುಗಳ ಪರೀಕ್ಷಾರ್ಥ/ ನೂತನ ಸಿಬ್ಬಂದಿಗಳು | ಜುಲೈ | 1 | 7 ದಿನಗಳು | 60 |
| 10 | ವಿಷಯಾಧಾರಿತ ತರಬೇತಿಗಳು | ಪಟ್ಟಣ ಸೌಹಾರ್ದ ಸಹಕಾರ ಬ್ಯಾಂಕ್‌ಗಳ/ ಸೌಹಾರ್ದ ಸಹಕಾರಿಗಳ ಸಿಬ್ಬಂದಿಗಳು | ಮೇ/ಜುಲೈ | 2 | 2 ದಿನಗಳು | 70 |
| 11 | ಆಡಳಿತ ಅಭಿವೃದ್ಧಿ ತರಬೇತಿ | ಪಟ್ಟಣ ಸೌಹಾರ್ದ ಸಹಕಾರ ಬ್ಯಾಂಕ್‌ಗಳ ಪದಾಧಿಕಾರಿ & ನಿರ್ದೇಶಕರುಗಳು | ಮೇ | 1 | 2 ದಿನಗಳು | 40 |
| 12 | ರಾಜ್ಯ ಸಮಾವೇಶಗಳು / ಸಹಕಾರ ಸಪ್ತಾಹ ಆಚರಣೆ | ಸೌಹಾರ್ದ ಸಹಕಾರಿಗಳು | ನವೆಂಬರ್ | 1 | 1 ದಿನ | 2500 |
| 13 | ಉನ್ನತ ಮಟ್ಟದ ತರಬೇತಿ | ಪಟ್ಟಣ ಸೌಹಾರ್ದ ಸಹಕಾರ ಬ್ಯಾಂಕ್‌ಗಳ ಮುಖ್ಯಕಾರ್ಯನಿರ್ವಾಹಕರು/ ಹಿರಿಯ ಅಧಿಕಾರಿಗಳು | ಡಿಸೆಂಬರ್ | 1 | 2 ದಿನಗಳು | 30 |
| 14 | ಪ್ರಮುಖರ ಸಭೆ | ಸಹಕಾರ ಕ್ಷೇತ್ರದ ಧುರೀಣರು | ನವೆಂಬರ್ | 1 | 1 ದಿನ | 80 |
| 15 | ವ್ಯಕ್ತಿತ್ವ ವಿಕಸನ ತರಬೇತಿ | ಸೌಹಾರ್ದ ಸಹಕಾರಿಗಳ ಸಿಬ್ಬಂದಿಗಳು | ಡಿಸೆಂಬರ್ | 1 | 10 ದಿನಗಳು | 60 |
| 16 | ಯುವಜನತೆ ಮತ್ತು ಸಂವಾದ | ವಿಶ್ವವಿದ್ಯಾನಿಲಯ ಹಾಗೂ ಪದವಿ ಕಾಲೇಜುಗಳ ವಿದ್ಯಾರ್ಥಿಗಳು | ಸಂದರ್ಭಾನುಸಾರ | 5 | 1 ದಿನ | 1500 |
| 17 | ಅಂತರರಾಜ್ಯ ಸೆಮಿನಾರ್ ಆಯೋಜನೆಯಲ್ಲಿ ಭಾಗವಹಿಸುವಿಕೆ | ಸಂಯುಕ್ತ ಸಹಕಾರಿಯ ಪದಾಧಿಕಾರಿಗಳು / ಸೌಹಾರ್ದ ಸಹಕಾರಿಗಳು ಹಾಗೂ ಸಂಯುಕ್ತ ಸಹಕಾರಿಯ ಅಧಿಕಾರಿಗಳು | ಸಂದರ್ಭಾನುಸಾರ | 1 | 1 ದಿನ | 25 |

| ಕ್ರ. ಸಂ. | ತರಬೇತಿ/ ಕಾರ್ಯಕ್ರಮದ ಹೆಸರು | ತರಬೇತಿಯ ಫಲಾನುಭವಿಗಳು | ಮಾಹೆ | ತರಬೇತಿಗಳು | ಅವಧಿ | ಭಾಗವಹಿಸುವವರ ಅಂದಾಜು ಸಂಖ್ಯೆ |
|---|---|---|---|---|---|---|
| 18 | ಅಂತರರಾಷ್ಟ್ರೀಯ ಸೆಮಿನಾರ್‌ಗಳ ಯೋಜನೆ | ಸಂಯುಕ್ತ ಸಹಕಾರಿಯ ಪದಾಧಿಕಾರಿಗಳು ಹಾಗೂ ಸಂಯುಕ್ತ ಸಹಕಾರಿಯ ಅಧಿಕಾರಿಗಳು | ಸಂದರ್ಭಾನುಸಾರ | 1 | 1 ದಿನ | – |
| 19 | ಆಡಳಿತ ಅಭಿವೃದ್ಧಿ ತರಬೇತಿ | ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯ ಸದಸ್ಯರು | ಆಡಳಿತ ಮಂಡಳಿ ನಿರ್ಣಯದಂತೆ | 2 | 2 ದಿನಗಳು | 60 |
| 20 | ಮಹಿಳಾ ದಿನಾಚಣೆ | ಮಹಿಳಾ ಸಹಕಾರಿಗಳು | ಮಾರ್ಚ್ | 1 | 1 ದಿನ | 100 |
| 21 | ತರಬೇತಿ ಕಾರ್ಯಕ್ರಮ ಹಾಗೂ ಅಂತರರಾಜ್ಯ ಅಧ್ಯಯನ ಪ್ರವಾಸ | ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯ ಸದಸ್ಯರು | ಆಡಳಿತ ಮಂಡಳಿ ನಿರ್ಣಯದಂತೆ | 1 | 5 ದಿನಗಳು | 30 |
| **ರಾಜ್ಯ ಮಟ್ಟದ-ರಜತ ಮಹೋತ್ಸವ ಕಾರ್ಯಕ್ರಮಗಳು** | | | | | | |
| 1 | ರಾಜ್ಯ ಮಟ್ಟದ ಕಾರ್ಯಕ್ರಮ | ಸೌಹಾರ್ದ ಸಹಕಾರಿಗಳು – ಬೆಂಗಳೂರು | ಆಗಸ್ಟ್ | 1 | 1 ದಿನ | 5000 |
| 2 | ರಾಜ್ಯ ಮಟ್ಟದ ಕಾರ್ಯಕ್ರಮ | ಸೌಹಾರ್ದ ಸಹಕಾರಿಗಳು-ಬೆಳಗಾವಿ | ಡಿಸೆಂಬರ್ | 1 | 1 ದಿನ | 3000 |
| 3 | ಮಹಿಳಾ ಸಮಾವೇಶ | ಮಹಿಳಾ ಸಹಕಾರಿಗಳು | ಮಾರ್ಚ್ | 1 | 1 ದಿನ | 5000 |
| **ಮೈಸೂರು ಪ್ರಾಂತೀಯ ಕಛೇರಿ** | | | | | | |
| 1 | ಲೆಕ್ಕಪರಿಶೋಧನಾ ವರದಿಗಳ ಪೂರ್ವ ಸಿದ್ಧತೆ | ಪ್ರಾಂತದ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರು | ಏಪ್ರಿಲ್/ಮೇ | 4 | 1 | 320 |
| 2 | ಸಂಪರ್ಕ ಸಭೆ | ಪ್ರಾಂತದ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಹಾಗೂ ಮುಖ್ಯಕಾರ್ಯನಿರ್ವಾಹಕರು | ಜೂನ್/ಜುಲೈ /ಆಗಸ್ಟ್ | 7 | 1 | 1200 |
| 3 | ಪ್ರವೇಶ ತರಬೇತಿ | ಪ್ರಾಂತದ ಹೊಸ ಸಹಕಾರಿಗಳ ಅಧ್ಯಕ್ಷರು & ಮುಖ್ಯಕಾರ್ಯನಿರ್ವಾಹಕರು | ಸಂದರ್ಭಾನುಸಾರ | 2 | 2 ದಿನಗಳು | 120 |
| 4 | ವಿಷಯಾಧಾರಿತ ತರಬೇತಿ (ಆನ್‌ಲೈನ್) | ಪ್ರಾಂತದ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ನಿರ್ದೇಶಕರು & ಮುಖ್ಯಕಾರ್ಯನಿರ್ವಾಹಕರು | ಸೆಪ್ಟೆಂಬರ್ | 4 | ಅರ್ಧ ದಿನ | 800 |
| 5 | ನಷ್ಟದಲ್ಲಿರುವ ಸೌಹಾರ್ದ ಸಹಕಾರಿಗಳಿಗೆ ತರಬೇತಿ | 2024-25 ಸಾಲಿನ ಪ್ರಾಂತದ ನಷ್ಟದ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರು | ಅಕ್ಟೋಬರ್/ ನವೆಂಬರ್ | 6 | 1 ದಿನ | 240 |
| 6 | ಮುಖ್ಯಕಾರ್ಯ ನಿರ್ವಾಹಕರ ಸಭೆ | ಪ್ರಾಂತದ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರು | ಡಿಸೆಂಬರ್ | 8 | 1 ದಿನ | 550 |

| ಕ್ರ. ಸಂ. | ತರಬೇತಿ/ ಕಾರ್ಯಕ್ರಮದ ಹೆಸರು | ತರಬೇತಿಯ ಫಲಾನುಭವಿಗಳು | ಮಾಹೆ | ತರಬೇತಿಗಳು | ಅವಧಿ | ಭಾಗವಹಿಸುವವರ ಅಂದಾಜು ಸಂಖ್ಯೆ |
|---|---|---|---|---|---|---|
| 7 | ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ | ಪ್ರಾಂತದ ಸೌಹಾರ್ದ ಸಹಕಾರಿಗಳ ಮಹಿಳಾ ಅಧ್ಯಕ್ಷರು, ನಿರ್ದೇಶಕರು ಮತ್ತು ಮಹಿಳಾ ಸಿಬ್ಬಂದಿಗಳು | ಮಾರ್ಚ್ | 2 | 1 ದಿನ | 200 |
| 8 | ಲೆಕ್ಕಪರಿಶೋಧಕರ ಕಾರ್ಯಗಾರ | ಪ್ರಾಂತದ ಲೆಕ್ಕಪರಿಶೋಧಕರು | ಸಂದರ್ಭಾನುಸಾರ | 2 | 1 ದಿನ | 100 |
| 9 | ಕ್ಲಸ್ಟರ್ ಮಟ್ಟದ ತರಬೇತಿ | ಪ್ರಾಂತದ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ನಿರ್ದೇಶಕರು, ಮುಖ್ಯಕಾರ್ಯ ನಿರ್ವಾಹಕರು ಹಾಗೂ ಸಿಬ್ಬಂದಿಗಳು | ಸಂದರ್ಭಾನುಸಾರ | 22 | ಅರ್ಧ ದಿನ | 880 |
| 10 | ಪ್ರವರ್ತಕರ ಸಭೆಗಳು | ಹೊಸ ಸೌಹಾರ್ದ ಸಹಕಾರಿಗಳ ಪ್ರವರ್ತಕರು | ಸಂದರ್ಭಾನುಸಾರ | 60 | ಅರ್ಧ ದಿನ | 600 |
| 11 | ವಿಷಯಾಧಾರಿತ ತರಬೇತಿ | ಪ್ರಾಂತದ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ನಿರ್ದೇಶಕರು, ಮುಖ್ಯಕಾರ್ಯ ನಿರ್ವಾಹಕರು & ಸಿಬ್ಬಂದಿಗಳು | ಸಂದರ್ಭಾನುಸಾರ | 12 | 1 ದಿನ | 960 |
| 12 | ಸಹಕಾರ ಹಾಗೂ ಯುವಜನತೆ –ಸಂವಾದ ಕಾರ್ಯಕ್ರಮ | ವಿಶ್ವವಿದ್ಯಾನಿಲಯ ಹಾಗೂ ಪದವಿ ಕಾಲೇಜುಗಳ ವಿದ್ಯಾರ್ಥಿಗಳು | ಸಂದರ್ಭಾನುಸಾರ | 4 | 1 ದಿನ | 1000 |
| 13 | ಆಡಳಿತ ಪರಿಣಿತಿ ತರಬೇತಿ | ಪ್ರಾಂತದ ಸೌಹಾರ್ದ ಸಹಕಾರಿಗಳ ನಿರ್ದೇಶಕರು | ಸಂದರ್ಭಾನುಸಾರ | 10 | 1 ದಿನ | 1000 |
| 14 | ಉನ್ನತ ಮಟ್ಟದ ತರಬೇತಿ | 1 ಕೋಟಿಯಿಂದ 5 ಕೋಟಿ ಮತ್ತು 5 ಕೋಟಿಯಿಂದ 50 ಕೋಟಿ ದುಡಿಯುವ ಬಂಡವಾಳ ಹೊಂದಿರುವ ಪ್ರಾಂತದ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ನಿರ್ದೇಶಕರು, ಮುಖ್ಯಕಾರ್ಯನಿರ್ವಾಹಕರು | ಸಂದರ್ಭಾನುಸಾರ | 2 | 2 ದಿನಗಳು | 160 |
| **ಬೆಂಗಳೂರು ಪ್ರಾಂತೀಯ ಕಛೇರಿ** | | | | | | |
| 1 | ಪ್ರವೇಶ ತರಬೇತಿ | 2024–25ನೇ ಸಾಲಿನಲ್ಲಿ ಹೊಸದಾಗಿ ನೋಂದಣಿಗೊಂಡ ಸಹಕಾರಿಗಳ ಅಧ್ಯಕ್ಷರು/ ನಿರ್ದೇಶಕರು/ ಮುಖ್ಯಕಾರ್ಯನಿರ್ವಾಹಕರು | ಏಪ್ರಿಲ್/ಮೇ | 4 | 1 ದಿನ | 160 |
| 2 | ವಿಷಯಾಧಾರಿತ ತರಬೇತಿ | ಸೌಹಾರ್ದ ಸಹಕಾರಿಗಳ ಅಧ್ಯಕ್ಷರು/ ಮುಖ್ಯಕಾರ್ಯನಿರ್ವಾಹಕರು | ಜೂನ್ | 4 | 1 ದಿನ | 320 |
| 3 | ವಿವಿಧ ವಿಷಯಗಳ ಕುರಿತು ಸ್ಥಳೀಯವಾಗಿ 2 ಗಂಟೆ ಅವಧಿಯ ಕ್ಲಸ್ಟರ್ ತರಬೇತಿಗಳು (ಸಾಮಾನ್ಯ ಸಭೆ, ಆಡಳಿತ ಮಂಡಳಿ ಸಭೆ, ಕಲಂ 34ರ ಮಾಹಿತಿ ಸಲ್ಲಿಕೆ) | ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರು/ಇತರೆ ಸಿಬ್ಬಂದಿಗಳು | ಸಂದರ್ಭಾನುಸಾರ | 60 | ಅರ್ಧ ದಿನ | 800 |

| ಕ್ರ. ಸಂ. | ತರಬೇತಿ/ ಕಾರ್ಯಕ್ರಮದ ಹೆಸರು | ತರಬೇತಿಯ ಫಲಾನುಭವಿಗಳು | ಮಾಹೆ | ತರಬೇತಿಗಳು | ಅವಧಿ | ಭಾಗವಹಿಸುವವರ ಅಂದಾಜು ಸಂಖ್ಯೆ |
|---|---|---|---|---|---|---|
| 4 | ಲೆಕ್ಕಪರಿಶೋಧಕರಿಗೆ ತರಬೇತಿ (ಸೌಹಾರ್ದ ಕಾಯ್ದೆ ಹಾಗೂ ಸುತ್ತೋಲೆಗಳ ಕುರಿತು) | ಸನ್ನದು ಲೆಕ್ಕಪರಿಶೋಧಕರು | ಸಂದರ್ಭಾನುಸಾರ | 3 | 1 ದಿನ | 300 |
| 5 | ಸಂಪರ್ಕ ಸಭೆ | ಸೌಹಾರ್ದ ಸಹಕಾರಿಗಳ ಆಡಳಿತ ಮಂಡಳಿ ಸದಸ್ಯರು | ಆಗಸ್ಟ್ | 7 | 1 ದಿನ | 1500 |
| 6 | ಸಂಯುಕ್ತ ಸಹಕಾರಿಯ ರಜತ ಮಹೋತ್ಸವ ಕುರತು ಕಾರ್ಯಗಾರ | ಸೌಹಾರ್ದ ಸಹಕಾರಿಗಳ ಅಧ್ಯಕ್ಷರು/ ಮುಖ್ಯಕಾರ್ಯನಿರ್ವಾಹಕರು | ಅಕ್ಟೋಬರ್ | 4 | 1 ದಿನ | 400 |
| 7 | ನಷ್ಟದಲ್ಲಿರುವ ಸಹಕಾರಿಗಳಿಗೆ ವ್ಯವಹಾರ ಅಭಿವೃದ್ಧಿ ತರಬೇತಿ | ಸೌಹಾರ್ದ ಸಹಕಾರಿಗಳ ಆಡಳಿತ ಮಂಡಳಿಯ ನಿರ್ದೇಶಕರುಗಳು | ಅಕ್ಟೋಬರ್ | 4 | 1 ದಿನ | 200 |
| 8 | ಉನ್ನತ ಮಟ್ಟದ ತರಬೇತಿ | 5 ರಿಂದ 25 ಕೋಟಿ ದುಡಿಯುವ ಬಂಡವಾಳ ಹೊಂದಿರುವ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಮತ್ತು ಮುಖ್ಯಕಾರ್ಯನಿರ್ವಾಹಕರುಗಳು | ಸಂದರ್ಭಾನುಸಾರ | 2 | 2 ದಿನಗಳು | 400 |
| 9 | ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಸಭೆ | ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರು | ನವೆಂಬರ್/ ಡಿಸೆಂಬರ್ | 8 | 1 ದಿನ | 800 |
| 10 | ಉನ್ನತ ಮಟ್ಟದ ತರಬೇತಿ | 25 ಕೋಟಿಗಿಂತ ಹೆಚ್ಚು ದುಡಿಯುವ ಬಂಡವಾಳ ಹೊಂದಿರುವ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಮತ್ತು ಮುಖ್ಯಕಾರ್ಯನಿರ್ವಾಹಕರುಗಳು | ಸಂದರ್ಭಾನುಸಾರ | 2 | 2 ದಿನಗಳು | 350 |
| 11 | ದಾವಾ ದಾಖಲಾತಿ ವಿಷಯದ ಕುರಿತು ತರಬೇತಿ | ಸೌಹಾರ್ದ ಸಹಕಾರಿಗಳ ಅಧ್ಯಕ್ಷರು/ ಮುಖ್ಯಕಾರ್ಯನಿರ್ವಾಹಕರು | ಜನವರಿ/ ಫೆಬ್ರವರಿ | 3 | 1 ದಿನ | 240 |
| 12 | ಮಹಿಳಾ ದಿನಾಚರಣೆ | ಸೌಹಾರ್ದ ಸಹಕಾರಿಗಳ ಮಹಿಳಾ ನಿರ್ದೇಶಕರು ಹಾಗೂ ಮಹಿಳಾ ಸಿಬ್ಬಂದಿಗಳು | ಮಾರ್ಚ್ | 1 | 1 ದಿನ | 150 |
| 13 | ಸಹಕಾರ ಮತ್ತು ಯುವಜನ–ಸಂವಾದ | ವಿಶ್ವವಿದ್ಯಾನಿಲಯ ಹಾಗೂ ಪದವಿ ಕಾಲೇಜುಗಳ ವಿದ್ಯಾರ್ಥಿಗಳು | ಸಂದರ್ಭಾನುಸಾರವಾಗಿ | 4 | 1 ದಿನ | 750 |
| **ಬೆಳಗಾವಿ ಪ್ರಾಂತೀಯ ಕಛೇರಿ** | | | | | | |
| 1 | ಅಂತಿಮ ಲೆಕ್ಕಪತ್ರಗಳ ತಯಾರಿ, ಹಾಗೂ ಆದಾಯ ತೆರಿಗೆ, ಜಿಎಸ್‌ಟಿ (ವಿಷಯಾಧಾರಿತ) | ಮುಖ್ಯಕಾರ್ಯನಿರ್ವಾಹಕರು | ಏಪ್ರೀಲ್ /ಮೇ | 13 | 1 ದಿನ | 1800 |
| 2 | ಲೆಕ್ಕಪರಿಶೋಧಕರ ಕಾರ್ಯಾಗಾರ – ಆರ್ಥಿಕ ಸಾಲಿನಲ್ಲಿ ನೇಮಕಗೊಂಡ ಸನ್ನದು ಲೆಕ್ಕಪರಿಶೋಧಕರಿಗೆ | ಸನ್ನದು ಲೆಕ್ಕಪರಿಶೋಧಕರು | ಸಂದರ್ಭಾನುಸಾರ | 3 | 1 ದಿನ | 300 |

| ಕ್ರ. ಸಂ. | ತರಬೇತಿ/ ಕಾರ್ಯಕ್ರಮದ ಹೆಸರು | ತರಬೇತಿ ಫಲಾನುಭವಿಗಳು | ಮಾಹೆ | ತರಬೇತಿಗಳ ಸಂಖ್ಯೆ | ತರಬೇತಿ ಅವಧಿ | ಭಾಗವಹಿಸುವವರ ಅಂದಾಜು ಸಂಖ್ಯೆ |
|---|---|---|---|---|---|---|
| 3 | ನಷ್ಟದಲ್ಲಿರುವ ಸೌಹಾರ್ದ ಸಹಕಾರಿಗಳಿಗೆ ಲಾಭದತ್ತ ತರುವ ಕುರಿತು ತರಬೇತಿ | ಮುಖ್ಯಕಾರ್ಯನಿರ್ವಾಹಕರು | ಜೂನ್ | 8 | 1 ದಿನ | 530 |
| 4 | ಪದಾಧಿಕಾರಿಗಳು & ನಿರ್ದೇಶಕರುಗಳ ಜವಾಬ್ದಾರಿಗಳು, ಕರ್ತವ್ಯಗಳು ಹಾಗೂ ಅಧಿಕಾರಗಳು | ಸಹಕಾರಿಗಳ ನಿರ್ದೇಶಕರು | ಜುಲೈ | 13 | 1 ದಿನ | 1200 |
| 5 | ವಿಷಯಾಧಾರಿತ ತರಬೇತಿ (ಬಡ್ಡಿಯೇತರ ಆದಾಯ ಮೂಲಗಳು ಹಾಗೂ ವ್ಯಕ್ತಿತ್ವ ವಿಕಸನ ತರಬೇತಿ) | ಮುಖ್ಯಕಾರ್ಯನಿರ್ವಾಹಕರು | ಜುಲೈ | 13 | 1 ದಿನ | 1500 |
| 6 | ಸಂಪರ್ಕ ಸಭೆ/ ಆಡಳಿತ ಮಂಡಳಿ, ಸಾಮಾನ್ಯ ಸಭೆ ಜರುಗಿಸುವ ವಿಧಾನ, ಕಲಂ 34ರ ಮಾಹಿತಿ ಸಲ್ಲಿಸುವಿಕೆ, ನಡುವಳಿ ಸಲ್ಲಿಕೆ ಇತ್ಯಾದಿ | ಆಡಳಿತ ಮಂಡಳಿ ಸದಸ್ಯರು ಮತ್ತು ಮುಖ್ಯಕಾರ್ಯನಿರ್ವಾಹಕರು | ಆಗಸ್ಟ್ | 11 | 1 ದಿನ | 2000 |
| 7 | ಕ್ಲಸ್ಟರ್ ತರಬೇತಿ–ತಾಲ್ಲೂಕುವಾರು ಸೌಹಾರ್ದ ಸಹಕಾರಿಗಳು | ಮುಖ್ಯಕಾರ್ಯನಿರ್ವಾಹಕರು | ಮೇ/ ಸೆಪ್ಟೆಂಬರ | 138 | 1 ದಿನ | 1800 |
| 8 | ಉನ್ನತ ಮಟ್ಟದ ತರಬೇತಿ | 5–10 ಕೋಟಿ ದುಡಿಯುವ ಬಂಡವಾಳ ಹೊಂದಿರುವ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಮತ್ತು ಮುಖ್ಯಕಾರ್ಯನಿರ್ವಾಹಕರು | ಸಂದರ್ಭಾನುಸಾರ | 2 | 2 ದಿನಗಳು | 400 |
| 9 | ಉನ್ನತ ಮಟ್ಟದ ತರಬೇತಿ | 10–30 ಕೋಟಿ ದುಡಿಯುವ ಬಂಡವಾಳ ಹೊಂದಿರುವ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಮತ್ತು ಮುಖ್ಯಕಾರ್ಯನಿರ್ವಾಹಕರು | ಸಂದರ್ಭಾನುಸಾರ | 2 | 2 ದಿನಗಳು | 350 |
| 10 | ಉನ್ನತ ಮಟ್ಟದ ತರಬೇತಿ | 30 ಕೋಟಿಗಿಂತ ಅಧಿಕ ದುಡಿಯುವ ಬಂಡವಾಳ ಹೊಂದಿರುವ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಮತ್ತು ಮುಖ್ಯಕಾರ್ಯನಿರ್ವಾಹಕರು | ಸಂದರ್ಭಾನುಸಾರ | 2 | 2 ದಿನಗಳು | 230 |
| 11 | ಮುಖ್ಯಕಾರ್ಯ ನಿರ್ವಾಹಕರ ವಾರ್ಷಿಕ ಸಭೆ | ಮುಖ್ಯಕಾರ್ಯನಿರ್ವಾಹಕರು | ಡಿಸೆಂಬರ್/ ಜನವರಿ | 13 | 1 ದಿನ | 3500 |
| 12 | ಹೊಸದಾಗಿ ನೋಂದಣಿಯಾದ ಸದಸ್ಯ ಸಹಕಾರಿಗಳಿಗಾಗಿ ಪ್ರವೇಶ ತರಬೇತಿ | ಮುಖ್ಯಕಾರ್ಯನಿರ್ವಾಹಕರು ಮತ್ತು ಅಧ್ಯಕ್ಷರು | ಜನವರಿ | 7 | 1 ದಿನ | 350 |
| 13 | ಇ–ಸ್ಟ್ಯಾಂಪ್ ತರಬೇತಿ | ಇ–ಸ್ಟ್ಯಾಂಪ್ ಕೇಂದ್ರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳು | ಫೆಬ್ರವರಿ | 8 | 1 ದಿನ | 650 |

| ಕ್ರ. ಸಂ. | ತರಬೇತಿ/ ಕಾರ್ಯಕ್ರಮದ ಹೆಸರು | ತರಬೇತಿ ಫಲಾನುಭವಿಗಳು | ಮಾಹೆ | ತರಬೇತಿಗಳ ಸಂಖ್ಯೆ | ತರಬೇತಿ ಅವಧಿ | ಭಾಗವಹಿಸುವವರ ಅಂದಾಜು ಸಂಖ್ಯೆ |
|---|---|---|---|---|---|---|
| 14 | ಮಹಿಳಾ ದಿನಾಚರಣೆ | ಸಹಕಾರಿಗಳ ಮಹಿಳಾ ನಿರ್ದೇಶಕರು ಹಾಗೂ ಮಹಿಳಾ ಸಿಬ್ಬಂದಿಗಳು | ಮಾರ್ಚ್ | 1 | 1 ದಿನ | 220 |
| 15 | ಯುವಜನತೆ ಹಾಗೂ ಸಂವಾದ ಕಾರ್ಯಕ್ರಮ | ವಿಶ್ವವಿದ್ಯಾನಿಲಯ ಹಾಗೂ ಪದವಿ ಕಾಲೇಜುಗಳ ವಿದ್ಯಾರ್ಥಿಗಳು | ಸಂದರ್ಭಾನುಸಾರ | 1 | 1 ದಿನ | 250 |
| **ಕಲಬುರಗಿ ಪ್ರಾಂತೀಯ ಕಛೇರಿ** | | | | | | |
| 1 | ಕ್ಲಸ್ಟರ್ ಮಟ್ಟದ ತರಬೇತಿ (ಲೆಕ್ಕಪತ್ರಗಳ ನಿರ್ವಹಣೆಯ ಕುರಿತು )" | ಮುಖ್ಯಕಾರ್ಯನಿರ್ವಾಹಕರುಗಳು | ಏಪ್ರಿಲ್ | 2 | 1 ದಿನ | 100 |
| 2 | ಕ್ಲಸ್ಟರ್ ಮಟ್ಟದ ತರಬೇತಿ ಸಾಲ ವಸೂಲಾತಿ ಪ್ರಕ್ರಿಯೆಗಳ ಕುರಿತು | ಆಡಳಿತ ಮಂಡಳಿ ಸದಸ್ಯರುಗಳು | ಮೇ | 3 | 1 ದಿನ | 150 |
| 3 | ಉನ್ನತ ಮಟ್ಟದ ತರಬೇತಿ | 10 ಕೋಟಿಗಿಂತ ಹೆಚ್ಚು ದುಡಿಯುವ ಬಂಡವಾಳ ಹೊಂದಿರುವ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ನಿರ್ದೇಶಕರುಗಳ | ಜೂನ | 1 | 2 ದಿನಗಳು | 90 |
| 4 | 1959 ಕಾಯ್ದೆ ಮತ್ತು 1997 ಕಾಯ್ದೆಯ ಅವಕಾಶಗಳ ಕುರಿತು ತರಬೇತಿ | ಸೌಹಾರ್ದ ಸಹಕಾರಿಗಳ ನಿರ್ದೇಶಕರುಗಳು | ಜುಲೈ | 1 | 1 ದಿನ | 50 |
| 5 | ಪ್ರವೇಶ ತರಬೇತಿ | ಹೊಸದಾಗಿ ನೋಂದಣಿಗೊಂಡ ಸೌಹಾರ್ದ ಸಹಕಾರಿಗಳು | ಜುಲೈ | 5 | 1 ದಿನ | 300 |
| 6 | ಸಂಪರ್ಕ ಸಭೆ | ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ನಿರ್ದೇಶಕರು | ಆಗಸ್ಟ್ | 7 | 1 ದಿನ | 940 |
| 7 | ಸದಸ್ಯ ಸಹಕಾರಿಗಳ ಹಕ್ಕು ಮತ್ತು ಜವಾಬ್ದಾರಿಗಳ ಕುರಿತು ತರಬೇತಿ | ಆಡಳಿತ ಮಂಡಳಿಯವರು ಮತ್ತು ಸೌಹಾರ್ದ ಸಹಕಾರಿಗಳ ಸದಸ್ಯರು | ಆಗಸ್ಟ್ | 25 | 1 ದಿನ | 500 |
| 8 | ಸದಸ್ಯ ಸಹಕಾರಿಗಳ ಹಕ್ಕು ಮತ್ತು ಜವಾಬ್ದಾರಿಗಳ ಕುರಿತು ತರಬೇತಿ | ಆಡಳಿತ ಮಂಡಳಿಯವರು ಮತ್ತು ಸೌಹಾರ್ದ ಸಹಕಾರಿಗಳ ಸದಸ್ಯರು | ಸೆಪ್ಟಂಬರ್ | 25 | 1 ದಿನ | 500 |
| 9 | ವ್ಯವಹಾರ ಅಭಿವೃದ್ಧಿ ತರಬೇತಿ | ನಷ್ಟದಲ್ಲಿರುವ ಸೌಹಾರ್ದ ಸಹಕಾರಿಗಳ ಆಡಳಿತ ಮಂಡಳಿಯ ನಿರ್ದೇಶಕರುಗಳು | ಅಕ್ಟೋಬರ್ | 4 | 1 ದಿನ | 180 |
| 10 | ಸಹಕಾರ ಸಪ್ತಾಹ ಕಾರ್ಯಕ್ರಮ | ಪ್ರಾಂತದ ಜಿಲ್ಲೆಯ ಸೌಹರ್ದ ಸಹಕಾರಿಗಳು | ನವೆಂಬರ್ | 2 | 1 ದಿನ | 200 |

| ಕ್ರ. ಸಂ. | ತರಬೇತಿ/ ಕಾರ್ಯಕ್ರಮದ ಹೆಸರು | ತರಬೇತಿ ಫಲಾನುಭವಿಗಳು | ಮಾಹೆ | ತರಬೇತಿಗಳ ಸಂಖ್ಯೆ | ತರಬೇತಿ ಅವಧಿ | ಭಾಗವಹಿಸುವವರ ಅಂದಾಜು ಸಂಖ್ಯೆ |
|---|---|---|---|---|---|---|
| 11 | ಮುಖ್ಯಕಾರ್ಯ ನಿರ್ವಾಹಕರ ವಾರ್ಷಿಕ ಸಭೆ | ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳು | ಡಿಸೆಂಬರ್ | 9 | 1 ದಿನ | 950 |
| 12 | ವಿಷಯಾಧಾರಿತ ತರಬೇತಿ | ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಮತ್ತು ಮುಖ್ಯಕಾರ್ಯನಿರ್ವಾಹಕರು | ಜನವರಿ | 9 | 1 ದಿನ | 850 |
| 13 | ದಾವ ದಾಖಲಾತಿ ಮತ್ತು ಸಾಲ ವಸೂಲಾತಿಯ ಕ್ರಮಗಳ ಕುರಿತು ತರಬೇತಿ | ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳು | ಫೆಬ್ರವರಿ | 9 | 1 ದಿನ | 840 |
| 14 | ಉನ್ನತ ಮಟ್ಟದ ತರಬೇತಿ | 30 ಕೋಟಿಗಿಂತ ಹೆಚ್ಚು ದುಡಿಯುವ ಬಂಡವಾಳ ಹೊಂದಿರುವ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ಉಪಾಧ್ಯಕ್ಷರು/ ನಿರ್ದೇಶಕರುಗಳಿಗೆ | | 1 | 2 ದಿನಗಳು | 80 |
| 15 | ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ | ಸೌಹಾರ್ದ ಸಹಕಾರಿಗಳ ಮಹಿಳಾ ಅಧ್ಯಕ್ಷರು, ನಿರ್ದೇಶಕರು ಮತ್ತು ಮಹಿಳಾ ಸಿಬ್ಬಂದಿಗಳು | ಮಾರ್ಚ್ | 2 | 1 ದಿನ | 200 |
| 16 | ಅವಲೋಕನಾ ಸಭೆ | ಸಹಕಾರ ಇಲಾಖೆಯ ಅಧಿಕಾರಿಗಳೊಂದಿಗೆ | | | ಅರ್ಧ ದಿನ | 50 |
| 17 | ಸಂಯುಕ್ತ ಸಹಕಾರಿಯ ರಜತ ಮಹೋತ್ಸವದ ಕಾರ್ಯಕ್ರಮಗಳು | ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ನಿರ್ದೇಶಕರು ಹಾಗೂ ಮುಖ್ಯಕಾರ್ಯನಿರ್ವಾಹಕರು | ಜುಲೈ | 30 | 1 ದಿನ | 500 |
| 18 | ಪತ್ರಿಕಾಗೋಷ್ಠಿಗಳು | ಪತ್ರಿಕಾ ಮಾಧ್ಯಮದವರೊಂದಿಗೆ | ಆಗಸ್ಟ್ | 5 | ಅರ್ಧ ದಿನ | 125 |
| 19 | ಸೈಬರ್ ಕ್ರೈಂ ತಡೆಗಟ್ಟುವ ಕ್ರಮಗಳ ಕುರಿತು ತರಬೇತಿ | ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯ ನಿರ್ವಾಹಕರುಗಳು/ ಅಧಿಕಾರಿಗಳು | ಅಕ್ಟೋಬರ್ | 3 | 1 ದಿನ | 540 |
| 20 | ಕಲಬುರಗಿ ಪ್ರಾಂತದ ಲೆಕ್ಕಪರಿಶೋಧಕರುಗಳಿಗೆ ಸೌಹಾರ್ದ ಸಹಕಾರಿಗಳ ಲೆಕ್ಕಪರಿಶೋಧನೆಯ ಕುರಿತು | ಪ್ರಾಂತದ ಸೌಹಾರ್ದ ಸಹಕಾರಿಗಳ ಲೆಕ್ಕಪರಿಶೋಧಕರುಗಳು | ಫೆಬ್ರವರಿ | 3 | 1 ದಿನ | 85 |
| 21 | ಯುವಕರಿಗೆ ಸಂವಾದ ಕಾರ್ಯಕ್ರಮ | ವಿಶ್ವವಿದ್ಯಾನಿಲಯ ಮತ್ತು ಪದವಿ ಕಾಲೇಜುಗಳ ಯುವಜನತೆ | ಜನವರಿ | 2 | 1 ದಿನ | 350 |

**ಒಟ್ಟು ತರಬೇತಿಗಳ ಸಂಕ್ಷಿಪ್ತತೆ**

| | | | |
|---|---|---|---|
| 1 | ರಾಜ್ಯ ಮಟ್ಟ | 32 | 18107 |
| 2 | ಮೈಸೂರು ಪ್ರಾಂತ | 145 | 8130 |
| 3 | ಬೆಂಗಳೂರು ಪ್ರಾಂತ | 106 | 6370 |
| 4 | ಬೆಳಗಾವಿ ಪ್ರಾಂತ | 235 | 15080 |
| **5** | ಕಲಬುರಗಿ ಪ್ರಾಂತ | 152 | 7580 |
| | **ಒಟ್ಟು** | **670** | **55267** |

## ತಿದ್ದುಪಡಿ ಪ್ರಕಟಣೆ

ಜುಲೈ ತಿಂಗಳ ಸ್ವಾಭಿಮಾನಿ ಪತ್ರಿಕೆಯಲ್ಲಿ ಪ್ರಕಟಗೊಂಡ "ಮುಖ್ಯಕಾರ್ಯನಿರ್ವಾಹಕರ ಕರ್ತವ್ಯ ಜವಾಬ್ದಾರಿಗಳು" ಎಂಬ ಲೇಖನದಲ್ಲಿ ನಮೂದಿಸಿದ ಮುಖ್ಯ ಕಾರ್ಯನಿರ್ವಾಹಕನ ಜವಾಬ್ದಾರಿಗಳನ್ನು ಈ ರೀತಿಯಾಗಿ ಅರ್ಥೈಸಿಕೊಳ್ಳಲು ಕೋರಿದೆ.

1. ಸಭೆಯನ್ನು ಕರೆಯುವುದು.
2. ರಿಟರ್ನ್ಸ್‌ಗಳನ್ನು ದಾಖಲಿಸುವುದು.
3. ಆದೇಶಗಳನ್ನು ಪಾಲಿಸುವುದು.
4. ಸರಿಯಾದ ಮಾಹಿತಿಗಳನ್ನು ಕೊಡುವುದು.
5. ಸದಸ್ಯರಿಗೆ ಮಾಹಿತಿಗಳನ್ನು ತಲುಪಿಸುವುದು.
6. ಸಭೆಯ ನಡವಳಿಗಳನ್ನು ದಾಖಲಿಸುವುದು.
7. ಸಭೆಯ ನಡವಳಿಗಳ ಪರಿಶೀಲನೆಗೆ ಅವಕಾಶ ಮಾಡಿಕೊಡುವುದು, ಅಥವಾ ಯಾವುದೇ ಸದಸ್ಯರಿಂದ ಕೋರಿಕೆ ಬಂದಾಗ ಅಂತಹ ನಡವಳಿಗಳ ಪ್ರತಿಗಳನ್ನು ಕೊಡುವುದು.
8. ಸೂಕ್ತ ನೋಟೀಸನ್ನು ಕೊಡುವುದು.
9. ಶಾಸನ ಬದ್ಧ ಪುಸ್ತಕಗಳನ್ನು, ರಿಜಿಸ್ಟರ್‌ಗಳನ್ನು ನಿರ್ವಹಿಸುವುದು.

**(ಹಿಂದಿನ ಸಂಚಿಕೆಯಲ್ಲಿ ಹೇಳಿದಂತೆ ನಿರ್ವಹಿಸಲು ತಪ್ಪಿದಲ್ಲಿ ಮುಖ್ಯ ಕಾರ್ಯನಿರ್ವಾಹಕನು ಜವಾಬ್ದಾರನಾಗುತ್ತಾನೆ)**

**"ಗೊಂದಲಕ್ಕೆ ವಿಷಾದಿಸುತ್ತೇವೆ."**

**ಜಿ.ಎಸ್.ಸೋಮಯಾಜಿ**
**ಪ್ರಧಾನ ವ್ಯವಸ್ಥಾಪಕರು**
**ಶ್ರೀ ಗುರುನರಸಿಂಹ ವಿ.ಸೌ.ಸ.ನಿ., ಸಾಲಿಗ್ರಾಮ**

## ರಾಜ್ಯದ ಸೌಹಾರ್ದ ಸಹಕಾರಿಗಳ ವಾರ್ಷಿಕ ಸಾಮಾನ್ಯ ಸಭೆಗಳು



**ತುಮಕೂರು** : ದಿನಾಂಕ 26.07.2025ರಂದು ಸ್ನೇಹ ಸಂಗಮ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿ, ತುಮಕೂರು ಇದರ 2024–25ನೇ ಸಾಲಿನ ವಾರ್ಷಿಕ ಸರ್ವ ಸದಸ್ಯರ ಮಹಾ ಸಭೆಯು ಬಾವಿಕಟ್ಟೆ ಕಲ್ಯಾಣ ಮಂಟಪ ಸಭಾಂಗಣದಲ್ಲಿ ಜರುಗಿತು. ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಸಿ.ಪಿ. ವಿಜಯ್ ರವರು ಭಾಗವಹಿಸಿ ಸಹಕಾರಿಯ ಬೆಳವಣಿಗೆಯ ಕುರಿತು ಅಧ್ಯಕ್ಷರಾದ ಶ್ರೀ ಬಿ.ಎಸ್. ಮಂಜುನಾಥ್ ರವರಿಗೆ ಅಭಿನಂದನೆಗಳನ್ನು ಸಲ್ಲಿಸಿದರು. ಈ ಸಂದರ್ಭದಲ್ಲಿ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಉಮೇಶ್ ಎ.ಎಸ್. ರವರು ಭಾಗವಹಿಸಿದ್ದರು.



**ದಾವಣಗೆರೆ** : ಶರಣ ಮಾಗನೂರು ಬಸಪ್ಪ ಸೌಹಾರ್ದ ಸಹಕಾರಿ ಸಂಘ ನಿಯಮಿತ, ದಾವಣಗೆರೆ ಇದರ 2024–25ನೆಯ ಸಾಲಿನ ಸರ್ವ ಸದಸ್ಯರ 5ನೆಯ ವಾರ್ಷಿಕ ಸಾಮಾನ್ಯ ಸಭೆಯನ್ನು ದಿನಾಂಕ: 03.08.2025ನೆಯ ಭಾನುವಾರ ಬೆಳಗ್ಗೆ 12:00 ಗಂಟೆಗೆ ಸರ್ವಮಂಗಳ ಸಭಾಂಗಣ, ಮಾಗನೂರು ಬಸಪ್ಪ ಶಾಲಾ ಕಾಲೇಜು ಸಮುಚ್ಚಯ, ಬಸವ ಮಂಟಪ, ತರಳಬಾಳು ಬಡಾವಣೆ, ದಾವಣಗೆರೆ. ಸಂಘದ ಅಧ್ಯಕ್ಷರಾದ ಡಾ.ಹೆಚ್.ಎಸ್. ಮಂಜುನಾಥ್‌ರವರ ಘನ ಅಧ್ಯಕ್ಷತೆಯಲ್ಲಿ ನಡೆಯಿತು.

**ಸಂಘದ 2024–25ನೆಯ ಸಾಲಿನ ಪ್ರಗತಿಯ ಪಕ್ಷಿ ನೋಟ**

| | |
|---|---|
| ಸದಸ್ಯರು | 759 |
| ಷೇರು ಬಂಡವಾಳ | 22.55 |
| ಮೀಸಲು ಮತ್ತುಇತರೆ ನಿಧಿಗಳು | 34.99 |
| ಠೇವಣಿಗಳು | 1729.06 |
| ಸಾಲ ಮತ್ತು ಮುಂಗಡಗಳು | 1298.05 |
| ದುಡಿಯುವ ಬಂಡವಾಳ | 1828.46 |
| ನಿವ್ವಳ ಲಾಭ | 40.50 |
| ಸದಸ್ಯರಿಗೆ ಲಾಭಾಂಶ | 10% |



**ಬಳ್ಳಾರಿ :** ಪ್ರಗತಿಕೃಷ್ಣ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿ.,ಹೊಸಪೇಟೆಯ 9ನೇ ಸಾಮಾನ್ಯ ಸಭೆಯು ದಿನಾಂಕ 13.07.2025ರಂದು ರೋಟರಿ ಕ್ಲಬ್ ಸಭಾಂಗಣ ಹೊಸಪೇಟೆಯಲ್ಲಿ ಜರುಗಿತು. ಸಂಘದ ಅಧ್ಯಕ್ಷರಾದ ಶ್ರೀ ಜಿ.ಭರಮಪ್ಪ ಇವರು ಸಂಘವು 2024–25 ನೇ ಸಾಲಿನಲ್ಲಿ ರೂ.52 ಲಕ್ಷ ಲಾಭಗಳಿಸಿದ್ದು ಷೇರುದಾರರಿಗೆ ಶೇಕಡಾ 10 ರಷ್ಟು ಲಾಭಾಂಶವನ್ನು ಘೋಷಿಸಿರುವುದಾಗಿ ತಿಳಿಸಿದರು. ಸಹಕಾರಿಯು 3230 ಷೇರುದಾರರನ್ನು ಹೊಂದಿದ್ದು 2.15 ಕೋಟಿ ಷೇರು ಬಂಡವಾಳ, ರೂ.38 ಕೋಟಿ ಠೇವಣಿ ಸಂಗ್ರಹಿಸಿ ರೂ.26 ಕೋಟಿ ಸಾಲಗಳನ್ನು ನೀಡಿದ್ದು ಪ್ರಸಕ್ತ ಸಾಲಿನಲ್ಲಿ ರೂ.52 ಲಕ್ಷ ಲಾಭಾಂಶ ಗಳಿಸಿದೆ ಎಂದು ತಿಳಿಸಿದರು. ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಕರ್ನಾಟಕ ಸೌಹಾರ್ದ ಸಂಯುಕ್ತ ಸಹಕಾರಿ ಬೆಂಗಳೂರಿನ ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳ ಸಂಯೋಜಕರಾದ ಶ್ರೀ ವೀರಶೆಟ್ಟಿಯವರು ಸಭೆಯನ್ನುದ್ದೇಶಿಸಿ ಮಾತನಾಡಿ ಸದಸ್ಯರು ಸಂಘದ ಭಾಗವಾಗಿದ್ದು ಅವರು ಸಂಘದಲ್ಲಿ ತಮಗಿರುವ ಜವಾಬ್ದಾರಿ ಮತ್ತು ಕರ್ತವ್ಯಗಳನ್ನು ತಿಳಿದುಕೊಂಡು ಮುನ್ನಡೆಯಬೇಕೆಂದು ತಿಳಿಸಿದರು. ಉಪಾಧ್ಯಕ್ಷರಾದ ಶ್ರೀ ಬಿ.ಎಂ.ಪ್ರಭುದೇವ ವಾಸ್ತವಿಕವಾಗಿ ಮಾತನಾಡಿದರು. ಮುಖ್ಯ ಕಾರ್ಯನಿರ್ವಾಹಕರಾದ ಶ್ರೀ ಎಚ್.ಎಂ.ಸಣ್ಣಸಿದ್ದಯ್ಯ ಇವರು ಸಂಘದ ವರದಿ ವಾಚನ ಮಾಡಿ ಸಭೆಯ ವಿಷಯಗಳನ್ನು ಚರ್ಚಿಸಿದರು. ಸಭೆಯಲ್ಲಿ ಸಂಘದ ನಿರ್ದೇಶಕರು, ಷೇರುದಾರರು, ಸಿಬ್ಬಂದಿ ವರ್ಗದವರು ಭಾಗವಹಿಸಿದ್ದರು.




**ಬಳ್ಳಾರಿ :** ಆಧುನಿಕ ಕಾಲಘಟ್ಟದಲ್ಲಿ ಸಹಕಾರ ಕ್ಷೇತ್ರ ಅತ್ಯಂತ ವ್ಯಾಪಕವಾಗಿ ಬೆಳೆಯುತ್ತಿದೆ. ಸಹಕಾರ ಕ್ಷೇತ್ರ ಬೆಳೆದಂತೆ ಎಲ್ಲರ ಏಳಿಗೆ ಕಾಣಲು ಸಾಧ್ಯ ಎಂದು ವಿಕಾಸ ಕೋ ಅಪರೇಟಿವ್ ಬ್ಯಾಂಕಿನ ಅಧ್ಯಕ್ಷರು ವಿಶ್ವನಾಥ ಚ ಹಿರೇಮಠ ಹೇಳಿದರು.

ನಗರದ ನೀಲಾಂಬಿಕಾ ಸೌಹಾರ್ದ ಸಹಕಾರಿಯ ದಶಮಾನೋತ್ಸವ ಅಂಗವಾಗಿ ನಗರದ ಸತ್ಯ ಗಾರ್ಡನ್‌ನಲ್ಲಿ ರವಿವಾರ ಹಮ್ಮಿಕೊಂಡಿದ್ದ ಉಚಿತ ಕಲರ್ ಥೆರಪಿ ಆರೋಗ್ಯ ಶಿಬಿರ ಹಾಗೂ ಮನೆಯಲ್ಲಿ ಮಹಾಮನೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಸಹಕಾರ ಸಂಸ್ಥೆಗಳಿಂದ ತನ್ನ ಸದಸ್ಯರಿಗೆ ಬೇಕಾದ ಎಲ್ಲಾ ಅವಶ್ಯತೆಗಳನ್ನು ಪೂರೈಸಲು ಸಾಧ್ಯ. ಕೇವಲ ಹಣಕಾಸು ವ್ಯವಹಾರಕ್ಕೆ ಸಿಮೀತವಾಗದೇ ಸದಸ್ಯರಿಗೆ ಅನುಕೂಲವಾಗುವ ಯೋಜನೆಗಳನ್ನು ಹಾಕಿಕೊಳ್ಳಬಹುದಾಗಿದೆ. ನೀಲಾಂಬಿಕಾ ಸೌಹಾರ್ದ ಸಹಕಾರಿಯು ಕಳೆದ ಹತ್ತು ವರ್ಷಗಳಲ್ಲಿ ನಿರೀಕ್ಷೆಗೂ ಮೀರಿ ಪ್ರಗತಿ ಕಂಡಿದೆ. ಆಡಳಿತ ಮಂಡಳಿ ಹಾಗೂ ಸಿಬ್ಬಂದಿ ವರ್ಗದವರ ಪರಿಶ್ರಮ ಅಪಾರವಾಗಿದೆ ಎಂದರು. ನೀಲಾಂಬಿಕಾ ಸೌಹಾರ್ದ ಸಹಕಾರಿಯು ಹಣಕಾಸು ವ್ಯವಹಾರದ ಜೊತೆ–ಜೊತೆಗೆ ಸಾಮಾಜಿಕ ಕಾರ್ಯ ಮಾಡುತ್ತಿರುವದು ಶ್ಲಾಘನೀಯವಾಗಿದೆ. ಉಚಿತ ಕಲರ್ ಥೆರಪಿ ಆರೋಗ್ಯ ಶಿಬಿರ ಹಮ್ಮಿಕೊಳ್ಳುವ ಮೂಲಕ ಸಾರ್ವಜನಿಕ ಆರೋಗ್ಯ ಬಗ್ಗೆ ಕಾಳಜಿ ಹೊಂದಿರುವದನ್ನು ಕಾಣಬಹುದು. ನಿರಂತರವಾಗಿ ಆರೋಗ್ಯ, ಸಾಮಾಜಿಕ, ಧಾರ್ಮಿಕ ಕಾರ್ಯಗಳನ್ನು ಹಮ್ಮಿಕೊಳ್ಳುತ್ತಾ ಬಂದಿರುವದು ಸ್ತುತ್ಯಾರ್ಹವಾಗಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಸಹಕಾರಿಯ ಅಧ್ಯಕ್ಷ ಮಲ್ಲಿಕಾರ್ಜುನ ವಕೀಲರು ವಲ್ಕಂದಿನ್ನಿ ಮಾತನಾಡಿ, ಇಂದು ನಮ್ಮ ಬ್ಯಾಂಕ್ ತನ್ನ ಪಯಣದ ಒಂದು ಮಹತ್ವದ ಮೈಲಿಗಲ್ಲನ್ನು ತಲುಪಿದೆ. ಹತ್ತು ವರ್ಷಗಳ ಹಿಂದೆ ಒಂದು ಸಣ್ಣ ಕನಸಿನೊಂದಿಗೆ ಆರಂಭವಾದ ನಮ್ಮ ಸಂಸ್ಥೆ, ಇಂದು ನಿಮ್ಮೆಲ್ಲರ ಅಚಲವಾದ ವಿಶ್ವಾಸ ಮತ್ತು ಸಹಕಾರದಿಂದ ಒಂದು ಹೆಮ್ಮರವಾಗಿ ಬೆಳೆದುನಿಂತಿದೆ. ಈ 11ನೇ ವಾರ್ಷಿಕ ಸರ್ವ ಸದಸ್ಯರ ಸಾಮಾನ್ಯಸಭೆ ಶುಭ ಸಂದರ್ಭದಲ್ಲಿ, ನಮ್ಮ ಸಮಸ್ತ ಗೌರವಾನ್ವಿತ ನಿರ್ದೇಶಕರು, ಸದಸ್ಯರು, ಸಿಬ್ಬಂದಿ ವರ್ಗದವರು ಹಾಗೂ ಹಿತೈಷಿಗಳಿಗೆ ನಮ್ಮ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತೇವೆ. ಹಾಗೂ ನಮ್ಮ ಸಹಕಾರಿಯು ಪ್ರಸಕ್ತ ವರ್ಷ 63.29 ಲಕ್ಷ ರೂ.ಗಳ ನಿವ್ವಳ ಲಾಭಗಳಿಸಿದೆ. ಸದಸ್ಯರಿಗೆ ಈ ವರ್ಷ ಶೇ.21 ರಷ್ಟು ಲಾಭಾಂಶ ಘೋಷಿಸಲು ಸಂತೋಷವೆನಿಸುತ್ತದೆ. ಮುಂದಿನ ದಿನಗಳಲ್ಲಿ ನಮ್ಮ ಸಹಕಾರಿಯ ಸದಸ್ಯರಿಗೆ ವಿನೂತನ ಯೋಜನೆಗಳನ್ನು ರೂಪಿಸಲಾಗುವುದು. ಈ ಯಶಸ್ಸಿನ ಪಯಣದಲ್ಲಿ ನಮ್ಮೊಂದಿಗೆ ಹೆಜ್ಜೆ ಹಾಕಿದ ಪ್ರತಿಯೊಬ್ಬರಿಗೂ ಮತ್ತೊಮ್ಮೆ ಧನ್ಯವಾದಗಳು. ನಿಮ್ಮ ವಿಶ್ವಾಸವೇ ನಮ್ಮ ಸ್ಫೂರ್ತಿ. ಬನ್ನಿ, ಒಟ್ಟಾಗಿ ಇನ್ನಷ್ಟು ಯಶಸ್ಸಿನ ಶಿಖರಗಳನ್ನು ಏರೋಣ. ನಮ್ಮ ಸದಸ್ಯರಿಗೆ ಆರ್ಥಿಕ ಭದ್ರತೆ ಒದಗಿಸುವದು ನಮ್ಮ ಗುರಿಯಾಗಿದೆ. ಆಡಳಿತ ಮಂಡಳಿ ಹಾಗೂ ಸಿಬ್ಬಂದಿ ವರ್ಗದ ಪರಿಶ್ರಮದಿಂದ ಉತ್ತಮ ಬೆಳವಣಿಗೆ ಕಾಣುತ್ತಿದೆ ಎಂದರು.ಮಿಟ್ಟಿಮಲ್ಕಾಪುರದ ಲಾಳಗೊಂಡ ಸಮಾಜದ ಪೀಠಾಧ್ಯಕ್ಷ ಶ್ರೀ ನಿಜಾನಂದ ಮಹಾಸ್ವಾಮಿಗಳ ಸಾನಿಧ್ಯದಲ್ಲಿ ಸಭೆಯ ಸಾನಿಧ್ಯವಹಿಸಿದ್ದರು. ಗದಗ ಬಸವಕೇಂದ್ರದ ಅಶೋಕ ಬರಗುಂಡಿ, ಲೆಕ್ಕ ಪರಿಶೋಧಕ ನಾಗನಗೌಡ ಕೆ, ಸಹಕಾರಿಯ ಉಪಾಧ್ಯಕ್ಷ ದೇವೇಂದ್ರಗೌಡ ಹೊಸಳ್ಳಿ, ನಿರ್ದೇಶಕರಾದ ಚಂದ್ರೇಗೌಡ ಹರೇಟನೂರು, ಆರ್.ಬಸವರಾಜ ಅಲಬನೂರು, ವಿರುಪನಗೌಡ ಮುರುಣಿ, ಮಲ್ಲಿಕಾರ್ಜುನ ವಲ್ಕಂದಿನ್ನಿ ಆರ್ ಪಂಪಾಪತಿ ಅಲಬನೂರು, ದೊಡ್ಡನಗೌಡ ಯರಡೋಣಿ, ಆರ್.ಶಶಿರೇಖಾ ಬಸವರಾಜ ಪಾಟೀಲ್, ಸಹನಾ ಎಸ್.ಶಿವರಾಜ, ಅಮರಮ್ಮ ಸಿದ್ದರಾಮಗೌಡ, ಆರ್.ಸಿ.ಪಂಪನಗೌಡ ಸಿರಗುಪ್ಪಾ ಸಿಇಓ ಕೆ. ರಾಜೇಂದ್ರ ರೆಡ್ಡಿ ಹಾಗೂ ಸಿಬ್ಬಂದಿ ವರ್ಗಉಪಸ್ಥಿತರಿದ್ದರು.

## ಉದ್ಘಾಟನೆ



**ರಾಯಚೂರು** : ಶ್ರೀ ಗುರು ರಾಮಲಿಂಗೇಶ್ವರ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿ, ಮಸ್ಕಿ ಈ ಸಹಕಾರಿಯ ರಜತ ಮಹೋತ್ಸವ ಹಾಗೂ ನೂತನ ಕಟ್ಟಡ ಉದ್ಘಾಟನಾ ಸಮಾರಂಭದ ಕಾರ್ಯಕ್ರಮವನ್ನು ಭ್ರಮರಾಂಭದ ಮಲ್ಲಿಕಾರ್ಜುನ ದೇವಸ್ಥಾನದ ಆವರಣ ಮಸ್ಕಿಯಲ್ಲಿ ಹಮ್ಮಿಕೊಳ್ಳಲಾಗಿತ್ತು. ಸಹಕಾರಿಯ ನೂತನ ಕಟ್ಟಡವನ್ನು ಶ್ರೀ ವಿ.ಸೋಮಣ್ಣ ಮಾನ್ಯ ರೈಲ್ವೆ ಮತ್ತು ಜಲಸಂಪನ್ಮೂಲ ಖಾತೆ ಸಚಿವರು ಭಾರತ ಸರ್ಕಾರ ಇವರು ಉದ್ಘಾಟಿಸಿದರು. ಕಾರ್ಯಕ್ರಮದ ಸಾನಿಧ್ಯವನ್ನು ಪೂಜ್ಯ ಶ್ರೀ ಷ.ಬ್ರ ವರ ರುದ್ರಮುನಿ ಶಿವಾಚಾರ್ಯರು ಗಚ್ಚಿನ ಹೀರೆಮಠ ಆನಂದ ಆಶ್ರಮ ಮಂಟೂರು ಇವರುಗಳು ವಹಿಸಿದ್ದರು. ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ ಪ್ರತಾಪಗೌಡ ಪಾಟೀಲ, ಮಾನ್ಯ ಮಾಜಿ ಶಾಸಕರು, ಮಸ್ಕಿ ವಿಧಾನ ಸಭಾ ಕ್ಷೇತ್ರ ಹಾಗೂ ಅಧ್ಯಕ್ಷರು ಶ್ರೀ ಗುರು ರಾಮಲಿಂಗೇಶ್ವರ ಪತ್ತಿನ ಸೌಹಾರ್ದ ಸಹಕಾರಿ ನಿ., ಮಸ್ಕಿ ಇವರು ವಹಿಸಿದ್ದರು. ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡರವರು ಮುಖ್ಯತಿಥಿಗಳಾಗಿ ಭಾಗವಹಿಸಿ ಸಂಯುಕ್ತ ಸಹಕಾರಿಯ ವತಿಯಿಂದ ಸಹಕಾರಿಯ ಅಧ್ಯಕ್ಷರಾದ ಶ್ರೀ ಪ್ರತಾಪಗೌಡ ಪಾಟೀಲ ರವರಿಗೆ ಸನ್ಮಾನಿಸಿ ಶುಭವನ್ನು ಕೋರಿದರು.



**ಉಡುಪಿ** : ದಿನಾಂಕ 13.07.2025 ರಂದು ಉಡುಪಿ ಜಿಲ್ಲೆಯ ಜೈ ಗಣೇಶ್ ಸೌಹಾರ್ದ ಸಹಕಾರಿ ಸಂಘ ನಿ., ಇದರ ನೂತನ ಕಟ್ಟಡ 'ಸೌಹಾರ್ದ ಸಿರಿ' ಉದ್ಘಾಟನಾ ಕಾರ್ಯಕ್ರಮಕ್ಕೆ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ನಿರ್ದೇಶಕರಾದ ಶ್ರೀ ಮಂಜುನಾಥ ಎಸ್. ಕೆ ರವರು ಅತಿಥಿಗಳಾಗಿ ಭಾಗವಹಿಸಿ ಶಾಖಾ ಕಛೇರಿಯನ್ನು ಉದ್ಘಾಟಿಸಿದರು. ಸದರಿ ಕಾರ್ಯಕ್ರಮದಲ್ಲಿ ಸೌಹಾರ್ದ ಸಹಕಾರಿ ಸದಸ್ಯರಿಗೆ ಸೌಹಾರ್ದ ಕಾಯ್ದೆಯ ಉಗಮ, ಅಸ್ತಿತ್ವ, ಮತ್ತು ಉದ್ದೇಶಗಳ ಬೆಳವಣಿಗೆಯ ಕುರಿತು ಮಾಹಿತಿ ನೀಡಿ ಸೌಹಾರ್ದ ಸಹಕಾರಿಗಳ ಅಭಿವೃದ್ಧಿಗೆ ಪೂರಕ ಅಂಶಗಳ ಬಗ್ಗೆ ಸಲಹೆಗಳನ್ನು ನೀಡಿದರು. ಸಹಕಾರಿಯ ಅಧ್ಯಕ್ಷರಾದ ಶ್ರೀ ಅಶೋಕ್ ಪ್ರಭು ರವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು. ಸದರಿ ಕಾರ್ಯಕ್ರಮದಲ್ಲಿ ಉಡುಪಿ ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿಯವರಾದ ಶ್ರೀ ವಿಜಯ್ ಬಿ.ಎಸ್. ಮತ್ತು ಉಡುಪಿ ಜಿಲ್ಲಾ ಸೌಹಾರ್ದ ಸಹಕಾರಿ ಸಂಘಗಳ ಒಕ್ಕೂಟ ನಿ., ಇದರ ಅಧ್ಯಕ್ಷರಾದ ಶ್ರೀ ಜಗನ್ನಾಥ ಶೆಟ್ಟಿ, ಹಾಗೂ ಮುಖ್ಯ ಕಾರ್ಯನಿರ್ವಾಹಕರಾದ ಶ್ರೀ ಲೋಹಿತ್ ಜಿ ಸಲ್ಯಾನ್, ಹಾಗೂ ಒಕ್ಕೂಟದ ನಿರ್ದೇಶಕರು ಉಪಸ್ಥಿತರಿದ್ದರು.



**ಚಿತ್ರದುರ್ಗ** : ದಿನಾಂಕ 13.07.2025ರಂದು ದಿ ಮರ್ಚೆಂಟ್ಸ್ ಸೌಹಾರ್ದ ಕೋ-ಆಪರೇಟಿವ್ ಬ್ಯಾಂಕ್ ನಿ, ಚಿತ್ರದುರ್ಗ ಇದರ ವಾರ್ಷಿಕ ಸಾಮಾನ್ಯ ಸಭೆ ಜರುಗಿತು. ಸದರಿ ಸಭೆಯಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ, ನಂಜನಗೌಡ ರವರು ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಬ್ಯಾಂಕಿನ ನಿರ್ದೇಶಕರಾದ ಶ್ರೀ ರಘುರಾಮರೆಡ್ಡಿ ರವರು ಹಾಗೂ ಮುಖ್ಯಕಾರ್ಯನಿರ್ವಾಕರಾದ ಶ್ರೀ ಮಲ್ಲಿಕಾರ್ಜುನ್ ರವರು ವಾರ್ಷಿಕ ಶುಲ್ಕ ಹಾಗೂ ಶಿಕ್ಷಣ ನಿಧಿ ಚೆಕ್ಕನ್ನು ಮಾನ್ಯ ಅಧ್ಯಕ್ಷರಿಗೆ ನೀಡಿದರು. ಬೆಂಗಳೂರು ಪ್ರಾಂತೀಯ ಅಧಿಕಾರಿಗಳಾದ ಶ್ರೀ ಶ್ರೀಧರ್ ರವರು ಭಾಗವಹಿಸಿದ್ದರು.

**ತುಮಕೂರು** : ದಿನಾಂಕ 26-07-2025 ರಂದು ಶ್ರೀ ವಿಠ್ಠಲ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿ., ತುಮಕೂರು ಸಹಕಾರಿಯು ಸನ್ 2024-25ನೇ ಸಾಲಿನಲ್ಲಿ ಕ್ರೋಡೀಕೃತ ಲಾಭ ರೂ.1,76,99,325/- ಗಳನ್ನು ಗಳಿಸಿರುವ ಹಿನ್ನಲೆಯಲ್ಲಿ ಸಹಕಾರಿಯಲ್ಲಿ ಪೂಜಾ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಈ ಪೂಜಾ ಕಾರ್ಯಕ್ರಮದಲ್ಲಿ ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಉಮೇಶ್ ಎ.ಎಸ್ ರವರು ಭಾಗವಹಿಸಿ ಸಹಕಾರಿಯ ಆಡಳಿತ ಮಂಡಳಿಗೆ ಅಭಿನಂದನೆಗಳನ್ನು ಸಲ್ಲಿಸಿದರು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಎನ್.ಎನ್ ಸುರೇಶ್ ರವರು, ಸಹಕಾರಿಯ ಉಪಾಧ್ಯಕ್ಷರು ಮತ್ತು ನಿರ್ದೇಶಕರು ಹಾಗೂ ಸಹಕಾರಿಯ ಮುಖ್ಯಕಾರ್ಯನಿರ್ವಾಹಕಿಯಾದ ಶ್ರೀಮತಿ ಟಿ.ವಿ ಸುಮ ರವರು ಮತ್ತು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

# ಸೌಹಾರ್ದ ಸಹಕಾರಿಗಳಲ್ಲಿ ಲೆಕ್ಕಪರಿಶೋಧನೆ ನಂತರದ ಕಾರ್ಯಗಳು

– ಶ್ರೀ ರಘುನಂದನ ಕೆ., ಯಲ್ಲಾಪುರ,

ಸ್ವಾಭಿಮಾನಿ ಸಹಕಾರಿಯ ಜುಲೈ ತಿಂಗಳಿನ ಸಂಚಿಕೆಯಲ್ಲಿ, ಲೆಕ್ಕಪರಿಶೋಧನೆ ಎಂದರೇನು, ಲೆಕ್ಕಪರಿಶೋಧನೆ ಏಕೆ ಬೇಕು ಎನ್ನುವುದರ ಜೊತೆಗೆ ಲೆಕ್ಕಪರಿಶೋಧಕರ ನೇಮಕಾತಿ, ಲೆಕ್ಕಪತ್ರ ಅಂತಿಮಗೊಳಿಸುವುದು, ಅಗತ್ಯ ಲೆಕ್ಕಪತ್ರಗಳು, ಅನುಸೂಚಿಗಳು, ದಾಖಲಾತಿಗಳ ಸಿದ್ದತೆ, ಲೆಕ್ಕಪರಿಶೋಧಕರಿಗೆ ದಾಖಲೆಗಳ ಸಲ್ಲಿಕೆಯೊಂದಿಗೆ ಮಾಹಿತಿ ಪೂರೈಕೆ ಎನ್ನುವ ನಾಲ್ಕು ಹಂತಗಳ ಲೆಕ್ಕಪರಿಶೋಧನೆಯ ಪೂರ್ವ ಸಿದ್ಧತಾ ಕಾರ್ಯಗಳ ಬಗ್ಗೆ ವಿವರವಾಗಿ ತಿಳಿದುಕೊಂಡಿದ್ದೇವೆ. ಸಮರ್ಪಕ ಪೂರ್ವಸಿದ್ದತೆಯಿದ್ದಲ್ಲಿ ಸುಗಮವಾಗಿ ಹಾಗೂ ಸುಲಭವಾಗಿ ಯಾವುದೇ ಕಾರ್ಯದೊತ್ತಡವಿಲ್ಲದೆ ಲೆಕ್ಕಪರಿಶೋಧನೆ ನಡೆಯುತ್ತದೆ. ಲೆಕ್ಕಪರಿಶೋಧನೆ ಮುಕ್ತಾಯವಾದ ನಂತರ ಸಹಕಾರಿಯು ನಿರ್ವಹಿಸಬೇಕಾದ ಕಾರ್ಯಗಳು, ಜವಾಬ್ದಾರಿಗಳು ಏನು ಎನ್ನುವದನ್ನು ಈ ಸಂಚಿಕೆಯಲ್ಲಿ ನೋಡೋಣ.

ಲೆಕ್ಕಪರಿಶೋಧನೆ ಮುಕ್ತಾಯದ ನಂತರದ ಸಹಕಾರಿಯ ಕಾರ್ಯಗಳನ್ನು ಪ್ರಮುಖವಾಗಿಐದು ಹಂತಗಳಲ್ಲಿ ವಿಂಗಡಿಸಬಹುದು. ಅವುಗಳೆಂದರೆ, 1.ಲೆಕ್ಕಪರಿಶೋಧನಾ ವರದಿಯನ್ನು ಅಂತಿಮಗೊಳಿಸುವುದು. 2. ಅನುಪಾಲನಾ ವರದಿಯನ್ನು ಸಿದ್ದಪಡಿಸುವುದು. 3. ಆಡಳಿತ ಮಂಡಳಿ ಸಭೆಗೆಲೆಕ್ಕಪರಿಶೋಧನಾ ವರದಿ ಹಾಗೂ ಅನುಪಾಲನಾ ವರದಿಗಳ ಮಂಡನೆ. 4. ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಲೆಕ್ಕಪರಿಶೋಧನಾ ವರದಿ ಹಾಗೂ ಅನುಪಾಲನಾ ವರದಿಗಳ ಅನುಮೋದನೆ. 5.ಸಂಬಂಧಿಸಿದ ಪ್ರಾಧಿಕಾರಗಳಿಗೆ ವರದಿ/ಮಾಹಿತಿ ಸಲ್ಲಿಕೆ. ಈ ಐದು ಹಂತಗಳ ಬಗ್ಗೆ ವಿವರವಾಗಿ ಗಮನಿಸೋಣ.

### ಲೆಕ್ಕಪರಿಶೋಧನಾ ವರದಿಯನ್ನು ಅಂತಿಮಗೊಳಿಸುವುದು :

ಸಾಮಾನ್ಯವಾಗಿ, ಲೆಕ್ಕಪರಿಶೋಧನೆ ಮುಕ್ತಾಯವಾದ ನಂತರ ಲೆಕ್ಕಪರಿಶೋಧಕರು, ಲೆಕ್ಕಪರಿಶೋಧನಾ ವರದಿಯ ಕರಡು ಪ್ರತಿಯನ್ನು ಸಹಕಾರಿಗೆ ಸಲ್ಲಿಸುತ್ತಾರೆ. ಒಮ್ಮೆ ಲೆಕ್ಕಪರಿಶೋಧಕರು ವರದಿಯ ಕರಡು ಪ್ರತಿಯನ್ನು ನೀಡುವ ಅಭ್ಯಾಸ ಹೊಂದಿಲ್ಲದಿದ್ದರೆ, ಲೆಕ್ಕಪರಿಶೋಧನಾ ವರದಿಯಕರಡು ಪ್ರತಿಯನ್ನುಒದಗಿಸುವಂತೆ ಸಹಕಾರಿಯು ಲೆಕ್ಕಪರಿಶೋಧಕರನ್ನು ಕೋರಬಹುದು. ಹೀಗೆ ಸಲ್ಲಿಕೆಯಾಗುವ ವರದಿಯ ಕರಡು ಪ್ರತಿಯಲ್ಲಿ ಉಲ್ಲೇಖಿಸಿದ – 'ಮಾಹಿತಿ ಲಭ್ಯವಿಲ್ಲ', 'ದಾಖಲೆ ಒದಗಿಸಿಲ್ಲ' ಎನ್ನುವಂತಹ ವಿಷಯಗಳಿದ್ದರೆ, ಅವುಗಳಿಗೆ ಅಗತ್ಯವಾದ ಮಾಹಿತಿ/ದಾಖಲಾತಿಗಳನ್ನು ಲೆಕ್ಕಪರಿಶೋಧಕರಿಗೆ ಒದಗಿಸಲು ಸಾಧ್ಯವಾಗುತ್ತದೆ. ಸಹಕಾರಿಯ ಆಂತರಿಕ ದಾಖಲೆ ನಿರ್ವಹಣೆಯಲ್ಲಿನ ಲೋಪಗಳಾದ ವೋಚರ್‌ಗೆ ಸಿಬ್ಬಂದಿಯ ಸಹಿ ಇಲ್ಲ, ಕಡತ ಅಪೂರ್ಣವಾಗಿದೆ, ಕೆ.ವೈ.ಸಿ ಪಡೆದಿಲ್ಲ ಎನ್ನುವಂತಹ ತಕ್ಷಣಕ್ಕೆ ಸರಿಪಡಿಸಬಹುದಾದ ಅಂಶಗಳಿದ್ದಲ್ಲಿ ಅವುಗಳನ್ನು ಸರಿಪಡಿಸಿಕೊಳ್ಳಲು ಅವಕಾಶವಾಗುತ್ತದೆ. ಕರಡು ವರದಿಯಲ್ಲಿನ ಇಂತಹ ಅಂಶಗಳನ್ನು ಹಾಗೂ ಲೆಕ್ಕಪರಿಶೋಧಕರು ಆಕ್ಷೇಪಿಸಿದ ಅಂಶಗಳನ್ನು ನಿಗದಿತ ಅವಧಿಯಲ್ಲಿ ಪಾಲನೆ ಮಾಡಿ, ಲೆಕ್ಕಪರಿಶೋಧಕರಿಗೆ ಈ ಬಗ್ಗೆ ಮಾಹಿತಿ ನೀಡಿ ಪುನರ್ ಪರಿಶೀಲನೆಯೊಂದಿಗೆ, ಸರಿಯಾಗಿ ಪಾಲನೆ ಮಾಡಿದ ಅಂಶಗಳನ್ನು ಕೈಬಿಟ್ಟುವರದಿ ಅಂತಿಮಗೊಳಿಸಲು ವಿನಂತಿಸಬಹುದು.ಈ ಎಲ್ಲ ಪ್ರಕ್ರಿಯೆಗಳನ್ನು ಮುಗಿಸಿ ಸೆಪ್ಟೆಂಬರ್ 01 ರೊಳಗಾಗಿ ಲೆಕ್ಕಪರಿಶೋಧಕರಿಂದ ಅಂತಿಮ ವರದಿಯನ್ನು ಸಹಕಾರಿಯು ಪಡೆಯಬೇಕು.

### ಅನುಪಾಲನಾ ವರದಿಯನ್ನು ಸಿದ್ದಪಡಿಸುವುದು :

ಲೆಕ್ಕಪರಿಶೋಧನಾ ವರದಿ ಸ್ವೀಕರಿಸಿದ ನಂತರ, ಅದರಲ್ಲಿ ಲೆಕ್ಕಪರಿಶೋಧಕರು ಉಲ್ಲೇಖಿಸಿದ ಸಹಕಾರಿಯ ಕಾರ್ಯನಿರ್ವಹಣೆಯಲ್ಲಿನ ಲೋಪದೋಷಗಳು, ನ್ಯೂನ್ಯತೆಗಳ ಬಗ್ಗೆ ಸಹಕಾರಿಯು ಪರಿಶೀಲನೆ ನಡೆಸಿ, ಅವುಗಳನ್ನು ಸರಿಪಡಿಸಲುಕ್ರಮ ಕೈಗೊಳ್ಳಬೇಕು. ಹೀಗೆ ಸರಿಪಡಿಸಿದ ವಿವರಗಳೊಂದಿಗೆ ಅನುಪಾಲನಾ ವರದಿಯನ್ನು ಸಿದ್ದಪಡಿಸಬೇಕು. ವಾರ್ಷಿಕ ಸಾಮಾನ್ಯ ಸಭೆಯ ಸಿದ್ದತೆಯೊಳಗೆ, ವರದಿಯಲ್ಲಿ ಉಲ್ಲೇಖಿಸಲ್ಪಟ್ಟ ಲೋಪದೋಷಗಳು, ನ್ಯೂನ್ಯತೆಗಳನ್ನು ಸರಿಪಡಿಸಿಕೊಳ್ಳಲು ಸಾಧ್ಯವಾಗದಿದ್ದಲ್ಲಿ ಅವುಗಳನ್ನು ಸರಿಪಡಿಸಿಕೊಳ್ಳುವ ಬಗ್ಗೆ ಸಾಮಾನ್ಯ ಸಭೆಗೆ ಮಾಹಿತಿ ನೀಡಿ ಅನುಮೋದನೆ ಪಡೆದು ಸರಿಪಡಿಸಿಕೊಳ್ಳುವ ಕಾರ್ಯವನ್ನುಮುಂದುವರೆಸಬೇಕು ಮತ್ತು ಅನುಪಾಲನೆ ಮಾಡಿರುವ ಬಗ್ಗೆ ಮುಂಬರುವ ಸಾಮಾನ್ಯ ಸಭೆಗಳಲ್ಲಿ ಮಾಹಿತಿ ನೀಡಬೇಕು. 'ಕ್ರಮವಿಡಲಾಗುವುದು', 'ಮಾಡಲಾಗುವುದು' ಎನ್ನುವುದು ಸರಿಯಾದ ಅನುಪಾಲನಾ ಕ್ರಮವಲ್ಲ, 'ಇಂತಹಕ್ರಮವಿಟ್ಟಿದೆ' ಎನ್ನುವ ವಿವರ ಸರಿಯಾದ ಅನುಪಾಲನೆಯಾಗುತ್ತದೆ.

### ಆಡಳಿತ ಮಂಡಳಿ ಸಭೆಗೆ ವರದಿಗಳ ಮಂಡನೆ :

ಲೆಕ್ಕಪರಿಶೋಧನಾ ವರದಿ ಹಾಗೂ ಲೆಕ್ಕಪರಿಶೋಧಿತ ಆರ್ಥಿಕ ತಖ್ತೆಗಳನ್ನು ಆಡಳಿತ ಮಂಡಳಿ ಸಭೆಗೆ ಮಂಡಿಸಬೇಕು.ವರದಿಯಲ್ಲಿನ ಅಂಶಗಳ ಬಗ್ಗೆ ಆಡಳಿತ ಮಂಡಳಿಯು ಗಮನ ಹರಿಸಬೇಕು ಹಾಗೂ ಲೆಕ್ಕಪರಿಶೋಧಕರು ನೀಡಿರುವ ಸಲಹೆ ಸೂಚನೆಗಳ ಬಗ್ಗೆ ಪರಾಮರ್ಷಿಸಬೇಕು.

ಹಾಗೆಯೇ, ಲೆಕ್ಕಪರಿಶೋಧನಾ ವರದಿಯಲ್ಲಿ ಉಲ್ಲೇಖಿಸಿದ ಲೋಪದೋಷ, ನ್ಯೂನ್ಯತೆ ಸರಿಪಡಿಸಲು ತೆಗೆದುಕೊಳ್ಳಬಹುದಾದ ಕ್ರಮಗಳ ಸಹಿತ ವರದಿಯನ್ನು ಕೂಡ ಮುಖ್ಯಕಾರ್ಯನಿರ್ವಾಹಕನು ಆಡಳಿತ

ಮಂಡಳಿ ಸಭೆಗೆ ಮಂಡಿಸಬೇಕು.ಆಡಳಿತ ಮಂಡಳಿ ಸಭೆಯ ಅನುಮೋದನೆಯೊಂದಿಗೆ ಲೋಪದೋಷ, ನ್ಯೂನ್ಯತೆ ಸರಿಪಡಿಸಲು ಕ್ರಮಗಳನ್ನು ಕೈಗೊಂಡು, ವಾರ್ಷಿಕ ಸಾಮಾನ್ಯ ಸಭೆಗೆ ಮಂಡಿಸಬಹುದಾದ ಅನುಪಾಲನಾ ವರದಿಯನ್ನು ಸಿದ್ದಪಡಿಸಿ ಆಡಳಿತ ಮಂಡಳಿ ಸಭೆಗೆ ಮಂಡಿಸಬೇಕು. ಆಡಳಿತ ಮಂಡಳಿ ಸಭೆಯು ಅನುಪಾಲನಾ ವರದಿಯಕರಡನ್ನು ಪರಿಶೀಲಿಸಿ, ಅನುಪಾಲನಾ ವರದಿಯನ್ನು ಅಂತಿಮಗೊಳಿಸಿ ವಾರ್ಷಿಕ ಸಾಮಾನ್ಯ ಸಭೆಗೆ ಮಂಡಿಸಲು ನಿರ್ಣಯಿಸಬೇಕು.

**ವಾರ್ಷಿಕ ಸಾಮಾನ್ಯ ಸಭೆಯಲ್ಲಿ ವರದಿಗಳ ಅನುಮೋದನೆ :**

ಪ್ರತೀ ವರ್ಷ ಸೆಪ್ಟೆಂಬರ್ 25 ರೊಳಗಾಗಿ ನಡೆಯುವ ವಾರ್ಷಿಕ ಸಾಮಾನ್ಯ ಸಭೆಯ ಸೂಚನಾ ಪತ್ರದಲ್ಲಿ ಲೆಕ್ಕಪರಿಶೋಧನೆಗೆ ಸಂಬಂಧಿಸಿದ ಒಟ್ಟು ಮೂರು ವಿಷಯಗಳು ಇರಬೇಕಾಗುತ್ತದೆ. ಮೊದಲನೆಯದು, ಹಿಂದಿನ ಸಹಕಾರಿ ವರ್ಷದ ಲೆಕ್ಕಪರಿಶೋಧನಾ ವರದಿ ಹಾಗೂ ಲೆಕ್ಕಪ-ರಿಶೋಧಿತ ಆರ್ಥಿಕ ತಖ್ತೆಗಳ ಪರಿಗಣನೆ. ಎರಡನೆಯದು, ಲೆಕ್ಕಪ-ರಿಶೋಧನಾ ವರದಿಯಲ್ಲಿ ಉಲ್ಲೇಖಿಸಿದ ದೋಷ/ನ್ಯೂನ್ಯತೆಗಳನ್ನು ಸರಿಪಡಿಸುವ ಬಗ್ಗೆ ಸಲ್ಲಿಕೆಯಾದ ಅನುಪಾಲನಾ ವರದಿಯ ಪರಿಗಣನೆ ಹಾಗೂ ತೀರ್ಮಾನ. ಮೂರನೆಯದಾಗಿ, ಹಿಂದಿನ ಸಂಚಿಕೆಯ ಲೇಖದನಲ್ಲಿ ಹೇಳಿರುವಂತೆ, ಚಾಲ್ತಿ ವರ್ಷದ ಲೆಕ್ಕಪರಿಶೋಧನೆಗಾಗಿ ಲೆಕ್ಕಪರಿಶೋಧಕರ ನೇಮಕ ಹಾಗೂ ಸಂಭಾವನೆ ನಿಗದಿಪಡಿಸುವುದು. ಹೀಗೆ ವಿಷಯ ಮಂಡನೆ ಮಾಡುವ ಮೂಲಕ, ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಲೆಕ್ಕಪ-ರಿಶೋಧನಾ ವರದಿ ಹಾಗೂ ಲೆಕ್ಕಪರಿಶೋಧಿತ ಆರ್ಥಿಕ ತಖ್ತೆಗಳು ಮತ್ತು ಅನುಪಾಲನಾ ವರದಿಗಳಿಗೆ ಅನುಮೋದನೆ ಪಡೆದುಕೊಳ್ಳಬೇಕು.

**ಸಂಬಂಧಿಸಿದ ಪ್ರಾಧಿಕಾರಗಳಿಗೆ ವರದಿ/ಮಾಹಿತಿ ಸಲ್ಲಿಕೆ :**

ಸಂಬಂಧಿಸಿದ ಪ್ರಾಧಿಕಾರಗಳಿಗೆ ವರದಿ ಸಲ್ಲಿಸುವಿಕೆಯಲ್ಲಿ ಮೂರು ಸಂಗತಿಗಳನ್ನು ಪ್ರಮುಖವಾಗಿ ಗಮನಿಸಬೇಕಾಗುತ್ತದೆ.

- **ಲೆಕ್ಕಪರಿಶೋಧನಾ ವರದಿ ಸಲ್ಲಿಕೆ :** ಲೆಕ್ಕಪರಿಶೋಧನಾವರದಿಯನ್ನು, ಸಹಕಾರಿಯ ಲೆಕ್ಕಪರಿಶೋಧಕರು ಪ್ರತೀ ವರ್ಷ ಸೆಪ್ಟೆಂಬರ್ ಒಂದರೊಳಗಾಗಿ ಸಹಕಾರಿಗೆ ಮತ್ತು ಅದರ ಪ್ರತಿಗಳನ್ನು ಸಂಯುಕ್ತ ಸಹಕಾರಿಗೆ, ರಿಜಿಸ್ಟ್ರಾರರಿಗೆ, ಸಹಕಾರ ಲೆಕ್ಕಪರಿಶೋಧನಾ ನಿರ್ದೇಶಕ-ರಿಗೆ, ಹಣಕಾಸು ನೀಡುವ ಬ್ಯಾಂಕಿಗೆ ಅಥವಾ ಸಾಲ ನೀಡಿಕೆಏಜೆನ್ಸಿಗೆ ಮತ್ತು ಸಹಕಾರಿಯು ಯಾವುದೇ ಇತರ ಸಹಕಾರಿಯೊಡನೆ ಸಂಯೋಜಿತವಾಗಿದ್ದರೆ ಆ ಸಹಕಾರಿಗೆ ಕಳುಹಿಸಬೇಕು. ಲೆಕ್ಕಪ-ರಿಶೋಧಕರು ನಿಗದಿತ ಅವಧಿಯೊಳಗೆ ಸಂಬಂಧಿಸಿದ ಪ್ರಾಧಿಕಾರಗಳಿಗೆ ವರದಿ ಕಳುಹಿಸಿರುವುದನ್ನು ಸಹಕಾರಿಯು ಖಚಿತಪಡಿಸಿಕೊಳ್ಳುವುದು ಸೂಕ್ತ.
- **ಅನುಪಾಲನಾ ವರದಿ ಸಲ್ಲಿಕೆ :** ಸಹಕಾರಿಯು, ಸಾಮಾನ್ಯ ಸಭೆ ಮುಗಿದ 30 ದಿನಗಳೊಳಗೆ ರೆಜಿಸ್ಟ್ರಾರರಿಗೆ, ಸಹಕಾರಿಲೆಕ್ಕಪರಿಶೋಧನಾ ನಿರ್ದೇಶಕರಿಗೆ ಮತ್ತು ಸಂಯುಕ್ತ ಸಹಕಾರಿಗೆ ಅನುಪಾಲನಾ ವರದಿಯನ್ನು ಸಲ್ಲಿಸಬೇಕು.
- **ಲೆಕ್ಕಪರಿಶೋಧಿತಆರ್ಥಿಕ ತಖ್ತೆಗಳ ಸಲ್ಲಿಕೆ :** ಲೆಕ್ಕಪರಿಶೋಧನಾ ವರದಿಯನ್ನು ಸೆಪ್ಟೆಂಬರ್ 01 ರೊಳಗೆ ಸಲ್ಲಿಕೆ ಮಾಡಿದ್ದರೂಕೂಡ, ಸೌಹಾರ್ದ ಸಹಕಾರಿ ಕಾಯ್ದೆ ಕಲಂ.34 ರಡಿ ಸಲ್ಲಿಸುವ ಮಾಹಿತಿಯನ್ವಯ ಪ್ರತೀ ವರ್ಷ ಸೆಪ್ಟೆಂಬರ್ 30 ರೊಳಗಾಗಿ ಲೆಕ್ಕಪರಿಶೋಧಿತ ಆರ್ಥಿಕ ತಖ್ತೆಗಳನ್ನು ರೆಜಿಸ್ಟ್ರಾರರಿಗೆ ಮತ್ತು ಸಂಯುಕ್ತ ಸಹಕಾರಿಗೆ ಸಲ್ಲಿಸಬೇಕು. ಇಲ್ಲಿ ಗಮನಿಸಬೇಕಾದ ಪ್ರಮುಖಅಂಶವೆಂದರೆ, ಈ ಪ್ರಕರಣದಡಿ ಸಲ್ಲಿಸಬೇಕಿರುವುದು 'ಲೆಕ್ಕಪರಿಶೋಧಿತ 'ಆರ್ಥಿಕ ತಖ್ತೆ'ಗಳನ್ನು ಮಾತ್ರ ಹಾಗೂ ಲೆಕ್ಕಪರಿಶೋಧನಾ ವರದಿಯನ್ನು ಸೆಪ್ಟೆಂಬರ್ 01 ರೊಳಗಾಗಿ ಸಂಬಂಧಿಸಿದ ಪ್ರಾಧಿಕಾರಗಳಿಗೆ ಸಲ್ಲಿಸಬೇಕಿದ್ದು, ಕಲಂ.34ನ್ನು ಪರಿಗಣಿಸಿ ಲೆಕ್ಕಪರಿಶೋಧನಾ ವರದಿ ಸಲ್ಲಿಕೆಯ ದಿನಾಂಕವನ್ನು ಸೆಪ್ಟೆಂಬರ್ 30 ಎಂದುಗೊಂದಲ ಮಾಡಿಕೊಳ್ಳಬಾರದು.

**ಲೆಕ್ಕಪರಿಶೋಧನೆ ಮಾಡದಿದ್ದಲ್ಲಿ ಪರಿಣಾಮಗಳು :**

- ಮೊದಲನೆಯದಾಗಿ, ಲೆಕ್ಕಪರಿಶೋಧನೆ ಮಾಡಬೇಕಿರುವುದು ಸೌಹಾರ್ದ ಸಹಕಾರಿ ಕಾಯ್ದೆ ಹಾಗೂ ಸಹಕಾರಿಯ ಉಪವಿಧಿಯನ್ವಯ ಕಡ್ಡಾಯವಾಗಿದ್ದು, ಲೆಕ್ಕಪರಿಶೋಧನೆ ಮಾಡದಿದ್ದಲ್ಲಿ ಕಾಯ್ದೆ ಹಾಗೂ ಉಪವಿಧಿ ಉಲ್ಲಂಘನೆ ಯಾಗುವುದರಿಂದ ಇದಕ್ಕೆ ಸಂಬಂಧಿಸಿದ ಎಲ್ಲ ಪರಿಣಾಮಗಳು ಲೆಕ್ಕಪರಿಶೋಧನೆ ಮಾಡದಿರುವುದಕ್ಕೂ ಅನ್ವಯವಾಗುತ್ತವೆ. ಸೌಹಾರ್ದ ಸಹಕಾರಿ ಕಾಯ್ದೆ ಕಲಂ.68(1), 68(2), 68(5) ಹಾಗೂ ಕಲಂ.68(6) ರನ್ವಯದಂಡ ಹಾಗೂ ಕಾರಾಗೃಹವಾಸವನ್ನು ಎದುರಿಸಬೇಕಾಗುತ್ತದೆ.
- ಎರಡನೆಯದಾಗಿ, ಸೌಹಾರ್ದ ಸಹಕಾರಿ ಕಾಯ್ದೆ ಕಲಂ.25(2) ರಲ್ಲಿನ ಪ್ರಾವಧಾನಗಳನ್ವಯ ಸಹಕಾರಿಯ ನಿರ್ದೇಶಕರು ಚುನಾಯಿತರಾಗಲು ಹಾಗೂ ನಿರ್ದೇಶಕರಾಗಿ ಮುಂದುವರೆಯಲು ಗರಿಷ್ಠ ಐದು ವರ್ಷಗಳವರೆಗಿನ ಅನರ್ಹತೆಗೆ ಒಳಗಾಗುತ್ತಾರೆ. ಈ ಅನರ್ಹತೆ, ತಾನು ನಿರ್ದೇಶಕನಾಗಿರುವ ಸಹಕಾರಿಗೆ ಮಾತ್ರವಲ್ಲದೆ, ಇತರೆ ಯಾವುದೇ ಸಹಕಾರಿ ಅಥವಾ ಸಹಕಾರಿ ಸಂಘದಲ್ಲಿನ ನಿರ್ದೇಶಕ ಸ್ಥಾನಕ್ಕೆ ಕೂಡಅನ್ವಯವಾಗುತ್ತದೆ.
- ಮೂರನೆಯದಾಗಿ, ಸಹಕಾರ ಸಂಸ್ಥೆಯ ವಿಶ್ವಾಸಾರ್ಹತೆಗೆಧಕ್ಕೆ ಯುಂಟಾಗುತ್ತದೆ, ಲೆಕ್ಕಪರಿಶೋಧನೆ ಆಗದಿದ್ದಲ್ಲಿ ಸಹಕಾರ ಸಂಸ್ಥೆಯ

ಸಮರ್ಪಕ ಕಾರ್ಯನಿರ್ವಹಣೆಯ ಬಗ್ಗೆ ಅನುಮಾನಗಳುಂಟಾಗುತ್ತವೆ, ಸದಸ್ಯರು ಸಹಕಾರಿಯ ಮೇಲೆ, ಆಡಳಿತ ಮಂಡಳಿ ಸದಸ್ಯರು ಹಾಗೂ ಸಿಬ್ಬಂದಿಗಳ ಮೇಲಿನ ವಿಶ್ವಾಸವನ್ನು ಕಳೆದುಕೊಳ್ಳುತ್ತಾರೆ.

- ಲೆಕ್ಕಪರಿಶೋಧನೆ ಆಗದೇ ಇದ್ದಲ್ಲಿ ಅಥವಾ ನಿಗದಿತ ಅವಧಿಯಲ್ಲಿ ನಡೆಯದಿದ್ದಲ್ಲಿ ಸಹಕಾರಿ ಲೆಕ್ಕಪರಿಶೋಧನಾ ಇಲಾಖೆಯಿಂದ ಲೆಕ್ಕಪ–ರಿಶೋಧಕರ ನೇಮಕವಾಗುತ್ತದೆ. ಲೆಕ್ಕಪರಿಶೋಧನೆ ಸಮರ್ಪಕವಾಗಿರದಿದ್ದಲ್ಲಿ ಕಲಂ.33(12) ರನ್ವಯ ಮರುಲೆಕ್ಕಪ–ರಿಶೋಧನೆಗೆ ಕಾರಣವಾಗುತ್ತದೆ.

ಹಿಂದಿನ ಸಂಚಿಕೆಯಲ್ಲಿ ಲೆಕ್ಕಪರಿಶೋಧನಾ ಪೂರ್ವ ಸಿದ್ದತೆಯ ಬಗ್ಗೆ ಹಾಗೂ ಈ ಸಂಚಿಕೆಯಲ್ಲಿ ಲೆಕ್ಕಪರಿಶೋಧನಾ ನಂತರದ ಕಾರ್ಯಗಳು ಹಾಗೂ ಲೆಕ್ಕಪರಿಶೋಧನೆ ಮಾಡದಿದ್ದಲ್ಲಿ ಆಗುವ ಪರಿಣಾಮಗಳ ಬಗ್ಗೆ ತಿಳಿದುಕೊಂಡಿದ್ದೇವೆ. ಸಹಕಾರಿಯ ಆರ್ಥಿಕ ಸ್ಥಿತಿಯ ಅಧೀಕೃತ ಮಾಹಿತಿ ನೀಡುವ, ಸಹಕಾರಿಯ ದಾಖಲೆಗಳು ನಿಖರವಾಗಿ, ಪೂರ್ಣವಾಗಿ ಹಾಗೂ ನಿಯಮಾನುಸಾರವಾಗಿವೆಎಂದುಖಚಿತಪಡಿಸುವ, ಸಹಕಾರಿಯ ಆರ್ಥಿಕ ಆರೋಗ್ಯವನ್ನು ಪ್ರಚುರಪಡಿಸುವ, ವಿಶ್ವಾಸಾರ್ಹತೆಯನ್ನು ಹೆಚ್ಚಿಸುವ ಲೆಕ್ಕಪರಿಶೋಧನೆಯು ನಿಗದಿತ ಅವಧಿಯಲ್ಲಿ ಸಮರ್ಪಕವಾಗಿ, ನಿಯಮಾನುಸಾರ ಎಲ್ಲ ಸಹಕಾರ ಸಂಸ್ಥೆಗಳಲ್ಲಿಸುಗಮವಾಗಿ ನಡೆಯಲಿ ಎನ್ನುವುದು ಈ ಲೇಖನದ ಆಶಯ.

**ಸೌಹಾರ್ದ ಸಹಕಾರಿಗಳ ಲೆಕ್ಕಪರಿಶೋಧನೆಗೆ ಅನ್ವಯಿಸುವ ಪ್ರಮುಖ ಪ್ರಾವಧಾನಗಳು**

| ಸಂ. | ವಿವರ | ಪ್ರಾವಧಾನ |
|---|---|---|
| 1 | ಸಹಕಾರಿಯ ಲೆಕ್ಕಪರಿಶೋಧನೆ | ಕಲಂ.33 & ನಿಯಮ 8 |
| 2 | ಲೆಕ್ಕಪರಿಶೋಧಕರ ನೇಮಕ | ಕಲಂ.33(1) & 33(2)<br>ಕಲಂ.23(3)(ಬಿ) & ನಿಯಮ 8ಬಿ(6) |
| 3 | ಏಪ್ರಿಲ್ 30 ರೊಳಗೆ ಲೆಕ್ಕಪರಿಶೋಧಕರಿಗೆ ದಾಖಲೆ ಒದಗಿಸುವುದು | ಕಲಂ.33(7) |
| 4 | ಸೆಪ್ಟೆಂಬರ್ 01 ರೊಳಗೆ ಲೆಕ್ಕಪರಿಶೋಧನಾ ವರದಿ ಸಲ್ಲಿಕೆ | ಕಲಂ.33(8) |
| 5 | ಸಾಮಾನ್ಯ ಸಭೆಗೆ ಲೆಕ್ಕಪರಿಶೋಧನಾ ವರದಿ ಮಂಡನೆ | ಕಲಂ.23(3)(ಸಿ) |
| 6 | ಅನುಪಾಲನಾ ವರದಿ ಸಿದ್ಧಪಡಿಸುವುದು & ಸಲ್ಲಿಕೆ | ಕಲಂ.33(10) |
| 7 | ಸಾಮಾನ್ಯ ಸಭೆಯಲ್ಲಿ ಅನುಪಾಲನಾ ವರದಿ ಪರಿಗಣನೆ | ಕಲಂ.23(3)(ಡಿ) |
| 8 | ಮರು ಲೆಕ್ಕಪರಿಶೋಧನೆ | ಕಲಂ.33(12) & 33(13) |
| 9 | ಲೆಕ್ಕಪರಿಶೋಧಕರಿಗೆ ಸಂಭಾವನೆ | ಕಲಂ.33(19) |
| 10 | ಪ್ರಾಧಿಕಾರಗಳಿಗೆ ಲೆಕ್ಕಪರಿಶೋಧಿತ ಆರ್ಥಿಕ ತಖ್ತೆಗಳ ಸಲ್ಲಿಕೆ | ಕಲಂ.34 |
| 11 | ಲೆಕ್ಕಪರಿಶೋಧನೆಗೆ ಒದಗಿಸಬೇಕಾದ ಷೆಡ್ಯೂಲುಗಳು | ನಿಯಮ 8(2) |
| 12 | ಲೆಕ್ಕಪರಿಶೋಧನೆಗೆ ಅರ್ಹತೆ | ನಿಯಮ 8ಬಿ(4) |
| 13 | ಲೆಕ್ಕಪರಿಶೋಧಕನ ನೇಮಕಾತಿ ಮಾಹಿತಿ ಸಲ್ಲಿಕೆ | ನಿಯಮ 8ಬಿ(8) |

By Raghunandan K, 9481036592

**ಸಹಕಾರಿಯ ಲೆಕ್ಕಪರಿಶೋಧನಾ ಪ್ರಕ್ರಿಯೆಯ ಹಂತಗಳು**

| ಲೆಕ್ಕಪರಿಶೋಧನಾ ಪೂರ್ವ ಸಿದ್ದತೆ | ಲೆಕ್ಕಪರಿಶೋಧನೆಯ ನಂತರದ ಕಾರ್ಯಗಳು |
|---|---|
| . ಲೆಕ್ಕಪರಿಶೋಧಕರ ನೇಮಕಾತಿ.<br>. ಲೆಕ್ಕಪತ್ರ ಅಂತಿಮಗೊಳಿಸುವುದು.<br>. ಅಗತ್ಯ ಲೆಕ್ಕಪತ್ರಗಳು, ಅನುಸೂಚಿಗಳು ಹಾಗೂ ದಾಖಲಾತಿಗಳ ಸಿದ್ದತೆ.<br>. ಲೆಕ್ಕಪರಿಶೋಧಕರಿಗೆ ದಾಖಲೆಗಳ ಸಲ್ಲಿಕೆ ಹಾಗೂ ಮಾಹಿತಿ ಪೂರೈಕೆ. | 1. ಲೆಕ್ಕಪರಿಶೋಧನಾ ವರದಿ ಅಂತಿಮಗೊಳಿಸುವುದು.<br>2. ಅನುಪಾಲನಾ ವರದಿ ಸಿದ್ದಪಡಿಸುವುದು.<br>3. ಆಡಳಿತ ಮಂಡಳಿ ಸಭೆಯಲ್ಲಿ ಲೆಕ್ಕಪರಿಶೋಧನಾ ವರದಿ ಹಾಗೂ ಅನುಪಾಲನಾ ವರದಿಗಳ ಮಂಡನೆ.<br>4. ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಲೆಕ್ಕಪರಿಶೋಧನಾ ವರದಿ ಹಾಗೂ ಅನುಪಾಲನಾ ವರದಿಗಳ ಅನುಮೋದನೆ.<br>5. ಸಂಬಂಧಿಸಿದ ಪ್ರಾಧಿಕಾರಗಳಿಗೆ ವರದಿ/ಮಾಹಿತಿ ಸಲ್ಲಿಕೆ. |

## ಭೇಟಿ

**ತುಮಕೂರು :** ದಿನಾಂಕ 30–07–2025 ರಂದು ಶ್ರೀ ವಲ್ಮೀಕ ಸೌಹಾರ್ದ ಸಹಕಾರಿ ಸಂಘ ನಿ., ತುಮಕೂರು ಸಹಕಾರಿಗೆ ಸಂಯುಕ್ತ ಸಹಕಾರಿಯ ಜಿಲ್ಲಾ ನಿರ್ದೇಶಕರಾದ ಶ್ರೀ ಸಿ.ಪಿ ವಿಜಯ್ ರವರು ಹಾಗೂ ಬೆಂಗಳೂರು ವಿಭಾಗೀಯ ಅಧಿಕಾರಿಯಾದ ಶ್ರೀ ಶ್ರೀಧರ್ ಎಸ್ ರವರು ಭೇಟಿ ನೀಡಿದರು. ಸಹಕಾರಿಯ ಅಧ್ಯಕ್ಷರಾದ ಶ್ರೀ ರಾಮಾಂಜಿನಯ್ಯ ರವರು ಸಂಘದ ಆರ್ಥಿಕ ಸ್ಥಿತಿಗತಿ ಕುರಿತು ಮಾಹಿತಿ ನೀಡಿದರು. ಈ ಸಂದರ್ಭದಲ್ಲಿ ಠೇವಣಿದಾರರ ಹಣ ಮರುಪಾವತಿ ಕುರಿತಂತೆ ಕೈಗೊಂಡ ಕ್ರಮಗಳ ಬಗ್ಗೆ ಮಾಹಿತಿ ಪಡೆದುಕೊಳ್ಳಲಾಯಿತು. ಹಾಗೂ ಸದರಿ ಸಹಕಾರಿಯ ವಿರುದ್ಧ ಸೌಹಾರ್ದ ನ್ಯಾಯಾಲಯದಲ್ಲಿ ದಾವೆ ದಾಖಲಾಗಿರುವ ಬಗ್ಗೆ ಚರ್ಚಿಸಲಾಯಿತು. ಬಾಕಿ ಇರುವ ನಿರ್ದೇಶಕರ ಸಾಲಗಳಿಗೆ ಸಂಬಂಧಿಸಿದಂತೆ ಸೌಹಾರ್ದ ನ್ಯಾಯಾಲಯದಲ್ಲಿ ದಾವೆ ದಾಖಲು ಮಾಡಲು ಮುಖ್ಯಕಾರ್ಯನಿರ್ವಾಹಕರಿಗೆ ನಿರ್ದೇಶನ ನೀಡಲಾಯಿತು. ಸಂಯುಕ್ತ ಸಹಕಾರಿಯ ಮುಂದಿನ ಕಾನೂನು ಕ್ರಮಗಳ ಬಗ್ಗೆ ಹಾಜರಿದ್ದ ನಿರ್ದೇಶಕರಿಗೆ ಮಾಹಿತಿ ನೀಡಲಾಯಿತು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರು, ನಿರ್ದೇಶಕರು, ಸಹಕಾರಿಯ ಮುಖ್ಯಕಾರ್ಯನಿರ್ವಾಹಕಿಯಾದ ಶ್ರೀಮತಿ ಭವ್ಯಶ್ರೀ ರವರು ಹಾಗೂ ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಉಮೇಶ್ ಎ.ಎಸ್ ರವರು ಉಪಸ್ಥಿತರಿದ್ದರು.

ದಿನಾಂಕ 30–07–2025 ರಂದು ತುಮಕೂರು ಜಿಲ್ಲಾ ಸಂಪರ್ಕ ಕಚೇ–ರಿಯಲ್ಲಿ ಸಂಯುಕ್ತ ಸಹಕಾರಿಯ ಜಿಲ್ಲಾ ನಿರ್ದೇಶಕರಾದ ಶ್ರೀ ಸಿ.ಪಿ ವಿಜಯ್ ರವರ ಅಧ್ಯಕ್ಷತೆಯಲ್ಲಿ ಬೆಂಗಳೂರು ವಿಭಾಗೀಯ ಅಧಿಕಾರಿಯಾದ ಶ್ರೀ ಶ್ರೀಧರ್ ಎಸ್ ರವರ ಉಪಸ್ಥಿತಿಯಲ್ಲಿ ಜನರಕ್ಷಾ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿ., ತುಮಕೂರು ಇದರ ಆಡಳಿತ ಮಂಡಳಿ ನಿರ್ದೇಶಕರ ಸಭೆಯನ್ನು ಕರೆಯಲಾಯಿತು. ಸಭೆಯಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಉಮಾಪತಿ ರವರು ಹಾಗೂ ಸಹಕಾರಿಯ ಮುಖ್ಯಕಾರ್ಯನಿರ್ವಾಹಕಿಯಾದ ಶ್ರೀಮತಿ ಉಷಾರಾಣಿ ರವರು ಸಂಘದ ಆರ್ಥಿಕ ಮಾಹಿತಿ ವರದಿ ಸಲ್ಲಿಸಿದರು ಹಾಗೂ ಕಾರ್ಯಚಟುವಟಿಕೆಗಳ ಬಗ್ಗೆ ಮಾಹಿತಿ ನೀಡಿದರು. ಈ ಸಂದರ್ಭದಲ್ಲಿ ಸಹಕಾರಿಯ ನಿರ್ದೇಶಕರಾದ ಶ್ರೀ ಶಿವಶಂಕರಯ್ಯ ರವರು ಸಂಯುಕ್ತ ಸಹಕಾ–ರಿಗೆ ನೀಡಿರುವ ದೂರಿನಲ್ಲಿರುವ ಅಂಶಗಳ ಬಗ್ಗೆ ಚರ್ಚಿಸಲಾಯಿತು. ಪ್ರಸ್ತುತ ಸಹಕಾರಿಯಲ್ಲಿ ಉಂಟಾಗಿರುವ ಆಂತರಿಕ ಸಮಸ್ಯೆಗಳ ಬಗ್ಗೆ ಚರ್ಚಿಸಿ ಅಗತ್ಯ ಮಾರ್ಗದರ್ಶನ ನೀಡಲಾಯಿತು. ಈ ಸಂದರ್ಭದಲ್ಲಿ ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಉಮೇಶ್ ಎ.ಎಸ್ ರವರು ಉಪಸ್ಥಿತರಿದ್ದರು.

ದಿನಾಂಕ 22.07.2025ರಂದು ಶ್ರೀ ಶಿವಶಕ್ತಿ ಸೌಹಾರ್ದ ಸಹಕಾರಿ ಸಂಘ ನಿ, ತುಮಕೂರು ಸಹಕಾರಿಯ ಆಡಳಿತ ಮಂಡಳಿ ಸದಸ್ಯರ ಸಭೆಯನ್ನು ತುಮಕೂರು ಜಿಲ್ಲಾ ಸಂಪರ್ಕ ಕಛೇರಿಯಲ್ಲಿ ಆಯೋಜಿಸಲಾಗಿತ್ತು. ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಸಿ.ಪಿ. ವಿಜಯ್ ರವರು ವಹಿಸಿದ್ದರು. ಸಭೆಯಲ್ಲಿ ಸಹಕಾರಿ ಆರ್ಥಿಕ ಸ್ಥಿತಿಗತಿ ಹಾಗೂ ಸೌಹಾರ್ದ ನ್ಯಾಯಾಲಯದಲ್ಲಿ ದಾಖಲಾಗಿರುವ ಸಹಕಾರಿಯ ದಾವೆಗಳ ಬಗ್ಗೆ ಚರ್ಚಿಸಿ ಅಗತ್ಯ ಮಾರ್ಗದರ್ಶನ ನೀಡಿದರು. ಈ ಸಂದರ್ಭದಲ್ಲಿ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಉಮೇಶ್ ಎ.ಎಸ್. ರವರು ಉಪಸ್ಥಿತರಿದ್ದರು.

# ಕಾರ್ಪೋರೇಟ್ ಆಡಳಿತ (Governance) ಮತ್ತು ಸಹಕಾರ

– ಶ್ರೀ ಶಶಿಧರ. ಎಲೆ, ಸಹಕಾರ ಸಂಘಗಳ ಅಪರ ನಿಬಂಧಕರು (ನಿವೃತ್ತ), ಬೆಂಗಳೂರು

ರಾಷ್ಟ್ರದ ಮತ್ತು ವಿಶ್ವದ ಆರ್ಥಿಕ ಬೆಳವಣಿಗೆಯಲ್ಲಿ ಖಾಸಗಿ ವಲಯ ಅದರಲ್ಲಿಯೂ ಎಲ್.ಪಿ.ಜಿ (Liberalisation, Privitas-tion, Globalization) ಪರಿಸರದಲ್ಲಿ ನಾಗಾಲೋಟದಲ್ಲಿ ಬೆಳೆಯುತ್ತಿದೆ. ಇದರ ಪರಿಣಾಮ ಸಂಪತ್ತು ಬೆಳೆಯುತ್ತಿದೆ. ಅದರೊಡನೆ 'ಉಳ್ಳವರು' ಮತ್ತುಇಲ್ಲದವರ ನಡುವಿನ ಅಂತರ ಕೂಡ ಅಗಾದವಾಗಿ ಬೆಳೆಯುತ್ತಿದ್ದು ಸಮಾಜದಲ್ಲಿ ಅನೇಕ ದುಷ್ಕೃತ್ಯ, ಅಜಾಗೂರುಕತೆ, ಅಕ್ಷೋಭೆಗೆ ಕಾರಣವಾಗುತ್ತಿದೆ. ವಿಶ್ವದ ಧ್ಯೇಯ ಸಮತಾ ಸಮಾಜ ನಿರ್ಮಾಣದ ಮೂಲಕ ಸುಸ್ಥಿರ ಅಭಿವೃದ್ಧಿ ಸಾಧಿಸುವುದಾಗಿದೆ. ಈ ಉದ್ದೇಶ ಸಾಧನೆಗೆ 'ಸಹಕಾರ ಚಳುವಳಿ' ಅತ್ಯುತ್ತಮ ಮಾರ್ಗ ಎಂಬುದನ್ನು 'ವಿಶ್ವ ಸಂಸ್ಥೆ'ಯೂ ಕಂಡುಕೊಂಡಿದೆ. ಈ ದಿಶೆಯಲ್ಲಿ ಅದು 2025 ನೇ ವರ್ಷವನ್ನು 'ಅಂತರಾಷ್ಟ್ರೀಯ ಸಹಕಾರ ವರ್ಷ' ವಾಗಿ ಘೋಷಿಸಿದೆ. ಕಾರ್ಪೋರೇಟ್ ಸಂಸ್ಥೆಗಳು ಬೆಳೆದಂತೆ ಸಹಕಾರ ಸಂಸ್ಥೆಗಳು ಬೆಳೆಯುತ್ತಿಲ್ಲವೇಕೆ? ಬೆಳೆಯಲು ಅನುಸರಿಸ ಬೇಕಾದ ಆಡಳಿತ ಕ್ರಮಗಳೇನು? ಈ ವಿಶ್ಲೇಷಣೆ ಯನ್ನು ಸಹಕಾರ ಸಂಸ್ಥೆಗಳು ಕೈಗೊಳ್ಳಬೇಕಿದೆ. ಇದು ಈ ದಿನದ ಅವಶ್ಯತೆ. ಕಾರ್ಪೋರೇಟ್ ಆಡಳಿತ ಅಥವ ಅತ್ಯುತ್ತಮ ಆಡಳಿತ ಸೂತ್ರಗಳನ್ನು ಅಳವಡಿಸಿಕೊಂಡಿದ್ದೇ ಆದಲ್ಲಿ ಸಹಕಾರ ಸಂಸ್ಥೆಗಳು ಯಶಸ್ವಿಯಾಗಿ ನಡೆದು ಸಮತಾ ಸಮಾಜ ನಿರ್ಮಾಣಕ್ಕೆ ತನ್ಮೂಲಕ ಸುಸ್ಥಿರ ಅಭಿವೃದ್ಧಿಗೆ ಕಾರಣವಾಗಬಹುದು.

ಅತ್ಯುತ್ತಮ ಆಡಳಿತ (Good Governance) ಅಥವಾ ಆಕಾರ್ಪೋರೇಟ್ ಆಡಳಿತ ಮೂಲ ಸೂತ್ರ ಗಳನ್ನು ಅರಿಯುವ ಮುನ್ನ ಸಹಕಾರ ಸಂಸ್ಥೆಗಳು ಪ್ರಜಾಸತ್ತಾತ್ಮಕ ಹತೋಟಿ ಯಿಂದ ನಡೆಯುವ ಸದಸ್ಯರ ಸಂಸ್ಥೆಗಳು, ಚುನಾವಣೆ ಮೂಲಕ 'ಆಡಳಿತ ಮಂಡಳಿ' ರಚನೆಯಾಗುತ್ತದೆ. ಇವರ ನಡುವಿನ ಚುನಾವಣೆಯಿಂದ ಪದಾಧಿಕಾರಿಗಳು 'ಅಧ್ಯಕ್ಷರು, ಉಪಾಧ್ಯಕ್ಷರು' ಆಯ್ಕೆಗೊಳ್ಳುತ್ತಾರೆ.

ಇವರು ಸದಸ್ಯರ ಅವಶ್ಯಕತೆ, ನಿರೀಕ್ಷೆ, ಆಶೋತ್ತರಗಳ ಈಡೇರಿಕೆ ಮಾಡುತ್ತಾರೆ. ಇದರಂತೆ ಸಹಕಾರ ಸಂಸ್ಥೆಗಳು 'ಸದಸ್ಯ ಚಾಲಿತ' ಸಂಸ್ಥೆಗಳಾಗಿ ನಡೆಯುತ್ತವೆ ಎಂಬುದು ಪ್ರಮುಖ ಆಶಯ. ಈ ಆಶಯದ ಈಡೇರಿಕೆಗಾಗಿ ಅತ್ಯುತ್ತಮ ಆಡಳಿತದ ಮೂಲ ಸೂತ್ರಗಳನ್ನು ಆಡಳಿತ ಮಂಡಳಿ ಪಾಲಿಸಬೇಕಾದ ಅವಶ್ಯಕತೆ ಇದೆ.

**ಅತ್ಯುತ್ತಮ ಆಡಳಿತ ಸೂತ್ರಗಳು** : (1) ಪಾರದರ್ಶಕತೆ (2) ಪಾಲ್ಗೊಳ್ಳುವಿಕೆ (3) ಮುಂದಾಲೋಚನೆ / ದೂರಾಲೋಚನೆ (4) ಉತ್ತರದಾಯಿತ್ವ/ಹೊಣೆಗಾರಿಕೆ ಈ ನಾಲ್ಕು ಮೂಲ ಸೂತ್ರಗಳನ್ನು ಅತ್ಯುತ್ತಮ ಆಡಳಿತ ಅಥವ ಕಾರ್ಪೋರೇಟ್ ಆಡಳಿತದ ನಾಲ್ಕು ಆಧಾರ ಸ್ಥಂಭಗಳು ಎಂದು ಪರಿಗಣಿಸಲಾಗಿದೆ. ಈ ಆಡಳಿತ ಸೂತ್ರಗಳನ್ನು ಮೇಳೈಸಿ ಸಹಕಾರ ಸಂಸ್ಥೆಗಳಲ್ಲಿ ಸಹಕಾರ ಆಡಳಿತ ವನ್ನು ಅತ್ಯುತ್ತಮ ಸಹಕಾರ ಆಡಳಿತ ವಾಗಿ ರೂಪಿಸುವುದು ಈ ದಿನದ ಅವಶ್ಯಕತೆಯೂ, ಅನಿವಾರ್ಯವೂ ಆಗಿದೆ ಎಂದರೆ ತಪ್ಪಾಗಲಾರದು.

**(1) ಪಾರದರ್ಶಕತೆ (Transparency):** ಆಡಳಿತ ಮಂಡಳಿ ತಾನು ತೆಗೆದುಕೊಳ್ಳುವ ನಿರ್ಧಾರಗಳು, ಕೈಗೊಳ್ಳುವ ಯೋಜನೆಗಳು ಪಾರದರ್ಶಕತೆಯಿಂದ ಕೂಡಿರಬೇಕು. ಇದರಿಂದ ಆಡಳಿತ ಮಂಡಳಿಯು ಪ್ರಾಮಾಣಿಕ, ದಕ್ಷ, ಹಾಗೂ ಕ್ರಿಯಾಶೀಲ ಆಡಳಿತವನ್ನು ನಡೆಸುತ್ತಿದೆ ಎಂದು ಗೋಚರವಾಗುತ್ತದೆ. ಆಡಳಿತ ಮಂಡಳಿ ಸಭೆಗಳು ಕೇವಲ ಔಪಚಾರಿಕೆ ಸಭೆಗಳಾಗದೆ 'ಕ್ರಿಯಾಶೀಲ' ಸಭೆಯಾಗಿ ಅದರ ನಡವಳಿಕೆ ಗಳು ಅನುಷ್ಠಾನಗೊಂಡು ಸದಸ್ಯೋಪಯೋಗಿ ಪರಿವರ್ತನೆ ಗೊಳ್ಳಬೇಕು. ಉದಾಹರಣೆಗೆ ಯಂತ್ರೋಪಕರಣಗಳ ಖರೀದಿ, ಕಂಪ್ಯೂಟರೀಕರಣ, ಸಿಬ್ಬಂದಿ ನೇಮಕಾತಿ, ಕಟ್ಟಡ ನಿರ್ಮಾಣ, ರಿಪೇರಿ, ಕಟ್ಟಡ ಖರೀದಿ, ಮಾರಾಟ, ಸಾಲ ಮಂಜೂರಾತಿ ,ಇತರೆ., ಟೆಂಡರ್ ಕರೆಯುವುದು, ಜಾಹಿರಾತು ನೀಡುವುದು, ಸಾಕಷ್ಟು ಪ್ರಚಾರ ಪಡಿಸುವುದು. ಈ ಮೂಲಕ ಅತುತ್ತಮ ಗುತ್ತಿಗೆದಾರರ ಆಯ್ಕೆ, ಸಿಬ್ಬಂದಿ ನೇಮಕಾತಿ ಸರಬರಾಜುದಾರರ, ಸೇವೆ ಸಲ್ಲಿಸುವವರಿಗೆ ಅವಕಾಶ ಒದಗಿಸುವುದು. ಇದರಿಂದ ಸದಸ್ಯರು ಮತ್ತು ಸಾರ್ವಜನಿಕರಲ್ಲಿ ಸಹಕಾರ ಸಂಸ್ಥೆ ಬಗ್ಗೆ ಸದಭಿಪ್ರಾಯ ಮೂಡುತ್ತದೆ. ಸದಸ್ಯರಿಗೆ ಅತ್ಯುತ್ತಮ ಸೇವೆ ದೊರೆಯುತ್ತದೆ.

**(2) ಪಾಲ್ಗೊಳ್ಳುವಿಕೆ (Participation) :** ಸದಸ್ಯರು, ಆಡಳಿತ ಮಂಡಳಿ, ಸಿಬ್ಬಂದಿ ವರ್ಗ, ಸರಬರಾಜುದಾರರು / ಗುತ್ತಿಗೆದಾರರು/ ಗ್ರಾಹಕರು ಇವರುಗಳು ಸಹಕಾರ ಸಂಸ್ಥೆಯ ಭಾಗೀದಾರರು (stake holders) ಆಗಿರುತ್ತಾರೆ. ಇವನೆಲ್ಲರನ್ನೂ ಒಳಗೊಂಡು , ಪಾಲ್ಗೊಳ್ಳುವಂತೆ ಮಾಡಿ ನಿರ್ಧಾರಗಳನ್ನು ತೆಗೆದುಕೊಂಡಲ್ಲಿ ಅದರ ಅನುಷ್ಠಾನ ಸುಲಭ ಸಾಧ್ಯವಾಗುತ್ತದೆ. ಇದನ್ನು 'ಪಾಲ್ಗೊಳ್ಳುವಿಕೆಯ ವ್ಯವಸ್ಥಾಪನೆ' (partpa-tive Management) ಎನ್ನಲಾಗುತ್ತದೆ. ಯಾವುದೇ ಯೋಜನೆಯ ಅನುಷ್ಠಾನ / ಕಾರ್ಯಗತ ಗೊಳಿಸುವಲ್ಲಿ' ಅವರನ್ನೂ 'ಒಳಗೊಳ್ಳುವಂತೆ ಮಾಡಲು ಸಾಧ್ಯವಾಗುತ್ತದೆ. ಆಡಳಿತ ಮಂಡಳಿ ನಿರ್ಧಾರ ತೆಗೆದುಕೊಳ್ಳುವ ಪೂರ್ವದಲ್ಲಿ ಕ್ರಿಯಾಶೀಲ ಸದಸ್ಯರ/ ಸಕ್ರಿಯ ಸದಸ್ಯರ / ವಿಶೇಷ ಮಹಾಸಭೆ ಕರೆಯುವುದು, ಗ್ರಾಹಕರ ಸಮಾವೇಷ , ಸಿಬ್ಬಂದಿ ಸಭೆಗಳಲ್ಲಿ ಪ್ರಸ್ತಾಪಿಸಿ ಅಭಿಪ್ರಾಯ ಸಂಗ್ರಹಣೆ, ಸುತ್ತೋಲೆ, ಪ್ರಕಟಣೆ ಮೂಲಕ ಸಲಹೆ, ಸೂಚನೆಗಳನ್ನು ಪಡೆಯುವುದು. ಅಭಿಪ್ರಾಯಗಳನ್ನು

ಸಕಾರಾತ್ಮಕವಾಗಿ ಸ್ವೀಕರಿಸುವುದು. ಇದರಿಂದ ನಿರ್ಧಾರ ತೆಗೆದುಕೊಳ್ಳುವಲ್ಲಿ ಎಲ್ಲ ಭಾಗೀಧಾರವನ್ನು ಒಳಗೊಂಡಂತಾಗುತ್ತದೆ.

ಅನುಷ್ಠಾನಗೊಳ್ಳಬಲ್ಲ / ಕಾರ್ಯಗತಗೊಳ್ಳಬಲ್ಲ ಯೋಜನೆಯನ್ನು ರೂಪಿಸಲು ಸಾಧ್ಯವಾಗುತ್ತದೆ. ಎಲ್ಲ ಭಾಗೀದಾರರ ಬದ್ದತೆಯನ್ನು ಖಾತ್ರಿಗೊಳಿಸಿಕೊಳ್ಳಲು ಸಾಧ್ಯವಾಗುತ್ತದೆ.

**(3) ಮುಂದಾಲೋಚನೆ/ದೂರಾಲೋಚನೆ (Predicability) :** ಇದು ಉತ್ತಮ ನಾಯಕತ್ವದ ಗುಣ . ಆಡಳಿತ ಮಂಡಳಿ ಸದಸ್ಯ / ನಿರ್ದೇಶಕರು ಸದಸ್ಯರ 'ನಾಯಕರು' ಸದಸ್ಯರಿಂದ ಸದಸ್ಯರಿಗಾಗಿ ಚುನಾಯಿತಗೊಂಡು ಆಡಳಿತದ ಚುಕ್ಕಾಣಿ ಹಿಡಿದವರು. ತಾವು ಯಾವುದೇ ನಿರ್ಧಾರ ತೆಗೆದು ಕೊಂಡರೆ ಅದರ ದೂರಗಾಮಿ ಪರಿಣಾಮಗಳ ಬಗ್ಗೆ ಆಲೋಚಿಸಬೇಕಾಗುತ್ತದೆ. ಉದಾ: ಠೇವಣಿಗಳ ಸಂಗ್ರಹಣೆಯಿಂದ ಕಟ್ಟಡ ನಿರ್ಮಾಣ, ಠೇವಣಿಗಳನ್ನು ಬಡ್ಡಿ ಸಹಿತ ಹಿಂತಿರುಗಿಸುವ ಬಗೆ ಹೇಗೆ? ಕಟ್ಟಡದಿಂದ ಅಷ್ಟು ಹುಟ್ಟುವಳಿ ಸಾಧ್ಯವೇ?, ಅಧಿಕ ಬಡ್ಡಿ ಅವಧಿ ಠೇವಣಿ ಸಂಗ್ರಹಣೆ , ಅದರ ಮೇಲೆ ನಿಧಿಗಳ ಮೇಲಿನ ವೆಚ್ಚದ ಮೇಲಿನ ಪರಿಣಾಮ. ಸಾಲ ನೀಡಿಕೆ, ಹೂಡಿಕೆ ಮೇಲೆ ಗಳಿಸಬಹುದಾದ ಗಳಿಕೆ ಎಷ್ಟು ? ಅಂತರ ಸಾಧ್ಯವೇ? ಅಲ್ಪ ಜೀವಿತಾವಧಿ ವಸ್ತುಗಳ ಖರೀದಿ ಮಾರಾಟ ಆಗಬಹುದಾದ ಲಾಭ/ನಷ್ಟಗಳ ಲೆಕ್ಕಾಚಾರ. ಕೃಷಿ ಉತ್ಪನ್ನಗಳ ಸಂಗ್ರಹಣೆ ಮಾರಾಟ ಇತರೆ. ಸಹಕಾರ ಸಂಸ್ಥೆ ಮುಂದೆ ನಷ್ಟಕ್ಕೆ ಈಡಾಗದಂತೆ, ಅದರ ನಿಧಿಗಳು ಸವಕಳಿ ಯಾಗದಂತೆ ತೀರ್ಮಾನಗಳನ್ನು ತೆಗೆದುಕೊಳ್ಳಬೇಕು.

ಬಂಡವಾಳದ ಹಿಂತಿರುಗುವಿಕೆ (Return of Capital), ಬಂಡವಾಳದಿಂದ ಗಳಿಕೆ (Return from Capital), ಬಂಡವಾಳಕ್ಕೆ ಬಂಡವಾಳ ಸೇರ್ಪಡೆ (Return to Capital) ನ್ನು ಖಾತ್ರಿ ಗೊಳಿಸಿಕೊಳ್ಳಬೇಕಾಗುತ್ತದೆ. ಆಡಳಿತ ಮಂಡಳಿ ವಿವೇಚನಯುತವಾದ, ಸದಸ್ಯರ ಒಳಿತಿಗಾಗಿ, ಸಹಕಾರ ಸಂಸ್ಥೆಯು ಶಾಶ್ವತವಾಗಿ ನೆಲೆಗೊಳ್ಳುವಂತ ಮುಂದಿನ ಪೀಳಿಗೆಗೂ ಉಪಯುಕ್ತವಾಗಬಲ್ಲ ಸಂಸ್ಥೆಯಾಗಿ ರೂಪುಗೊಳ್ಳಲು ಸಾಧ್ಯವಾಗುವಂತಹ ತೀರ್ಮಾನ/ನಿರ್ಧಾರಗಳನ್ನು ತೆಗೆದುಕೊಳ್ಳಬೇಕು.

**(4) ಉತ್ತರದಾಯಿತ್ವ / ಹೊಣೆಗಾರಿಕೆ (Accountability):** ಆಡಳಿತ ಮಂಡಳಿ ಸದಸ್ಯರು / ನಿರ್ದೇಶಕರು ಸದಸ್ಯರಿಗೆ ಹೊಣೆಗಾರರು ಎಂಬ ಜವಾಬ್ದಾರಿಯುತ ಅರಿವು ಅವರಲ್ಲಿ ಇರತಕ್ಕದ್ದು. ಆಡಳಿತ ಮಂಡಳಿ ಸಾಮಾನ್ಯ ನಿಕಾಯಕ್ಕೆ ಜವಾಬ್ದಾರಿ. ಸಹಕಾರಿ ಸಂಸ್ಥೆಯ 'ಯಜಮಾನರು' ಸದಸ್ಯರು. ಸದಸ್ಯರು ಒಟ್ಟುಗೂಡಿ 'ಸ್ವಸಹಾಯ ಮತ್ತು ಪರಸ್ಪರ ಸಹಾಯ' ಆಧಾರಿತವಾಗಿ ತಮ್ಮ ಅವಶ್ಯಕತೆಗಾಗಿ ತಾವು ಸ್ಥಾಪಿಸಿಕೊಂಡಿರುವ ಸಂಸ್ಥೆ ಇದು. ಅವಶ್ಯ ವ್ಯವಹಾರ ನಡೆಸಲು ಅನುಕೂಲವಾಗುವಂತೆ ತಮ್ಮಲ್ಲಿ ತಾವು ತಮ್ಮ ಪ್ರತಿನಿಧಿಗಳಾಗಿ ಪ್ರಜಾಸತ್ತಾತ್ಮಕ ನಿಯಂತ್ರಣ/ಆಡಳಿತಕ್ಕಾಗಿ ಆಯ್ಕೆ ಮಾಡಲಾಗಿರುತ್ತದೆ.

ಆದುದರಿಂದ ತಾವು ನಿರ್ದೇಶಕರಾಗಿ ಸದಸ್ಯರಿಗೆ ಹೊಣೆಗಾರರು ಎಂಬ ಅರಿವು ಇರತಕ್ಕದ್ದು. ಈ ಅರಿವಿನಿಂದ ತಮ್ಮಲ್ಲಿ ಜವಾಬ್ದಾರಿ ಮೂಡಿ ಸ್ವ ಹಿತಾಸಕ್ತಿ, ಹಿತಾಸಕ್ತಿ ಸಂಘರ್ಷ, ಅಪ್ರಮಾಣಿಕತೆಗಳಿಗೆ ಅವಕಾಶವಿಲ್ಲದಂತೆ ವರ್ತಿಸಲು ಸದಾ ಸದಸ್ಯರ ಹಿತಾಸಕ್ತಿಗೆ ಪೂರಕವಾಗಿ ವರ್ತಿಸಲು ಸಾಧ್ಯವಾಗುತ್ತದೆ. ಸಹಕಾರ ಸಂಸ್ಥೆಯನ್ನು ಲಾಭದಾಯಕವಾಗಿ ನಡೆಸಿ ಸದಸ್ಯರಿಗೆ ಲಾಭಾಂಶ (Dividend) ವಿತರಿಸುವ, ಸಿಬ್ಬಂದಿ ವರ್ಗದವರಿಗೆ ವೇತನ ದೊರೆಯುವಂತೆ ಮಾಡುವ, ಠೇವಣಿದಾರರಿಗೆ ಸಕಾಲದಲ್ಲಿ ಠೇವಣಿ ಹಿಂತಿರುಗಿಸುವ, ಸಾಲ ಅವಶ್ಯವುಳ್ಳ ಸದಸ್ಯರಿಗೆ ಸಾಲ ವಿತರಿಸುವ, ಸಾಲಗಾರ ಸದಸ್ಯರಿಂದ ಸಕಾಲದಲ್ಲಿ ಬಡ್ಡಿ ಸಹಿತ ಸಾಲ ವಸೂಲಿ ಮಾಡುವ ಜವಾಬ್ದಾರಿ ತಮ್ಮದಾಗಿದೆ ಎಂಬ ಹೊಣೆಗಾರಿಕೆಯನ್ನು ಆಡಳಿತ ಮಂಡಳಿ ಹೊಂದಿರ ತಕ್ಕದ್ದು. ಇದರಿಂದ ಸೂಕ್ತ ನಿರ್ಧಾರಗಳನ್ನು ಸಕಾಲದಲ್ಲಿ ತೆಗೆದುಕೊಂಡು ಸಹಕಾರ ಸಂಸ್ಥೆಯನ್ನು ಯಶಸ್ವಿಯಾಗಿ, ಸದಸ್ಯ ಸ್ನೇಹಿಯಾಗಿ ನಡೆಸಲು ಸಾಧ್ಯವಾಗುತ್ತದೆ.

ಸಹಕಾರ ಸಂಸ್ಥೆಯಾಗಿ ಈ ಮೇಲಿನ ಅತ್ಯುತ್ತಮ ಮೂಲ ಸೂತ್ರಗಳಲ್ಲದೇ ಸಹಕಾರ ಮೌಲ್ಯಗಳು ಮತ್ತು ಸಹಕಾರ ತತ್ವಗಳನ್ನು ಈ ಸೂತ್ರಗಳೂಡನೆ ಮೇಳೈಸಿ ಆಡಳಿತ ಮಂಡಳಿಯು ಸೂಕ್ತ ನಿರ್ಧಾರಗಳನ್ನು/ತೀರ್ಮಾನಗಳನ್ನು ತೆಗೆದುಕೊಳ್ಳುವ ಅವಶ್ಯಕತೆ ಇದೆ.

ಸಹಕಾರ ಮೌಲ್ಯಗಳು:

1) **ಸ್ವಸಹಾಯ ಮತ್ತು ಪರಸ್ಪರ ಸಹಾಯ :** ಈ ಮೌಲ್ಯ ಸಹಕಾರದ ತಿರುಳು. ಭವಿಷ್ಯಕ್ಕಾಗಿ ನಿಧಿ ಉಳಿತಾಯ, ಲಾಭಾಂಶದ ಸೀಮಿತ ವಿತರಣೆ, ಶಕ್ತರಿಂದ ಠೇವಣಿ ಸಂಗ್ರಹಣೆ ಅವಶ್ಯವಿರುವವರಿಗೆ ಸಾಲ, ಮುಂತಾದುವು ಪ್ರಮುಖ ಅಂಶಗಳು ಈ ಮೌಲ್ಯ ಪಾಲನೆ ಅತಿ ಅಗತ್ಯ.

(2) **ಸ್ವಯಂ ಜವಾಬ್ದಾರಿ:** ಸಹಕಾರ ಸಂಸ್ಥೆಯ ಎಲ್ಲ ಭಾಗೀದಾರರು ಸ್ವಯಂ ತಮ್ಮ ತಮ್ಮ ಜವಾಬ್ದಾರಿ ಅರಿತು ನಡೆದರೆ ಸಂಸ್ಥೆ ಯಶಸ್ವಿಯಾಗಿ ನಡೆಯುವುದರಲ್ಲಿ ಸಂಶಯವಿಲ್ಲ.

(3) **ಪ್ರಜಾಪ್ರಭುತ್ವ:** ಸಂಸ್ಥೆಯ ಮೂಲ ಲಕ್ಷಣ, ರಚನಾ ಮತ್ತು ನಿಯಂತ್ರಣ ವ್ಯವಸ್ಥೆ , ಖಾಸಗಿ ಯಾ ಕಂಪನಿ ಮತ್ತು ಸಹಕಾರ ಆಡಳಿತ ವ್ಯವಸ್ಥೆಯಲ್ಲಿನ ವ್ಯತ್ಯಾಸ. ಪ್ರಜ್ಞಾವಂತ ಸದಸ್ಯರು ಜವಾಬ್ದಾರಿಯುತ ಆಡಳಿತ ಮಂಡಳಿ ರಚಿಸುವ ಜವಾಬ್ದಾರಿಯನ್ನು ಹೊಂದಿರುತ್ತಾರೆ.' ಕಾರ್ಪೋರೇಟ್ ಆಡಳಿತ ಒದಗಿಸುವುದು ಇವರ ಜವಾಬ್ದಾರಿ.

(4) **ಸಮಾನತೆ, ಬಂಡವಾಳ, ಮತ್ತು ಒಗ್ಗಟ್ಟು:** ಸದಸ್ಯರಾಗಿ ಎಲ್ಲರೂ ಸಮಾನರು, ಒಬ್ಬ ಸದಸ್ಯ ಒಂದು ಮತ. ಬಂಡವಾಳ ವಿಲ್ಲದೇ ವ್ಯವಹಾರ ನಡೆಸಲಾಗುವುದಿಲ್ಲ. ಇದು ಮೌಲ್ಯಯುತವಾದ

ಸ್ವಾಭಿಮಾನಿ ಸಹಕಾರಿ

Swabhimani Sahakari, Kannada, English Monthly, Publishing Date 5th, Posting Day 8th
posted at Bangalore PSO, Mysore Road, Bangalore-560026
Registered No. KA/BGW/1744/2023-2025 RNI NO. KARBIL-2004/18001/Pages 42
Licensed to post without Prepayment License No. PMG BG/WPP-384/2023-2025.

ಬಂಡವಾಳ, ಶ್ರಮದಿಂದ ಸಂಗ್ರಹಿಸಿದ ಬಂಡವಾಳ ಇದನ್ನು ರಕ್ಷಿಸುವುದು, ಉಳಿಸುವುದು, ಬೆಳೆಸುವುದು ಅತ್ಯಂತ ಪ್ರಮುಖ ಅಂಶ.

ಒಗ್ಗಟ್ಟು ಸಂಸ್ಥೆ ಬೆಳೆಸುವಲ್ಲಿ ಅತ್ಯಮೂಲ್ಯ ಅಂಶ. ಒಗ್ಗಟ್ಟಿನಲ್ಲಿ ಬಲವಿದೆ ಎಂಬುದನ್ನು ಮರೆಯಲಾಗದು.

**ಸಹಕಾರ ತತ್ವಗಳು :**

(1) **ಸ್ವಯಂ ಪ್ರೇರಿತ ಮತ್ತು ಮುಕ್ತ ಸದಸ್ಯತ್ವ :** ಸರ್ವರನ್ನೂ ಒಳಗೊಳ್ಳುವ ಪ್ರಕ್ರಿಯೆ, ಸದಸ್ವತ್ವ ನೀಡುವುದು ಆಡಳಿತ ಮಂಡಳಿಯಲ್ಲಿ ನಿಹಿತ ಅಧಿಕಾರ. ಸಂಸ್ಥೆಯ ಉದ್ದೇಶಗಳ ಈಡೇರಿಕೆಗೆ ಸಂಬಂಧಿಸಿದಂತೆ ಸದಸ್ಯತ್ವದ ಅರ್ಹತೆ ನಿಗದಿ ಪಡಿಸಲಾಗಿರುತ್ತದೆ. ಯಾವುದೇ ರಾಗದ್ವೇಷಕ್ಕೆ ಒಳಗಾಗದೇ ಅರ್ಹರೆಲ್ಲರಿಗೂ ಮುಕ್ತವಾಗಿ ಸದಸ್ಯತ್ವ ನೀಡುವುದು.

(2) **ಪ್ರಜಾಸತ್ತಾತ್ಮಕ ಸದಸ್ಯ ಹತೋಟಿ / ನಿಯಂತ್ರಣ :** ಸಕಾಲದಲ್ಲಿ ಚುನಾವಣೆಗಳನ್ನು ನಡೆಸುವುದು ಆಡಳಿತ ಮಂಡಳಿ ಜವಾಬ್ದಾರಿ. ಸಕಾರಣವಿಲ್ಲದೆ ಮುಂದೂಡುವುದು, ರದ್ದು ಮಾಡುವುದು, ನಡೆಸದೆ ಇರುವುದು, ಆಡಳಿತ ಮಂಡಳಿ ರದ್ಧತಿಗೆ ಕಾರಣವಾಗುವುದು ಉತ್ತಮ ಪ್ರಜಾಪ್ರಭುತ್ವದ ಲಕ್ಷಣವಲ್ಲ.

(3) **ಆರ್ಥಿಕ ಚಟುವಟಿಕೆಯಲ್ಲಿ ಸದಸ್ಯರ ಪಾಲ್ಗೊಳ್ಳುವಿಕೆ :** ಇದರ ಹೆಚ್ಚಳಗೊಳ್ಳುವಿಕೆ ಯಿಂದ ವ್ಯವಹಾರದ ಗಾತ್ರ ಹೆಚ್ಚುತ್ತದೆ. ಲಾಭದಾಯಕತೆ ಹೆಚ್ಚುತ್ತದೆ. ಆಡಳಿತ ಮಂಡಳಿ ಇದರ ಈಡೇರಿಕೆಗಾಗಿ ಸೂಕ್ತ ಉತ್ತೇಜನ ಕಾರ್ಯಕ್ರಮಗಳನ್ನು ಕೈಗೊಳ್ಳುವುದು.

(4) **ಸ್ವಾಯುತ್ತತೆ ಮತ್ತು ಸ್ವಾತಂತ್ರ್ಯ :** ಆಡಳಿತ ಮಂಡಳಿ ಸದಸ್ಯ ಕೇಂದ್ರಿಕೃತ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಯಾವುದೇ ಅಡಚಣೆಯಿಲ್ಲ ಆದರೆ ಸ್ವೇಚ್ಚಾಚ್ಚಾರಕ್ಕೆ ಎಡೆಯಾಗಬಾರದು.

(5) **ಶಿಕ್ಷಣ, ತರಬೇತಿ, ಪ್ರಚಾರ :** ಸಹಕಾರ ಚಳುವಳಿ ಬೆಳೆಯಲು ಇದರ ಪ್ರಯೋಜನ ಪಡೆಯದ ಅನೇಕ ಅಗತ್ಯ ಜನರನ್ನು ಒಳಗೊಳ್ಳಲು ಅತಿ ಅಗತ್ಯ. ಆಡಳಿತ ಮಂಡಳಿ ಸದಸ್ಯ ಶಿಕ್ಷಣಕ್ಕೆ ಅತಿ ಹೆಚ್ಚಿನ ಮಹತ್ವವನ್ನು ನಿಡಬೇಕು.

(6) **ಸಹಕಾರ ಸಂಸ್ಥೆಗಳ ನಡುವೆ ಸಹಕಾರ :** ಸಹಕಾರದಲ್ಲಿನ ಬಂಡವಾಳದ ಕ್ರೋಡೀಕರಣಕ್ಕೆ ಇದು ಅಗತ್ಯ. ಬಹು ಹಂತದ ವ್ಯವಸ್ಥೆಯಲ್ಲಿ ಲಂಭ ರೇಖೆ (Verticle) ಯಲ್ಲಿ ಎಂದರೆ ವಿವಿಧ ಹಂತದ ಸಂಸ್ಥೆಗಳ ನಡುವೆ ಸಾವಯವ ಸಂಬಂಧ, ಒಂದೊಕ್ಕೊಂದು ಪೂರಕವಾಗಿ ಕರ್ತವ್ಯ ನಿರ್ವಹಿಸುವ ಅಗತ್ಯತೆ. ಅಡ್ಡರೇಖೆ (Hori-zontal) ಒಂದೇ ಹಂತದ ವಿವಿಧ ರೀತಿಯ ಸಹಕಾರ ಸಂಸ್ಥೆಗಳ ನಡುವೆ ಸಹಕಾರ ಇದರಿಂದ ಬಂಡವಾಳ ವೃದ್ಧಿ ಸಾಧ್ಯ. ಅಂತಿಮವಾಗಿ 'ವ್ಯಕ್ತಿ' ಸದಸ್ಯರ ಅವಶ್ಯಕತೆಯ ಪೂರೈಕೆ ಸಾಧ್ಯವಾಗುತ್ತದೆ.

(7) **ಸಾಮಾಜಿಕ ಕಳಕಳಿ :** ಸಂಸ್ಥೆ ಸಮಾಜ/ ಸಮೂಹ ದ ಒಂದು ಭಾಗ, ತನ್ನ ಅಸ್ಥಿತ್ವವೇ ಸಮೂಹಕ್ಕಾಗಿ ಆದದರಿಂದ ತನ್ನ ಲಾಭದಲ್ಲಿ ಸಮಾಜ ಮುಖಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.

ಅತ್ಯುತ್ತಮ ಆಡಳಿತಕ್ಕೆ ಅವಶ್ಯ ಅಂಶಗಳನ್ನು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರಲ್ಲಿ ಕಲಂ 28 C ಯಲ್ಲಿ, ಕರ್ನಾಟಕ ಸೌಹಾರ್ದ ಕಾಯಿದೆ 1997 ರಲ್ಲಿ ಕಂ 27 ರಲ್ಲಿ ಸವಿವರವಾಗಿ ವಿವರಿಸಲಾಗಿದೆ ಮತ್ತು ಆಡಳಿತ ಮಂಡಳಿಗೆ ಜವಾಬ್ದಾರಿಗಳನ್ನು ನಿಗದಿ ಪಡಿಸಲಾಗಿದೆ. ಅದರಂತೆ ಆಡಳಿತ ಮಂಡಳಿ ಕಾರ್ಯವೆಸಗಿದಲ್ಲಿ ಸಹಕಾರ ಸಂಸ್ಥೆಗಳು ಯಶಸ್ಸುಗಳಿಸಿ ಸಹಕಾರ ಚಳುವಳಿಯ ಉದ್ದೇಶ ಸಫಲವಾಗುತ್ತದೆ.

**ಧರಣಿಯ ಮೇಲೊಂದು ಹಿರಿದಪ್ಪ ಅಂಗಡಿಯನಿಕ್ಕಿ**
**ಹರದ ಕುಳ್ಳಿರ್ದ ನಮ್ಮ ಮಹಾದೇವ ಸೆಟ್ಟಿ**
**ಒಮ್ಮನವಾದರೆ ಒಡನೆ ನುಡಿವನು, ಇಮ್ಮನವಾದರೆ ನುಡಿಯನು**
**ಕಾಣಿಯ ಸೋಲ, ಅರ್ಧ ಗಾಣಿಯ ಗೆಲ್ಲ;**
**ಜಾಣ ನೋಡವ್ವ ನಮ್ಮ ಕೂಡಲ ಸಂಗಮ ದೇವಾ**

**– ಬಸವಣ್ಣ.**

ಕೇಂದ್ರ ಕಛೇರಿ : "ಸೌಹಾರ್ದ ಸಹಕಾರಿ ಸೌಧ" ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕೇಂದ್ರ ಕಛೇರಿ, ಒಂದನೇ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರ, ಬೆಂಗಳೂರು – 560055 ದೂ : 080–23378375–80, 23474408, 23573291
ಸೌಹಾರ್ದ ಸಹಕಾರಿಗಳ ದಾವಾ ಪಂಚಾಯತಿ ನ್ಯಾಯಾಲಯ : "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕೇಂದ್ರ ಕಛೇರಿ, ಒಂದನೇ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರ, ಬೆಂಗಳೂರು ದೂ: 080–23449933/34
ಇ–ಸ್ಟಾಂಪಿಂಗ್ ವಿಭಾಗ : "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇ–ಸ್ಟಾಂಪಿಂಗ ವಿಭಾಗ, ನೆಲ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರ, ಬೆಂಗಳೂರು – 560055
ಬೆಂಗಳೂರು ಪ್ರಾಂತೀಯ ಕಛೇರಿ : "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಪ್ರಾಂತೀಯ ಕಛೇರಿ, ನೆಲ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರ, ಬೆಂಗಳೂರು – 560055 ದೂ: 080–23525546.
ಮೈಸೂರು ಪ್ರಾಂತೀಯ ಕಛೇರಿ : ಶಂಕರ ಮಠ ರಸ್ತೆ, 2ನೇ ಕ್ರಾಸ್, ನಟರಾಜ ಸಭಾಭವನದ ಹತ್ತಿರ, ಮೈಸೂರು–570004, ದೂ: 0821–2332299
ಬೆಳಗಾವಿ ಪ್ರಾಂತೀಯ ಕಛೇರಿ : #1119/ಬಿ, ಕಣಬರ್ಗಿ ಇಂಡಸ್ಟ್ರಿಯಲ್ ಏರಿಯಾ, ರೂರಲ್ ಆಯುರ್ವೇದಿಕ ಕಾಲೇಜ ಹತ್ತಿರ, ಆಟೋ ನಗರ, ಬೆಳಗಾವಿ–590015 ದೂರವಾಣಿ: 0831–2401551.
ಕಲಬುರಗಿ ಪಾಂತೀಯ ಕಛೇರಿ : # 2284, ಕಾಡಾ ಕಛೇರಿ ಹತ್ತಿರ, ಧರಿಯಾಪುರ ಕೊಟನೂರ, ಜಿಡಿಎ ಬಡಾವಣೆ, ಕಲಬುರಗಿ–585102. ದೂ: 08472–270222

Edited, Printed and Published by Sharangouda G. Patil - Managing Director, on behalf of karnataka state Souharda Federal Co operative Ltd., #68, 17th & 18th Cross, Margosa Road, Malleshwaram, Bengaluru-560 003